ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ : 7, ಸಂಚಿಕೆ : 1 ಜುಲೈ – ಸಪ್ಟೆಂಬರ್ 2018

Volume : 7, Issue : 1 July - September 2018

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 7, Issue 1, July - September 2018

Edited, Published, Printed & Owned by

Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size	:	Dy 1/8
Paper Used	:	70 GSM
Pages	:	70
Price	:	Rs. 50

Cover Photo by : **Atheetha Brahma**

Cover Design : **Kallur Nagesh**

Designed & Printed at :

Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ವೀರಶೈವರ ನಿರೂಪಣೆ : ಕಾದಂಬರಿಗಳ ಪಾತ್ರ**

❖ ಚೈತ್ರ / 5

2. **ಕಾರಂತ ಸಾಹಿತ್ಯ**
ಪರಿಸರ ವಿನಾಶ ಮತ್ತು ವಲಸೆ ರಾಜಕಾರಣ

❖ ದೇವು ಹನೆಹಳ್ಳಿ / 18

3. **ಸುಧಾರಣಾವಾದಿ ಚೌಕಟ್ಟಿನಲ್ಲಿ ರೂಪುತಳೆದ**
ಮಾಸ್ತಿಯವರ ಹಿಂದೂ ಧರ್ಮ

❖ ಡಾ. ಮಹೇಶ್ ಕುಮಾರ್ ಐ.ಎಸ್
❖ ರಮೇಶ್ ಈ / 38

4. **ಉನ್ನತ ಶಿಕ್ಷಣದ ಧ್ಯೇಯವು**
ರಾಜಕೀಯ ಐಡಿಯಾಲಜಿಗಳ ಸಮರ್ಥನೆಯೇ?

❖ ಡಾ. ಪ್ರವೀಣ ಟಿ. ಎಲ್. / 44

5. **ಕನ್ನಡ ಗಾದೆಗಳ ಬಗ್ಗೆ**

❖ ಡಾ. ಬಿ.ವಿ. ಮಹೀದಾಸ / 49

6. **ಭಾರತ ಗಣರಾಜ್ಯೋತ್ಸವ**
ಒಂದು ಐತಿಹಾಸಿಕ ಸಂವಿಧಾನಿಕ ಮೈಲಿಗಲ್ಲು

ರೊನಾಲ್ಡ್ ಪ್ರವೀಣ್ ಕೊರೆಯ / 65

ಸಂಪಾದಕೀಯ

ದೊಡ್ಡ ಲೇಖಕರ ಕೃತಿಗಳ ಸಮಗ್ರ ಅಧ್ಯಯನಗಳು ನಡೆಯುತ್ತವೆಯಾದರೂ, ಬಹಳ ಸಲ ವರ್ತಮಾನದ ರಾಜಕೀಯ ಸಾಮಾಜಿಕ ಸಿದ್ಧಾಂತಗಳಿಗೆ ಬದ್ಧವಾಗಿ ಕೃತಿಗಳನ್ನು ವಿಮರ್ಶೆಗೆ ಒಳಪಡಿಸುವ ಧೋರಣೆಯಿಂದಾಗಿ ಎಲ್ಲ ಆಯಾಮಗಳ ಪರಾಮರ್ಶೆ ನಡೆಯದೆ ಹೋಗುವುದೂ ಇದೆ. ಕಾರಂತರ ಕೃತಿಗಳ ಬಗ್ಗೆ ಸಾಕಷ್ಟು ವಿಮರ್ಶೆ ಬಂದಿದೆ. ಬೇಕಾದಷ್ಟು ವಿಚಾರಸಂಕಿರಣಗಳು ನಡೆಯುತ್ತಿವೆ. ಆದರೆ, ಅವರ ಕೃತಿಗಳ ಬಗ್ಗೆ ಈವರೆಗೆ ವಿಮರ್ಶಾಲೋಕ ಅಷ್ಟಾಗಿ ಗಮನ ನೀಡದ ಅಂಶಗಳನ್ನು ಎತ್ತಿ ತೋರಿಸುವ ಲೇಖನವನ್ನು ಈ ಸಂಚಿಕೆಯಲ್ಲಿ ದೇವು ಹನೆಹಳ್ಳಿ ಬರೆದಿದ್ದಾರೆ. ಹಾಗೆಯೇ ನಮ್ಮ ಉನ್ನತ ಶಿಕ್ಷಣ ಸಂಸ್ಥೆಗಳು ಅಥವಾ ವಿಶ್ವವಿದ್ಯಾನಿಲಯಗಳು ಯಾಕೆ ವಿಶ್ವದರ್ಜೆಯ ಸಂಸ್ಥೆಗಳಾಗಿಲ್ಲ ಎಂಬ ಬಗ್ಗೆ ಒಂದು ಸೂಚನೆ ಡಾ. ಪ್ರವೀಣ್ ಅವರ ಲೇಖನದಲ್ಲಿ ಸಿಗಬಹುದು. ಓದುಗರ ಪ್ರತಿಕ್ರಿಯೆಗಳಿಗೆ ಸ್ವಾಗತ.

– ಸಂ.

ವೀರಶೈವರ ನಿರೂಪಣೆ : ಕಾದಂಬರಿಗಳ ಪಾತ್ರ

ಚೈತ್ರ
ಸಂಶೋಧನಾ ವಿದ್ಯಾರ್ಥಿ
ಕುವೆಂಪು.ವಿ.ವಿ, ಶಿವಮೊಗ್ಗ

ವೀರಶೈವ ಸಂಪ್ರದಾಯ 12ನೆ ಶತಮಾನದಲ್ಲಿ ಅನೇಕ ಶಿವಶರಣರ ನೇತೃತ್ವದಲ್ಲಿ ವಿಶಿಷ್ಟವಾಗಿ ಬೆಳೆಯುತ್ತಾ ಬಂದಿತು. ವಚನಸಾಹಿತ್ಯವು ಜ್ಞಾನರಾಶಿಯನ್ನೇ ಹುಟ್ಟುಹಾಕುವಲ್ಲಿ ಒಂದು ಯಶಸ್ವಿ ಹೆಜ್ಜೆಯನ್ನು ಇಟ್ಟಿತ್ತು. ಆ ಕಾಲಘಟ್ಟದ ನಂತರ ಶರಣ ಸಂಪ್ರದಾಯವನ್ನು ಅರ್ಥೈಸಿಕೊಳ್ಳಲು ವಚನಗಳೇ ಮೂಲಾಧಾರಗಳಾಗಿದ್ದರೂ ಸಹ, ಮಧ್ಯಯುಗದ ನಂತರ ಬೆಳೆದು ಬಂದ ಹಲವಾರು ಪುರಾಣಗಳು, ಕತೆಗಳು ಹಾಗೂ ಕಾದಂಬರಿಗಳೂ ಕೂಡ ಬಹುಮುಖ್ಯ ಪಾತ್ರವನ್ನು ವಹಿಸಿವೆ. ವಚನಗಳು ನೇರವಾಗಿ ವಚನಕಾರರ ವಸ್ತುವಿಷಯಗಳನ್ನು ತಿಳಿಸಿದರೆ, ತದನಂತರ ಬಂದಂತಹ ಕಾದಂಬರಿಗಳು, ನಾಟಕಗಳು, ಪುರಾಣಗಳು ಪರೋಕ್ಷವಾಗಿ ಅಂದರೆ ಕತೆಗಳನ್ನು ಹೆಣೆಯುವ ಮೂಲಕ ಆ ಸಂಪ್ರದಾಯ ಹಾಗೂ ವಚನಕಾರರ ಕುರಿತು ವಿವರಿಸುತ್ತವೆ.

ಪ್ರಸ್ತುತದಲ್ಲಿ ವಚನಗಳನ್ನು ಮತ್ತು ಆ ಯುಗದ ವೀರಶೈವರನ್ನು ಬಹುತೇಕವಾಗಿ ಸಾಮಾಜಿಕ ಹೋರಾಟದ ಹಾದಿಯಲ್ಲಿಯೇ ಗುರುತಿಸಲಾಗುತ್ತಿದೆ. ಆದರೆ ವೀರಶೈವರಿಗೆ ಸಂಬಂಧಿಸಿದ ಬರಹಗಳು ಆಧುನಿಕ ಕಾಲಘಟ್ಟಕ್ಕಿಂತಲೂ ಹಿಂದೆಯೇ ಪುರಾಣಗಳ ರೂಪದಲ್ಲಿ ಕಾಣಸಿಗುತ್ತವೆ. ಆದರೆ ಆ ಪುರಾಣಗಳು ಈಗಿನ ವಿವರಣೆಗಳಂತೆ ಚಿತ್ರಿಸದೆ ವಚನಕಾರರಿಗೆ ದೈವತ್ವ, ಪವಾಡಗಳನ್ನು ಆರೋಪಿಸಿ ವಿವರಿಸುತ್ತವೆ. ನಂತರ ಬಂದಂತಹ ಬಹುತೇಕ ಬೌದ್ಧಿಕ ವಿವರಣೆಗಳು ಸಾಮಾಜಿಕ ಹೋರಾಟವನ್ನು ಮಾತ್ರ ಗುರಿಯಾಗಿರಿಸಿಕೊಂಡು ವಿವರಿಸುತ್ತವೆ. ಇಂತಹ ವಿವರಣೆ ಪ್ರಸರಣವಾಗಲು ಒಂದೆಡೆ, ವಸಾಹತುಶಾಹಿತ್ವ ಹುಟ್ಟುಹಾಕಿದ ಪ್ರಶ್ನೆಗಳು ಹಾಗೂ ಮತ್ತೊಂದೆಡೆ, ಅವುಗಳಿಗೆ ಉತ್ತರದ ರೂಪದಲ್ಲಿ ಒಡಮೂಡಿದ ಕಾದಂಬರಿಗಳು ಪ್ರಮುಖ ಕಾರಣ ಎನ್ನುವುದು ಈ ಲೇಖನದ ವಾದವಾಗಿದೆ.

ವಚನಕಾರರ ಕುರಿತು ತಿಳಿದುಕೊಳ್ಳಲು ಲಭ್ಯವಿರುವ ಸಂಪನ್ಮೂಲಗಳನ್ನು ಸ್ಥೂಲವಾಗಿ ಮೂರು ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು. ಒಂದು, ವಚನಗಳು, ಎರಡನೇಯದಾಗಿ ವೀರಶೈವರ ಕುರಿತ ಪುರಾಣಗಳು, ಮೂರನೇಯದಾಗಿ ಆಧುನಿಕ ಬರಹಗಳು. ವಚನಗಳು ನಿರೂಪಣೆಯ ರೀತಿಯಲ್ಲಿರದೆ ಪದ್ಯ ರೂಪದಲ್ಲಿರುವುದರಿಂದ ಅವುಗಳನ್ನು ನಿರೂಪಿಸಿ ಅರ್ಥೈಸುವುದು ಈ ಲೇಖನದ ಮಿತಿಯಲ್ಲಿ ಸಾಧ್ಯವಾಗುವುದಿಲ್ಲ, ಹಾಗಾಗಿ ನಿರೂಪಣೆಗಳ ಸ್ವರೂಪದಲ್ಲಿ ಸಿಗುವ ಸಂಪನ್ಮೂಲಗಳು ಪುರಾಣಗಳು, ಕಥೆಗಳು, ಹಾಗೂ ಕಾದಂಬರಿಗಳು. ಹಾಗಾಗಿ ಅವುಗಳನ್ನು ಪರಶೀಲಿಸಬೇಕಾಗುತ್ತದೆ.

ಪುರಾಣಗಳಲ್ಲಿ ವೀರಶೈವ ಚರಿತ್ರೆ

ವಚನಸಾಹಿತ್ಯವು 15ನೇ ಶತಮಾನದವರೆಗೆ ರಚನೆಯಾಗಿವೆ ಎಂಬುದಾಗಿ ವಚನಕಾರರ

ಕಾಲಘಟ್ಟಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ಮಧ್ಯಯುಗದಲ್ಲಿ ವಚನಗಳು ಅಷ್ಟಾಗಿ ರಚಿತವಾಗಿರದಿದ್ದರೂ, ವಚನಕಾರರ ಕುರಿತಂತೆ ಪುರಾಣಗಳ ಸೃಷ್ಟಿ ಪ್ರಾರಂಭವಾಯಿತು. ಅವುಗಳನ್ನು ವೀರಶೈವ ಪುರಾಣ, ಬಸವ ಪುರಾಣ ಎಂಬಿತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ವೀರಶೈವ ಪುರಾಣಗಳು ಕನ್ನಡದಲ್ಲಿ ಒಂದು ವಿಶಿಷ್ಟ ಸಂದರ್ಭ ಹಾಗೂ ಸನ್ನಿವೇಶಗಳಿಗೆ ಪ್ರತಿಕ್ರಿಯಾತ್ಮಕವಾಗಿ ತಲೆದೋರಿದಂತೆ ಕಾಣುತ್ತದೆ. ವಚನ ಚಳವಳಿಯ ನಂತರ ಬಂದ ಹರಿಹರ ರಾಘವಾಂಕರು ವಸ್ತುವಿನ ಆಯ್ಕೆ, ನಿರೂಪಣಾ ವಿಧಾನ, ಭಾಷೆ, ಛಂದಸ್ಸುಗಳಲ್ಲಿ ಹೊಸತನವನ್ನು ಪ್ರಕಟಪಡಿಸಿ ಒಂದು ಪರಂಪರೆಯ ನಿರ್ಮಾಪಕರಾದರು. ವೀರಶೈವ ಪುನರುಜ್ಜೀವನ ಯುಗದಲ್ಲಿನ ಚಟುವಟಿಕೆಗಳು ಹೆಚ್ಚು ಧಾರ್ಮಿಕವಾಗಿರುವಂತೆ ತೋರುತ್ತದೆ. 'ಧರ್ಮಕ್ಕೆ ಒದಗಿದ ವಿಪತ್ತನ್ನು ಮನಗಂಡು ವೀರಶೈವ ಧರ್ಮದ ಪುನರುಜ್ಜೀವನಕ್ಕೆ ಅಗತ್ಯವಿರುವ ಧಾರ್ಮಿಕ ವಿಶ್ವಕೋಶದ ಪರಿಕಲ್ಪನೆಯಲ್ಲಿ ಕೃತಿ ರಚನೆಯಾದವು'. ಈ ಹಿನ್ನೆಲೆಯಲ್ಲಿ ವೀರಶೈವದ ಸಂಕ್ರಮಣಾವಸ್ಥೆಯಲ್ಲಿ ಅದರ ಧಾರ್ಮಿಕ ಸಾಹಿತ್ಯ ಭಾಗವಾದ ಪುರಾಣಗಳಿಗೆ ನಿರ್ದಿಷ್ಟ ಲಾಕ್ಷಣಿಕ ಚೌಕಟ್ಟಿನ ಅಗತ್ಯ ವೈದಿಕ ಹಾಗೂ ಜೈನ ಪುರಾಣಗಳಿರುವಂತೆ ಕಂಡುಬರಲಿಲ್ಲ.

ಪುರಾಣ ನಾಮಾಂಕಿತ ವೀರಶೈವ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವುಗಳಿಗೆ ಕೆಲವು ಲಕ್ಷಣಗಳಿರುವುದನ್ನು ಊಹಿಸಬಹುದು.

1. ವೀರಶೈವ ಪುರಾಣಗಳ ಪ್ರಧಾನ ವ್ಯಕ್ತಿಗಳು ಗುರುವು ಅನುಗ್ರಹಿಸುವ ಇಷ್ಟಲಿಂಗವನ್ನು ಸದಾ ಶರೀರದ ಮೇಲೆ ಧರಿಸಿ ಆರಾಧಿಸುವವರಾಗಿರುತ್ತಾರೆ.
2. ಶಿವಾಗಮೋಕ್ತ ವೀರಶೈವವಾಗಲಿ ಅದನ್ನು ವಿಶ್ವಧರ್ಮವನ್ನಾಗಿ ಮಾಡಲು 12ನೇಯ ಶತಮಾನದ ಬಸವಾದಿ ಶರಣರು ರೂಪಿಸಿದ ಸುಧಾರಿತ ವೀರಶೈವ ಧರ್ಮವಾಗಲೀ ಅವುಗಳಲ್ಲಿ ಪ್ರತಿಪಾದಿತವಾಗಿರುತ್ತದೆ.
3. ವೀರಶೈವ ಧರ್ಮಾನುಯಾಯಿಗಳಾದ ಮಹಾ ಪುರುಷರ ಚರಿತ್ರೆಗಳು ಪ್ರಧಾನವಾಗಿಯೂ, ಅವರು ತಮಗೆ ಆದರ್ಶರೆಂದು ಅಂಗೀಕರಿಸಿದ ಪುರಾತನ ಶೈವ ಸಂತರು ಹಾಗೂ ಪುರಾತನ ಮತ್ತು ನೂತನ ಶಿವಶರಣರು ಮೊದಲಾದವರ ಕಥೆಗಳು ಪ್ರಾಸಂಗಿಕವಾಗಿಯೂ ಅವುಗಳಲ್ಲಿ ಉಕ್ತವಾಗಿರುತ್ತದೆ.
4. ಪ್ರಧಾನ ಪುರುಷರು ಬಹುವಾಗಿ ಪರಶಿವೆಯ ಅಂಶ ಇಲ್ಲವೆ ಅವರ ಪರಿವಾರವಾಗಿದ್ದು ಕಾರಣಾಂತರಗಳಿಂದ ಭೂಲೋಕದಲ್ಲಿ ಅವತರಿಸಿದವರಾಗಿರುತ್ತಾರೆ. ಮತ್ತು ಈ ಲೋಕದ ಮಣಿಹ ಮುಗಿದೊಡನೆ ಒಂಟಿಯಾಗಿಯೋ ಗುಂಪಾಗಿಯೋ ಮತ್ತೆ ಕೈಲಾಸವನ್ನು ಸೇರುತ್ತಾರೆ.
5. ವೀರಶೈವ ಧರ್ಮವನ್ನು ಮೆಟ್ಟಿಕ್ಕತೊಡಗಿದ ಪರಸಮುದಾಯಗಳನ್ನು ಎದುರಿಸಿ, ಸ್ವ ಧರ್ಮವನ್ನು ರಕ್ಷಿಸಿ ಬೆಳೆಸಿದ ರೀತಿಯ ಪವಾಡ ಕಥೆಗಳ ರೂಪದಲ್ಲಿ ಪ್ರಧಾನವಾಗಿ ಕಂಡುಬರುತ್ತವೆ.
6. ವೀರಶೈವ ಶೈವ ಧರ್ಮದ ಪ್ರಭೇದವಾಗಿದೆ ಎಂಬಂತೆ ಶೈವ ಪುರಾಣಗಳಲ್ಲಿ ಕಂಡು ಬರುವ ಶಿವಪಾರಮ್ಯ ಪ್ರತಿಪಾದನಾ ಕಥೆಗಳಲ್ಲಿ ಪ್ರಧಾನವಾದ ಸುಮಾರು 25 ಕಥೆಗಳು ಲೀಲೆಗಳೆಂಬ ಹೆಸರಿನಿಂದ ಪ್ರಾಸಂಗಿಕವಾಗಿ ವರ್ಣಿತವಾಗಿರುತ್ತದೆ.

ಮೇಲಿನ ಕೆಲವು ಲಕ್ಷಣಗಳನ್ನು ಇಟ್ಟುಕೊಂಡು ನೋಡಿದರೆ, ಪುರಾಣಗಳಲ್ಲಿ ಬಸವಣ್ಣನವರನ್ನು ಒಬ್ಬ ಮಹಾ ಪುರುಷ, ಪವಾಡ ಪುರುಷ, ಹಾಗೂ ಅವರ ಬಗ್ಗೆ ಹೆಚ್ಚಿನ ಭಕ್ತಿಭಾವ ಗೌರವಗಳಿರುವಂತೆ ಚಿತ್ರಿಸಲಾಗಿದೆ. ಅದನ್ನು ಉದಾಹರಣೆಗಳ ಮೂಲಕ ಗಮನಿಸಬಹುದು.

ಬಸವನೆ ಶರಣನ್ನೆ ಪಾಪದ ಕ್ಷಯವು, ಬಸವನೆ ಶರಣನ್ನೆ ಪರಮ ಪಾವನವು, ಬಸವನೆ ಶರಣನ್ನೆ ಪ್ರತ್ಯಕ್ಷ ಸುಖವು, ಬಸವನೆ ಶರಣನ್ನೆ ಭವರೋಗ ನಾಶ, ಬಸವನೆ ಶರಣನ್ನೆ ಭಕ್ತಿ ವರ್ಧನವು, ಬಸವನೆ ಶರಣನ್ನೆ ಬಂಧ ವಿಮೋಚನೆಯು, ಬಸವನೆ ಶರಣನ್ನೆ ಭಾಗ್ಯ ಸೇರ್ಪಡೆಯು, ಬಸವನೆ ಶರಣನ್ನೆ ಮೆರೆವುದು ಶೀಲ, ಬಸವನೆ ಶರಣನ್ನೆ ಹರಿವುದಾಪದವು, ಬಸವನೆ ಶರಣನ್ನೆ ಪ್ರಬಲ ಸಂಪದವು, ಬಸವನೆ ಶರಣನ್ನೆ ಅತಿಶಯ ಕೀರ್ತಿ, ಬಸವನೆ ಶರಣನ್ನೆ ಪಲಿಸುವುದಿಚ್ಚೆ, ಬಸವನೆ ಶರಣನ್ನೆ ದೊರೆಯುವುದು ವಾಕ್ಸಿದ್ಧಿ, ಬಸವನೆ ಶರಣನ್ನೆ ಬುದ್ಧಿಭಾಜಿಪುದು, ಹೆಚ್ಚೇಕೆ ಬಸವಯೆಂದೆನ್ನುತ ಮೆರೆವ ನಿನ್ನಕ್ಷರತ್ರಯವನ್ನೊಂದು ಬಾರಿ.

ಈ ಮೇಲಿನಂತೆಯೆ ಬಸವನನ್ನು ದೈವತ್ವದಲ್ಲಿ ನಿಲ್ಲಿಸಿ ಅವನನ್ನು ಆರಾಧಿಸುವದನ್ನು ಪಾಲ್ಕುರಿಕೆ ಸೋಮನಾಥನ ಬಸವ ಪುರಾಣದಲ್ಲಿಯೂ ಕಾಣಬಹುದು. ಉದಾ: ಯಾರು ಸ್ಮರಿಸುವರೋ ಮುದದಿಂದಲವನ ವದನವು ಶವನಲ್ಲೇ ನೆಲೆಸುವುದೆನಲು ಸಂತತ ಬಸವನ ಪ್ರಸ್ತುತಿಸುತಿರೆ ಹರಿವುದು ಚೋದ್ಯದ ಭವಬಂಧನಗಳು... ಬಸವನ ಮೇಲೆ ಇಂತಹ ಭಾವ ಭಕ್ತಿಯು ಭೀಮಕವಿಯಲ್ಲಿಯೂ ಕಾಣಬಹುದು. ಬಸವ ಶರಣೆನೆ ಪಾಪವಳಿವುದು, ತಾಪವಾರುಗು ಪರಮ ಪಾವನ ಭಾಡಿ ಸಮಧಿಸುಗು, ಭಕ್ತಿ ದೊರಕುಗು, ಸಾರ್ಗು ಸುಸ್ಥಿತಿ, ವಚನ ರಚನಾಸಿದ್ಧಿ ವರ್ಧಿಸುಗು... ಹೀಗೆ ಹಲವು ರೀತಿಯಲ್ಲಿ ವರ್ಣಿಸಿದ್ದಾರೆ.

ಪುರಾಣಗಳು, ಲಭ್ಯವಿರುವ ಸಂಪನ್ಮೂಲಗಳಲ್ಲಿ ಪುರಾತನವಾದವುಗಳಾಗಿವೆ. ಪುರಾಣಗಳಲ್ಲಿ ವೀರಶೈವರನ್ನು ಈಗಿನ ವಿವರಣೆಗಳಂತೆ ಸಾಮಾಜಿಕ ಹೋರಾಟದ ಪ್ರೇರಣೆಯಾಗಿ, ಹೋರಾಟದ ಮಾರ್ಗದಲ್ಲಿ ನಿರೂಪಿಸಿರುವುದು ಕಂಡುಬರುವುದಿಲ್ಲ. ದೈವೀ ಪುರಷರಾದಂತಹ ವಚನಕಾರರು ಕಾಲಾನಂತರದಲ್ಲಿ ಸಾಮಾಜಿಕ ಚಳುವಳಿಯ ನೇತಾರರಾಗಿ ಸ್ಥಾನಪಲ್ಲಟ ಹೊಂದಿದರು. ಹಾಗಾದರೆ ವಚನಗಳನ್ನು ಮತ್ತು ವೀರಶೈವರನ್ನು ಪವಾಡತ್ವ ಮತ್ತು ದೈವೀಪುರುಷರಿಂದ ಹೋರಾಟಗಾರರನ್ನಾಗಿ ಬದಲಾಯಿಸುವಂತಹ ವಿವರಣೆಗಳು ಹೇಗೆ ಹುಟ್ಟಿಕೊಂಡವು?

ಪಶ್ಚಿಮದ ಪ್ರಶ್ನೆ

ಭಾರತಕ್ಕೆ ಆಗಮಿಸಿದ ಪಾಶ್ಚಾತ್ಯರು, ಅವರ ಕೆಲಸಗಳನ್ನು ಮಾತ್ರ ನೋಡಿಕೊಳ್ಳದೆ ಭಾರತವನ್ನು ಆಳುವ ಮತ್ತು ಅರ್ಥೈಸಿಕೊಳ್ಳುವ ಕಾರ್ಯಕ್ಕೂ ಕೈಹಾಕಿದರು. ಅಂತಹ ಸಂದರ್ಭದಲ್ಲಿ ಭಾರತದ ಸಂಸ್ಕೃತಿ, ವೈವಿಧ್ಯತೆ, ಇತ್ಯಾದಿಗಳನ್ನು ಗಮನಿಸಿದ ಪಾಶ್ಚಾತ್ಯರಿಗೆ ಇಲ್ಲಿಯ ಬದುಕಿನ ಕ್ರಮದ ಬಗ್ಗೆ ಹಲವಾರು ಪ್ರಶ್ನೆಗಳು ಎದ್ದವು, ಭಾರತೀಯರ ಧರ್ಮ ಗ್ರಂಥಗಳು ಯಾವುವು? ಇವರು ಪೂಜಿಸುವ ದೇವರುಗಳು ಯಾವುವು? ಮಾರ್ಟಿನ್ ಲೂಥರ್ ಕಿಂಗ್ ನಂತೆಯೇ ಇಲ್ಲಿಯೂ ಧಾರ್ಮಿಕ ಕ್ರಾಂತಿ ನಡೆದಿದೆಯೆ? ಇಲ್ಲಿನ ಬ್ರಾಹ್ಮಣರು ಪ್ರೀಸ್ಟ್ ಕ್ಲಾಸ್‌ಗೆ ಸೇರಿದವರೆ? ಇವರು ಕ್ಯಾಥೋಲಿಕ್ಕರಂತೆ ರಿಲಿಜನ್ನನ್ನು ಭ್ರಷ್ಟತೆಗೆ ತಳ್ಳಿದವರೆ? ಹಾಗೂ ಜನಸಾಮಾನ್ಯರನ್ನು ಸತ್ಯ ಮಾರ್ಗದಿಂದ ತಪ್ಪು ಮಾರ್ಗಕ್ಕೆ ಎಳೆತಂದವರೆ? ಇನ್ನೂ ಮುಂತಾದ ಪ್ರಶ್ನೆಗಳು ಭಾರತೀಯ ಸಮಾಜದ ಬಗ್ಗೆ ಕೇಳಲು ಪ್ರಾರಂಭಿಸಿದರು. ಇದಕ್ಕೆ ಹಲವು ರೀತಿಯ ಉತ್ತರಗಳನ್ನು ಕಂಡುಕೊಂಡರು, ಜೊತೆಗೆ ಅಸ್ತಿತ್ವದಲ್ಲಿದ್ದಂತಹ ಹಲವಾರು ಸಮುದಾಯಗಳು, ಮೆಕಾಲೆಯ ಶಿಕ್ಷಣ ಪಡೆದ ವಿದ್ಯಾವಂತರೂ ಸಹ ತಮಗೆ ತೋಚಿದ ಉತ್ತರಗಳನ್ನು ನೀಡಲು ಪ್ರಾರಂಭಿಸಿದರು. ಇದಕ್ಕೆ ನಿದರ್ಶನವೆಂಬಂತೆ,

1930ರ ಜನಗಣತಿಯಲ್ಲಿ, ಹಿಂದೂ ಎನ್ನದೆ ವೀರಶೈವರು ಎಂದು ಬರೆಯಿಸಿಕೊಂಡರು,

ಬ್ರಿಟಿಷ್ ಶಿಕ್ಷಣ ಪದ್ದತಿಯ ಪ್ರಭಾವದಿಂದ ಬ್ರಾಹ್ಮಣ ವಿರೋಧದ ರೂಪದಲ್ಲಿ ಮಾತ್ರ ವ್ಯಕ್ತವಾಯಿತು. (ಚಿದಾನಂತ ಮೂರ್ತಿ: 2000., ಪು:247)

ಅಂದರೆ, ವೀರಶೈವರು ಬ್ರಾಹ್ಮಣರ ವಿರೋಧ ಎನ್ನುವುದಕ್ಕೆ ಪಾಶ್ಚಿಮಾತ್ಯರ ಶಿಕ್ಷಣ ಇಲ್ಲಿಗೆ ಬರಬೇಕಾಯಿತು. ಅಲ್ಲಿಯವರೆಗೆ ವೀರಶೈವರು ಯಾರ ವಿರುದ್ಧ ಎನ್ನುವ ಪ್ರಶ್ನೆಗೆ ಅಸ್ತಿತ್ವವೇ ಇರಲಿಲ್ಲ ಎನಿಸುತ್ತದೆ. ಹಾಗೆಯೇ ಮುಂದುವರೆದು ಹೇಳುವಂತೆ, 1930–35 ರವರೆಗೆ, ವೀರಶೈವರಿಗೆ ತಾವು ಹಿಂದೂಗಳಲ್ಲ ಎಂಬ ಭಾವನೆಯೇ ಬಂದಿರಲಿಲ್ಲ (ಅದೇ, ಪು: 238). ಹಾಗಾದರೆ, ವೀರಶೈವರಿಗೆ ತಾವುಗಳು ಹಿಂದೂಗಳೋ ಅಥವಾ ಅಲ್ಲವೋ ಎನ್ನುವ ಪ್ರಶ್ನೆಯು ಬ್ರಿಟೀಷರು ಬಂದ ಮೇಲೆ ಏಕೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು? ಉತ್ತರ ಸ್ಪಷ್ಟವಾಗಿಯೇ ಇದೆ, ವೀರಶೈವರಿಗೆ ಹುಟ್ಟಿದ ಪ್ರಶ್ನೆ, ವೀರಶೈವರದ್ದೇ ಆಗಿರದೆ, ಅದು ಬ್ರಿಟೀಷರ ಪ್ರಶ್ನೆಯಾಗಿತ್ತು.

ಪುರಾಣದಿಂದ ಚಳವಳಿಯಡೆಗೆ

ಸಾಹಿತ್ಯವು ಸಮಾಜದ ಏಳು–ಬೀಳಿನ ಕುರಿತು, ಸಮಾಜದ ಅನಿಷ್ಟ ಪದ್ದತಿ ಶೋಷಣೆ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜನರಿಗೆ ಸರಳ ರೀತಿಯಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತದೆ, ಎನ್ನುವ ಅಭಿಪ್ರಾಯ ಬೌದ್ಧಿಕ ವಲಯದಲ್ಲಿ ಕಂಡುಬರುತ್ತದೆ. ಇಂತಹ ಸಾಹಿತ್ಯದ ಒಂದು ಭಾಗವಾಗಿ ಕಾದಂಬರಿಗಳು ತಮ್ಮ ಅಸ್ತಿತ್ವವನ್ನು ಕಂಡುಕೊಂಡಿವೆ. 'ಕಾದಂಬರಿ ಇಂದು ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿದೆ. ಪ್ರಾಯಶಃ ಬದುಕಿನ ಅನುಭವವನ್ನು, ಸಾಮಾಜಿಕ ಸ್ಥಿತಿಗತಿಗಳನ್ನು ಮತ್ತು ನಮ್ಮ ಸಂಸ್ಕೃತಿಯ ದಾಖಲೆಗಳನ್ನು ಕಾದಂಬರಿ ಹಿಡಿದಿಡುವಂತೆ ಸಾಹಿತ್ಯದ ಬೇರಾವ ಪ್ರಕಾರವೂ ಅಷ್ಟೊಂದು ಸಮಗ್ರವಾಗಿ ಹಿಡಿದಿಡಲಾರದು' ಅಂದಮೇಲೆ ಸಾಮಾಜಿಕ ಕಳಕಳಿಯ ಕುರಿತು ಕಾದಂಬರಿಗಳು ಕೂಡ ಅರಿವು ಮೂಡಿಸುತ್ತವೆ ಎನ್ನುವುದು ಕೂಡ ಒಪ್ಪಿತ ಸತ್ಯ. ಅಷ್ಟೆ ಅಲ್ಲದೆ ಇಂದಿನ ಹಲವಾರು ಸಾಮಾಜಿಕ ಚಳವಳಿಗಳಿಗೆ ಪೂರಕವಾಗಿ ಮತ್ತು ಪ್ರೇರಕವಾಗಿ ಕಾದಂಬರಿಗಳ ಪಾತ್ರವು ಇದೆ ಎಂಬುದು ಹಲವಾರು ಚಿಂತಕರ ವಾದವು ಆಗಿದೆ. ಆದ್ದರಿಂದ ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಸಾಮಾಜಿಕ ಚಳುವಳಿಗಳಿಗೆ ಕಾದಂಬರಿಗಳು ಯಾವ ರೀತಿಯ ಪಾತ್ರವನ್ನು ವಹಿಸುತ್ತವೆ ಎನ್ನುವುದನ್ನು ಪರಿಶೀಲಿಸುವುದು ಅಗತ್ಯವಾಗುತ್ತದೆ. ಅಂದರೆ ಕಾದಂಬರಿಗಳಲ್ಲಿ ಸಾಮಾಜಿಕ ಕಳಕಳಿ ಹೇಗೆ ಮೂಡಿತು ಎಂಬುದನ್ನು ಅರಿಯುವುದು ಅಗತ್ಯವಾಗುತ್ತದೆ.

ವೀರಶೈವ ಎಂಬುದು ಒಂದು ಸಂಪ್ರದಾಯವಾಗಿದ್ದರೂ ಸಹ, ಅದನ್ನು ಸಾಮಾಜಿಕ ಸುಧಾರಣೆಯ ರುವಾರಿ ಹಾಗಾಗಿ ಅದೊಂದು ಚಳುವಳಿ ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. 'ವಚನ ವಾಙ್ಮಯವು ಹುಟ್ಟಿದ್ದೆ ಸಾಮಾಜಿಕ ಆಂದೋಲನದ ಅಂಗವಾಗಿ, ಅದರ ಮಾಧ್ಯಮವಾಗಿ ಈ ಆಂದೋಲನದ ಪ್ರಮುಖ ನಾಯಕರಾದ ಬಸವಣ್ಣ, ಅಲ್ಲಮ ಇವರ ವಚನಗಳಲ್ಲಿ ಸಾಮಾಜಿಕ ಅನ್ಯಾಯಗಳ ಬಗ್ಗೆ ಸ್ಪಷ್ಟವಾದ ಆಕ್ರೋಶವು ಅದನ್ನು ಸರಿಪಡಿಸುವ ತೀವ್ರಾಕಾಂಕ್ಷೆಯು ಕಂಡು ಬರುತ್ತದೆ' ಹಲವಾರು ಕಾದಂಬರಿಗಳು ವೀರಶೈವಿಸಂನ್ನು ಚಳವಳಿ ಎಂದೇ ಒತ್ತಿ ಹೇಳುತ್ತವೆ. ಹಾಗಾದರೆ, ಕಾದಂಬರಿಗಳ ಪ್ರಧಾನ ಕಾಳಜಿ ಆ ಸಂಪ್ರದಾಯವನ್ನು ಯಾವುದೋ ಒಂದು ಆಯಾಮದಲ್ಲಿ ಹಿಡಿದಿಡುವಂತೆ ಕಾಣುತ್ತವೆ. ಆದ್ದರಿಂದ ಸಾಮಾಜಿಕ ಚಳವಳಿಗಳಿಗೂ ಹಾಗೂ ಕಾದಂಬರಿಗಳಿಗೂ ಯಾವ ರೀತಿಯ ಸಂಬಂಧವಿದೆ ಎಂಬುದು ಇನ್ನೊಂದು ಪ್ರಶ್ನೆಯಾಗಿ ನಮ್ಮ ಮುಂದೆ ಬಂದು

ನಿಲ್ಲುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಹುಡುಕುವ ಹಾದಿಯಲ್ಲಿ ಈ ಲೇಖನವು ಸಾಗುತ್ತದೆ.

ಆಧುನಿಕ ಕಾಲಘಟ್ಟದಲ್ಲಿ ಸಾಮಾಜಿಕ ಚಳವಳಿಗಳು ವಿವಿಧ ರೀತಿಯಲ್ಲಿ ಕಂಡುಬರುತ್ತಿವೆ. ಹಾಗೆಯೇ ಅವುಗಳು ಪ್ರಸ್ತುತ ಕಾಲದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿವೆ ಎನ್ನುವಂತಹ ಚರ್ಚೆಯು ಈಗಾಗಲೇ ಪ್ರಚಲಿತದಲ್ಲಿದೆ. ಕಾಂಟ್‌ನ ಅರ್ಥದಲ್ಲಿ 'ಕಾದಂಬರಿ ಮಾತ್ರ ಜಗತ್ತನ್ನು ಸ್ಥಾಪಿಸುವ ಕಾರ್ಯ ಮಾಡಬಲ್ಲದು'ಹೆಗಲ್‌ನ ಪ್ರಕಾರ 'ಕಾದಂಬರಿ ಮಧ್ಯಮವರ್ಗದ ಜಗತ್ತಿನ ಮಹಾಕಾವ್ಯ' ಹಾಗೆಯೇ ಡಿ.ಹೆಚ್.ಲಾರೆನ್ಸ್ ಗ್ರಹಿಸುವಂತೆ 'ಮನುಷ್ಯ ಶೋಧಿಸಿದ ಸೂಕ್ಷ್ಮ ಸಂಬಂಧಗಳ ಅತ್ಯುತ್ತಮ ಉದಾಹರಣೆಯೆಂದರೆ ಕಾದಂಬರಿಯೇ ಆಗಿದೆ. ಕಾದಂಬರಿ ನಿಜವಾದ ಸಂಬಂಧಗಳ ಗತಿಶೀಲ ಇಂದ್ರಧನುಷ್ಯದ ದರ್ಶನವನ್ನೊದಗಿಸುವ ಶ್ರೇಷ್ಠ ಮಾಧ್ಯಮ' ಎಂಬುದು ಅವರ ಅಭಿಪ್ರಾಯ. ಇಂತಹ ಸಾಮಾಜಿಕ ಕಳಕಳಿಯನ್ನು ಹೊತ್ತಿರುವ ಅನೇಕ ಚಳುವಳಿಗಳಿಗೆ ಪ್ರೇರಕವಾಗಿ ಕಾದಂಬರಿಗಳು ಕೊಡುಗೆಯನ್ನು ನೀಡುತ್ತಿವೆ ಎಂಬುದು ಈಗಾಗಲೇ ಬೌದ್ಧಿಕ ವಲಯದಲ್ಲಿ ಚಾಲನೆಯಲ್ಲಿರುವ ವಿಷಯವಾಗಿದೆ. ಆದರೆ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾದರೆ, ಕಾದಂಬರಿಗಳ ಮಹತ್ತ್ವವನ್ನು ಇನ್ನಷ್ಟು ಅರಿಯಬೇಕಾಗುತ್ತದೆ. ಅಷ್ಟೆ ಅಲ್ಲದೆ ಕಾದಂಬರಿಗಳವಸ್ತು ವಿಷಯಗಳು ಯಾವ ಯಾವ ಕಾಲಘಟ್ಟಗಳಲ್ಲಿ ಏನಾಗಿದ್ದವು ಎಂಬುದನ್ನು ಕೂಡ ಗಮನಿಸಬೇಕಾಗುತ್ತದೆ.ಮತ್ತು ಕಾದಂಬರಿಗಳ ರಚನೆಗೆ ಪ್ರೇರಕ ಅಂಶಗಳಾವುವು ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

ಆಧುನಿಕ ಯುಗದಲ್ಲಿ ವೀರಶೈವರಿಗೆ ಅಥವಾ ಲಿಂಗಾಯತರಿಗೆ ಸಂಬಂಧಪಟ್ಟಂತೆ ಅನೇಕ ನಾಟಕಗಳು, ಕಾದಂಬರಿಗಳು ಮೂಡಿಬಂದಿವೆ. ಇವುಗಳು ಮುಖ್ಯವಾಗಿ ಏನನ್ನು ತಿಳಿಸುತ್ತವೆ? ಹಾಗೂ ಅವುಗಳ ವಸ್ತು ವಿಷಯಗಳೇನಾಗಿದ್ದವು? ಎಂಬುದನ್ನು ತಿಳಿಯುವ ಅಗತ್ಯವಿದೆ. ಏಕೆಂದರೆ, 'ವಚನಕಾರರಿಗೆ ಸಂಬಂಧಪಟ್ಟಂತಹ ವಿಚಾರಧಾರೆಗಳು ಸ್ಪಷ್ಟವಾಗಿ ಇದಂ ಮಿತ್ಥಂ ಎನ್ನುವ ಧಾಟಿಯಲ್ಲಿ ಮೂಡಿರದೆ ವಿವಿಧ ರೀತಿಯಲ್ಲಿ ಮೂಡಿದ್ದು, ಅವುಗಳು ಪರಸ್ಪರ ವಿರೋಧಭಾಸದಿಂದಲೂ, ಗೊಂದಲಗಳಿಂದಲೂ ಕೂಡಿವೆ' ಎನ್ನುವಂತಹ ವಾದವು ಈಗಾಗಲೇ ಚಾಲನೆಯಲ್ಲಿದೆ.ಆದ್ದರಿಂದ ಇಂತಹ ನಿರೂಪಣೆಗಳಿಗೆ ಪ್ರೇರಕವಾಗಿ ಲಿಂಗಾಯತ ಕಾದಂಬರಿಗಳನ್ನು ಅರಿಯುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ವೀರಶೈವರ ಕುರಿತ ಕಾದಂಬರಿಗಳು ಹಾಗೂ ನಾಟಕಗಳು

ವೀರಶೈವ ಲಿಂಗಾಯತರು ಹಾಗೂ ವಚನ ಸಾಹಿತ್ಯದ ಆಶಯಗಳ ಕುರಿತಂತೆ ಆಧುನಿಕ ಕಾಲಘಟ್ಟದಲ್ಲಿ ಅನೇಕ ಕಾದಂಬರಿಗಳು, ನಾಟಕಗಳು ರಚನೆಯಾಗಿವೆ. ಇವುಗಳಲ್ಲಿ ಬಹುತೇಕವಾಗಿ ಒಂದು ರೀತಿಯ ಸಿದ್ಧ ಮಾದರಿ ನಮಗೆ ಕಂಡುಬರುತ್ತದೆ, ಅದೇನೆಂದರೆ ವಚನಸಾಹಿತ್ಯದ ಉದ್ದೇಶ ಸಾಮಾಜಿಕ ಚಳುವಳಿಯೇ ಆಗಿದೆ. ಅಂದರೆ ಕಾದಂಬರಿಗಳಾಗಲಿ ಮತ್ತು ನಾಟಕಗಳಾಗಲಿ, ಸಾಮಾಜಿಕ ಹೋರಾಟದಿಂದಾಚೆಗೆ ವಚನಕಾರರನ್ನು ಗುರುತಿಸುವ ಪ್ರಯತ್ನ ಮಾಡಿರುವಂತೆ ತೋರುವುದಿಲ್ಲ.

'ಶರಣ ಧರ್ಮದ ಹೆಸರಿನಲ್ಲಿ ಬಸವಣ್ಣನವರು ಪ್ರಾರಂಭಿಸಿರುವ ಅಂದೋಲನ ರಾಜ್ಯದ ಕೃಷಿಕಾರ್ಮಿಕರಲ್ಲಿ ಶೆಟ್ಟಿ ಬಣಜಿಗ ಶ್ರೀಮಂತ ಮನ್ನೆಯರಲ್ಲಿ ಕಾಳ್ಗಿಚ್ಚಿನಂತೆ ಹರಡುತ್ತಿದೆ ಅದಿ ಇಂದು ವರ್ಣ ಧರ್ಮ ಜಾತಿಪಂಥಗಳನ್ನು ವಿರೋಧಿಸುತ್ತಿರುವ ಅವರು ನಾಳೆ ನಮ್ಮ ಪ್ರಭುತ್ವಾಧಿಕಾರವನ್ನು ಎದುರಿಸಲು ಸಿದ್ಧರಾಗಬಹುದು'(196–197). ಶರಣರು ಪ್ರಚಾರಕ್ಕೆ ತರುತ್ತಿರುವ ಜಾತಿ ಪಂಥಗಳ ನಿರಾಕರಣೆ ಸರ್ವಸಮಾನತೆ ಸ್ತ್ರೀ ಪುರುಷರ ಸಮಾನಾಧಿಕಾರ

ವೇಧ ಧರ್ಮಶಾಸ್ತ್ರಗಳ ವಿಡಂಬನೆ ಈ ಕ್ರಾಂತಿಕಾರಿ ಭಾವನೆಗಳು ನಾಡಿನ ಎಲ್ಲಾ ಕಡೆ ಸಂಪ್ರದಾಯವಾದಿಗಳನ್ನು ರೊಚ್ಚಿಗೆಬ್ಬಿಸಿದೆ'(ಪುಟ್ಟಸ್ವಾಮಯ್ಯ ಪು.198)

ಮತ್ತೂ ಮುಂದುವರೆದು ಅವರು ಹೇಳುವಂತೆ, ಜಾತಿ ಪಂಥ ವರ್ಣಾಶ್ರಮಗಳಿಂದ ಸಮಾಜದಲ್ಲಿ ಉದ್ಭವಿಸುವ ಮೇಲು ಕೀಳು ಸ್ಪೃಶ್ಯ ಅಸ್ಪೃಶ್ಯ ಭಾವನೆಗಳನ್ನು ತೊಡೆದು ಹಾಕಿ ಸ್ತ್ರೀ ಪುರುಷರಾಧಿಯಾಗಿ ಎಲ್ಲರಿಗೂ ಸಮಾನ ಹಕ್ಕುಬಾಧ್ಯತೆಗಳನ್ನು ಕೊಡುವುದು ಶರಣ ಧರ್ಮದ ಮೂಲೋದ್ದೇಶ ಶರಣ ಧರ್ಮದ ಪದ್ದತಿ ಸಂಪ್ರದಾಯಗಳಿಗೆ ಅನುಗುಣವಾಗಿಯೇ ಲಾವಣ್ಯವತಿ ಮತ್ತು ಶೀಲವಂತರ ವಿವಾಹ ನಡೆದಿರುತ್ತದೆ.(249)

ಶರಣರು ಬೇರೆ ಬೇರೆ ಸ್ಥಳಗಳಿಗೆ ಹೋಗಿ ತಮ್ಮ ತತ್ವಗಳನ್ನು ಪ್ರಚಾರ ಮಾಡಬೇಕೆಂದು ಸಭೆಯಲ್ಲಿ ಚರ್ಚಿಸುತ್ತಿರುವಾಗ ಕಲಕೇತ ಬೊಮ್ಮಯ್ಯನು ಎದ್ದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಹೇಳುವ ಮಾತು ಈ ಕೆಳಗಿನಂತಿದೆ

"ನಮ್ಮ ಹೆಚ್ಚಿನ ಗಮನ ದೀನ ದಲಿತರ ಮೇಲಿರಬೇಕು. ಸಮಾಜದ ಅತ್ಯಂತ ಕೆಳಗಿನ ಸ್ಥಾನ ಅಂದರೆ ದೀನರು ದಲಿತರು, ದುಃಖಿಗಳು ತುಳಿತಕ್ಕೆ ಒಳಗಾದ ಅಸ್ಪೃಶ್ಯರು, ಅನಾಥರು ಇವರ ಕಡೆಗೆ ನಮ್ಮ ಗಮನ ಹೆಚ್ಚಿರಬೇಕು. ಮೇಲ್ವರ್ಗದ ಜನ ತಮ್ಮ ಉದ್ದಾರವನ್ನು ತಾವು ಕಂಡುಕೊಳ್ಳಬಲ್ಲರು ಆದರೆ ಮನುಷ್ಯರಾಗಿದ್ದು ಅಮಾನವೀಯತೆಗೆ ಒಳಗಾಗಿ ಬದುಕುತ್ತಿರುವವರನ್ನು ಯಾರು ಕೇಳಬೇಕು ಅಣ್ಣನವರು ಅವರಿಗಾಗಿಯೇ ತಮ್ಮನ್ನು ಧಾರೆಯೆರೆದುಕೊಂಡವರು ಇಲ್ಲವಾಗಿದ್ದರೆ ನಮ್ಮಂತಹವರು ಹೀಗೆ ನಿಂತು ಮಾತಾನಾಡುವುದನ್ನು ಕನಸಿನಲ್ಲಿಯೂ ಊಹಿಸಲು ಸಾಧ್ಯವಿರಲಿಲ್ಲ" ಎಂದು ಕೋರುತ್ತಾನೆ. (ತಿಪ್ಪೇರುದ್ರಸ್ವಾಮಿ. ಹೆಚ್:297).

"ಬಸವಣ್ಣನ ಗುರಿ ಲೌಕಿಕ ಧಾರ್ಮಿಕ ವೈಯಕ್ತಿಕ ಸಾಮಾಜಿಕ ಈ ದ್ವಂದ್ವಗಳನ್ನು ಸಮನ್ವಯಗೊಳಿಸುವ ರಹಸ್ಯವನ್ನು ಸೂತ್ರರೂಪವಗಿ ನಿರೂಪಿಸುವುದಾಗಿತ್ತು"(120).

ಕಾದಂಬರಿಗಳಲ್ಲಿ ನಿರೂಪಿತವಾಗಿರುವಂತೆಯೇ ನಾಟಕಗಳಲ್ಲಿಯೂ ಸಹ ವೀರಶೈವ ಲಿಂಗಾಯತರ ಕುರಿತಾಗಿನ ಚಿತ್ರಣಗಳು ನಿರೂಪಣೆಗೊಂಡಿವೆ.

ಸಂಕ್ರಾಂತಿ ಎಂಬ ನಾಟಕದಲ್ಲಿ, ವಚನಕಾರರು ಕೆಳವರ್ಗದವರ ಅಭಿವೃದ್ಧಿಗೆ ಶ್ರಮಿಸಿದರು. ದಲಿತರನ್ನ ಶರಣರನ್ನಾಗಿಸಿ ಅವರಿಗೆ ಉತ್ತಮ ಸ್ಥಾನ ಮಾನವನ್ನು ಕಲ್ಪಿಸಿ ಕೊಟ್ಟರು. ಕೆಳವರ್ಗದ ಜನಕ್ಕಾಗಿ ಹೋರಾಡಿದರು ಎಂಬ ವಿವರಣೆಗೆ ಪೂರಕವಾಗುವಂತೆ ಬಸವಣ್ಣನವರನ್ನು ಬಿಂಬಿಸಲಾಗಿದೆ. ಬಸವಣ್ಣ, ಕೆಳವರ್ಗದವರು ವಾಸಿಸುವ ಜಾಗಕ್ಕೆ ಹೋಗಿ ಶರಣ ತತ್ವವನ್ನು ಕೆಲವು ಆಚಾರ ವಿಚಾರಗಳನ್ನು ಬೋಧಿಸಿ ಶೂದ್ರರನ್ನು ಶರಣರನ್ನಾಗಿ ಮಾಡುವ ಕೆಲಸದಲ್ಲಿ ತೊಡಗಿದ್ದರು ಎಂಬುದನ್ನು ತಿಳಿಸುತ್ತಾರೆ. ಇದು ಬಸವಣ್ಣ ಉಜ್ಜನಿಗೆ ಮತ್ತು ಉಳಿದ ದಲಿತರಿಗೆ ಪ್ರಮಾಣ ವಚನವನ್ನು ಬೋದಿಸುವ ಸಂದರ್ಭದಲ್ಲಿ ಕಾಣಬಹುದು. ಇಲ್ಲಿ ಮುಖ್ಯವಾಗಿ ಶರಣರು ದಲಿತರ ಉದ್ದಾರಕ್ಕಾಗಿ ಶ್ರಮಿಸುತ್ತಾರೆ. ಈ ಕೆಲಸವನ್ನು ಸಹಿಸಲಾಗದೆ ಬ್ರಾಹ್ಮಣರು ಶರಣರ ವಿರುದ್ದಾವಾಗಿ ಕುತಂತ್ರಗಳನ್ನು ಮಾಡುತ್ತಿರುತ್ತಾರೆ. ವಚನ ಚಳುವಳಿ ಕುತಂತ್ರಗಳಿಗೆ ಬಲಿಯಾಗಿದೆ ಎನ್ನುವುದನ್ನು ಹಲವು ಸನ್ನಿವೇಶಗಳಲ್ಲಿ ಚಿತ್ರಿಸಿದ್ದಾರೆ. ಉಷಾ ಮತ್ತು ರುದ್ರನ ಪ್ರೇಮ ಪ್ರಸಂಗದಲ್ಲಿ ನೋಡಬಹುದು ಸ್ಪಷ್ಟವಾಗಿ ಲೇಖಕರ ನಿಲುವನ್ನು ಕಾಣಬಹುದಾಗಿದೆ.

ಇನ್ನೂ ಮಹಾಚೈತ್ರ, ತಲೆದಂಡಗಳನ್ನು ಗಮನಿಸಿದರೆ, ಮುಖ್ಯವಾಗಿ ವರ್ಣಸಂಕರ ವನ್ನು ಬಿಂಬಿಸಲಾಗಿದೆ. ಅಂದರೆ ಹರಳಯ್ಯ ಮತ್ತು ಮಧುವರಸರ ಮಕ್ಕಳ ಪ್ರತಿಲೋಮ ಮದುವೆಯನ್ನು 2ಲಕ್ಷ ಶರಣರುಬಸವಣ್ಣನವರ ನೇತೃತ್ವದಲ್ಲಿ ಮದುವೆಯನ್ನು ಮಾಡಿಸುತ್ತಾರೆ.

ದಲಿತ ಮತ್ತು ಬ್ರಾಹ್ಮಣರ ನಡುವೆ ನಡೆದ ಮದುವೆಯ ಪರಿಣಾಮವಾಗಿ ಇಡೀ ಕಲ್ಯಾಣವೇ ನಾಶವಾಗುತ್ತದೆ. ಶರಣರ ನಾಶಕ್ಕೆ ಬ್ರಾಹ್ಮಣರೇ ಕಾರಣರು ಎಂಬುದಾಗಿ ಹೇಳಲಾಗುತ್ತದೆ. ಬಸವಣ್ಣನವರ ಹೊರತಾಗಿಯೂ ಕೆಳವರ್ಗದ ಜನರೇ ಚಳುವಳಿಯಲ್ಲಿ ಮುನ್ನಡೆಯನ್ನು ಹೊಂದಿದ್ದಾರೆ. ಕೆಳವರ್ಗದ ಶರಣರು ಚಳುವಳಿ ಮಾಡುವ ಶಕ್ತಿಯನ್ನು ಹೊಂದಿದ್ದಾರೆ ಎಂಬುದನ್ನು ಬಿಂಬಿಸಲಾಗಿದೆ.

ಮೇಲಿನ ಕಾದಂಬರಿಗಳನ್ನು ಗಮನಿಸಿದಾಗ, ನಮಗೆ ತಿಳಿದುಬರುವ ಅಂಶವೆಂದರೆ, ಇವೆಲ್ಲವುಗಳ ಗುರಿ ಮತ್ತು ಧ್ಯೇಯ ಒಂದೇ ಆಗಿದೆ, ಅದೆಂದರೆ ವಚನಸಾಹಿತ್ಯವನ್ನು ಚಳುವಳಿಯ ಧರ್ಮಗ್ರಂಥ ಹಾಗೂ ವಚನಕಾರರನ್ನು ನೇತಾರರು ಎಂಬುದಾಗಿ ಬಿಂಬಿಸುವುದೇ ಆಗಿದೆ. ಈ ಕಾಲಘಟ್ಟದವರೆಗೂ ವಚನಕಾರರು ದೈವೀ ಪುರುಷರು, ಪವಾಡ ಸದೃಶ್ಯರು ಎಂಬಿತ್ಯಾದಿ ವಿವರಣೆಗಳು ಪುರಾಣಗಳ ಮೂಲಕ ಚಾಲ್ತಿಯಲ್ಲಿದ್ದವು, ಆದರೆ ಕಾದಂಬರಿಗಳ ಉಗಮದೊಂದಿಗೆ ವಚನಕಾರರ ಕಾರ್ಯ ಮತ್ತು ಸ್ಥಾನಮಾನಗಳು ತ್ವರಿತಗತಿಯಲ್ಲಿ ಬದಲಾಗಿರುವುದನ್ನು ನಾವು ಗಮನಿಸಬಹುದು. ಇಲ್ಲಿ ಬದಲಾವಣೆಯ ಪರ್ವವನ್ನು ಅರ್ಥೈಸಿಕೊಳ್ಳುವ ಪರಿಸ್ಥಿತಿ ನಮಗೆ ಎದುರಾಗುತ್ತದೆ.ಕಾದಂಬರಿಗಳು ವಚನಕಾರರ ಕುರಿತಇಂತಹ ಬದಲಾವಣೆಗಳನ್ನು ತರಲು ಏನು ಕಾರಣ ಎಂಬುದನ್ನು ನೋಡಿದರೆ, ನಮಗೆ ಗೋಚರಿಸುವ ಸಂಗತಿ ಎಂದರೆ, ಅದುವೇ ವಸಾಹತು ಶಾಹಿತ್ವ. ಭಾರತಕ್ಕೆ ಬ್ರಿಟೀಷರ ಜೊತೆಗೆ ಅವರ ಭೌದ್ಧಿಕ ಜ್ಞಾನಸಂಪತ್ತಿನ ಚೌಕಟ್ಟು ಬಂದ ನಂತರ, ಇಲ್ಲಿನ ಅರಿವಿನ ಪ್ರಯಾಣದ ದಿಕ್ಕು ಬದಲಾಗತೊಡಗಿತು.

ಕಾದಂಬರಿಗಳ ಐತಿಹಾಸಿಕ ನೋಟ

ಕಾದಂಬರಿಗಳ ಬೆಳವಣಿಗೆಯ ಇತಿಹಾಸ ಬಹಳಷ್ಟು ಶತಮಾನದ ಹಿಂದಕ್ಕೆ ಹೋದರೂ, ಅವುಗಳ ಸಂಪೂರ್ಣ ಇತಿಹಾಸವನ್ನು ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶವಾಗಿಲ್ಲ, ಆದ್ದರಿಂದ ಚಳುವಳಿಗೆ ಪ್ರೇರಕವಾಗಿ ಉಗಮಗೊಂಡ ಅಥವಾ ಬದಲಾವಣೆಗೊಂಡ ಕಾದಂಬರಿಗಳ ಇತಿಹಾಸವನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು.

ಹತ್ತೊಂಬತ್ತನೇಯ ಶತಮಾನದಲ್ಲಿ ಬ್ರಿಟಿಷರು ಪರಿಚಯಿಸಿದ ಇಂಗ್ಲಿಷ್ ಶಿಕ್ಷಣದ ನೇರ ಪರಿಣಾಮದಿಂದಾಗಿ ಭಾರತದ ಕಾದಂಬರಿ ಒಂದು ಎರವಲು ಪ್ರಕಾರವೆಂಬ ವಾದ ಬಹಳ ಕಾಲ ಪ್ರಶ್ನಾತೀತ ವಾಗಿತ್ತು. 1860ರಿಂದೀಚೆಗೆ ಭಾರತದ ವಿವಿಧ ಭಾಷೆಗಳಲ್ಲಿ ಬರೆಯಲ್ಪಡುತ್ತಿದ್ದ ಕಾಲ್ಪನಿಕ ಕಥನ ಪಠ್ಯಗಳನ್ನು ನಂತರ ಕಾದಂಬರಿಗಳೆಂದು ಗುರುತಿಸಿ ಅವುಗಳನ್ನು ಬಹುಪಾಲು ಪಾಶ್ಚಿಮಾತ್ಯ ಮಾದರಿಗಳ ಸಾಮೀಪ್ಯದ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಯಿತು. ಕಾದಂಬರಿಯ ಎರಡು ಮುಖ್ಯ ಅಂಗಗಳಾದ ಕಥನ ಹಾಗೂ ಭಾಷೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವಲ್ಲಿ ಯಶಸ್ಸು ಪಡೆದಿದೆ. ಆದರೆ ಅದರ ಅತ್ಯಂತ ಮಹತ್ತ್ವದ ಅಂಗವಾದ ಕಲ್ಪನೆ(ಫಿಕ್ಷನ್)ಯನ್ನು ಅದು ಸಂಪೂರ್ಣವಾಗಿ ಅಲಕ್ಷಿಸುತ್ತದೆ.

ಕಾದಂಬರಿ ರಚನೆಯಲ್ಲಿ ಒಂದು ಸಾರ್ವತ್ರಿಕ ವಿಧಾನವಿದೆಯೆಂದೂ ನಮಗೆ ಯುರೋಪಿನ ಮೂಲಕ ಅದರ ಪರಿಚಯವಾಗಿದ್ದು, ನಂತರದ ನಿರ್ದಿಷ್ಟ ದೀರ್ಘಕಥನ ಪಠ್ಯಗಳೆಲ್ಲವನ್ನೂ ಅಲ್ಲಿ ನಿಖರಗೊಳಿಸಿರುವ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕೆಂಬ ನಿರ್ವಿವಾದ ಪೂರ್ವಸಿದ್ಧಾಂತದ ತಳಹದಿಯ ಮೇಲೆ ಸಾಹಿತ್ಯಕ ಚರಿತ್ರೆಕಾರರು ತಮ್ಮ ಒರೆಗಲ್ಲನ್ನು ವಿಧಿವತ್ತುಗೊಳಿಸಿದರು. ಹಾಗಾಗಿ ಭಾರತದಲ್ಲಿ ಯೂರೋಪಿನ ಪ್ರಕಾರದಲ್ಲಿ ಸ್ಥಳೀಯ ವಿಷಯಗಳನ್ನು ಸೇರಿಸಿದಂತಹ ದೀರ್ಘ ಕಥನ ನಿರೂಪಣೆಗಳಿಗೆ ಮಾತ್ರ 'ಕಾದಂಬರಿ'ಯೆಂಬ

ಪ್ರಶಸ್ತಿ ಅನುಗ್ರಹಿಸಿ ಅವುಗಳಿಗೆ ಸಾಹಿತ್ಯದ ಸ್ಥಾನಮಾನ ಒದಗಿಸಿಕೊಡಲಾಯಿತು.

ಒಂದು ನಿರ್ದಿಷ್ಟ ರೀತಿಯ ಬರವಣಿಗೆಗಳು ಕಾದಂಬರಿಯ ಪ್ರಕಾರಗಳು ಎಂಬುದು ಬ್ರಿಟಿಷರಿಂದ ನಮಗೆ ಬಳುವಳಿಯಾಗಿ ಬಂದಿತೆಂದು ಹೇಳಬಹುದು. ಆದರೆ ಆ ನಿರ್ದಿಷ್ಟ ಪ್ರಕಾರದ ಬರವಣಿಗೆ ಎಂದರೇನು? ಅವುಗಳು ಏಕೆ ಉಗಮವಾದವು ಎಂಬುದನ್ನೂ ನಾವು ನೋಡಬೇಕಾಗಿದೆ? ಅದಕ್ಕೆ ಅದರ ಮೂಲಸ್ಥಾನದಲ್ಲಾದ ಬೆಳವಣಿಗೆಗಳನ್ನು ನೋಡಬಹುದು.

ಕಾದಂಬರಿಗಳ ಉಗಮ

ಕಾದಂಬರಿಗಳನ್ನು ಸಮಾಜ ಮತ್ತು ಇತಿಹಾಸದ ಬೈಬಲ್ ಎಂದೇ ನಂಬಿರುವಇಂದಿನ ಸಂದರ್ಭದಲ್ಲಿ ಅವುಗಳ ಮೂಲವನ್ನು ಹುಡುಕುವುದು ಸಮಯೋಚಿತವಾಗಿದೆ. ಯಾವ ಸಂಗತಿಗಳನ್ನು ಕಾದಂಬರಿಗಳ ಪ್ರಕಾರ ಎಂದು ನಂಬಿದ್ದೇವೆಯೋ ಅವುಗಳು ಆ ಪ್ರಕಾರಗಳಾಗಿ ಯಾವುದೋ ಉದ್ದೇಶವನ್ನು ಈಡೇರಿಸಲು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಸ್ತಿತ್ವಕ್ಕೆ ಬಂದವು ಎಂದರೆ ನಂಬಲೇಬೇಕು, ಏಕೆಂದರೆ ಅದರ ಇತಿಹಾಸವನ್ನು ನೋಡಿದರೆ ನಮಗೆ ಸ್ಪಷ್ಟತೆ ದೊರೆಯುತ್ತದೆ. ಮೊದಲು ಯೂರೋಪಿನಿಂದ ಪ್ರಾರಂಭಿಸುವುದಾದರೆ, ಯುರೋಪಿನಲ್ಲಿ ಕಾದಂಬರಿಯ ಉದಯಕ್ಕೂ ಬಂಡವಾಳ ಶಾಹಿಯ ಪ್ರಭುತ್ವಕ್ಕೂ ನಿಕಟವಾದ ಸಂಬಂಧವಿದೆ ಎನ್ನುವುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಔದ್ಯೋಗಿಕ ಕ್ರಾಂತಿಯ ನಂತರ ಫ್ಯೂಡಲ್ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆ ಕುಸಿಯತೊಡಗಿ ಬೂರ್ಶ್ವಾ ವರ್ಗ ಮೇಲ್ಗೈ ಸಾಧಿಸಿದ ನಂತರ ಕಾದಂಬರಿ ಅದರ ಆಶೋತ್ತರಗಳಿಗೆ ಪ್ರತಿಸ್ಪಂದಿಸತೊಡಗಿತು. ಅಂದರೆ ಕಾದಂಬರಿಗಳು ಸಮಾಜದ ಯಾವುದೋ ಒಂದು ಆಶೋತ್ತರಗಳಿಗೆ ಬಂದಂತಹ ನಿಲುವಾಗಿದೆ ಎಂಬುದು ಇದರ ಅರ್ಥ.

ಆದರೆ ಭಾರತದಲ್ಲಿ ಬಂದಂತಹ ಸಂದರ್ಭ ಮಾತ್ರ ಇದಕ್ಕೂ ಭಿನ್ನವಾಗಿಯೇ ಇದೆ. ಭಾರತದಲ್ಲಿಯೂ ಕಾದಂಬರಿ ಫ್ಯೂಡಲ್ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಬಂದಿದೆಯಾದರೂ, ಅದರ ನೇರ ಸಂಬಂಧವಿರುವುದು ವಸಾಹತುವಾದದ ಅನುಭವದೊಡನೆ ಎನ್ನುವುದು ಅದರ ಮತ್ತೊಂದು ಮಜಲು. ಭಾರತದಲ್ಲಿ ಯುರೋಪಿಯನ್‌ರ, ಮುಖ್ಯವಾಗಿ ಬ್ರಿಟಿಷರ ಆಗಮನ ನಂತರ ನಡೆದ ವ್ಯಾಪಕ ಮುಖಾಮುಖಿಯ ಪರಿಣಾಮಗಳು ಭಾರತೀಯ ಸಂಸ್ಕೃತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನುಂಟು ಮಾಡಿದವು. ಈ ಸಂದರ್ಭದಲ್ಲಿ ಭಾರತೀಯರ ಪ್ರತಿಕ್ರಿಯೆ ಎರಡು ರೀತಿಯಲ್ಲಿ ಕಂಡುಬರುತ್ತವೆ. ಒಂದು ಭಾರತೀಯರು ಭಾರತೀಯ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಯ ಮೌಲ್ಯಗಳ ಬೆಳಕಿನಲ್ಲಿ ಪರಿಕ್ಷಿಸತೊಡಗಿದರು. ಇದರಿಂದ ಇತಿಹಾಸಕ್ಕೆ ಚಾಲನೆ ದೊರೆತು ಪರಿವರ್ತನೆಯ ಪ್ರಕ್ರಿಯೆ ವೈಯಕ್ತಿಕ ಮತ್ತು ಸಾಮಾಜಿಕ ಜೀವನದ ಎಲ್ಲಾ ಸ್ತರಗಳನ್ನೂ ವ್ಯಾಪಿಸಿಕೊಂಡಿತು. ಇನ್ನೊಂದು ಅನ್ಯ ಸಂಸ್ಕೃತಿಯ ಮೌಲ್ಯಗಳ ಸ್ವೀಕೃತಿಯಿಂದಾಗಿ ಭಾರತೀಯ ಸಂಸ್ಕೃತಿಯ ನಾಶವು ಜೊತೆಯಲ್ಲಿಯೆ ಆರಂಭವಾಯಿತು.

ಪಾಶ್ಚಿಮಾತ್ಯರಲ್ಲಿ ಕಾದಂಬರಿಗಳು ಬ್ರಿಟಿಷ್ ವಿಕ್ಟೋರಿಯನ್ ಕಾಲ್ಪನಿಕ ಕಥನದ 'ವಾಸ್ತವತೆಯ' ಅಂಶಗಳನ್ನು ಪುನರ್ರೂಪಿಸುವುದು ಮೊದಲ ಕಾದಂಬರಿಕಾರರ ಮಹದ್ದೇಚ್ಛೆಯಾಗಿತ್ತು. ಭಾರತದಲ್ಲಿ ಕಾದಂಬರಿಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಚರಿತ್ರೆ ಮತ್ತು ಚರಿತ್ರಾರಚನೆಯ ಉಗಮದ ಸಂದರ್ಭದಲ್ಲಿಯೇ ಆರಂಭವಾದವು. ಅಂತೆಯೆ ಭಾರತೀಯರಿಗೆ 'ದೇಶಿ' ಬದುಕಿನ ಅಂಶಗಳನ್ನು ಭಾರತೀಯ ಭಾಷೆಗಳ ಕಥನ ನಿರೂಪಣೆಗಳಲ್ಲಿ ದಾಖಲಿಸಲು ಬ್ರಿಟಿಷ್ ಆಡಳಿತಗಾರರು ಹಲವಾರು ಸ್ಪರ್ಧೆ ಮತ್ತು ಬಹುಮಾನಗಳನ್ನು ಘೋಷಿಸಲಾಗುತಿತ್ತು. ಈ ಕ್ರಿಯೆಯು ಕೂಡ ಭಾರತೀಯರು ಪಾಶ್ಚೀಮಾತ್ಯರ ಅನುಕರಣೆಯನ್ನು ಮಾಡಲು ಕಾರಣವಾಗಿರಬಹುದು.

ಈ ಹಿನ್ನೆಲೆಯಲ್ಲಿ ರಚನೆಯಾದ ಮೊದಲ ತಲೆಮಾರಿನ ಬರಹಗಾರರಲ್ಲಿ 'ಕಾಲ್ಪನಿಕ'ಕ್ಕಿಂತ ಪ್ರಜ್ಞಾಪೂರ್ವಕವಾಗಿ ಹೆಚ್ಚು ಆದ್ಯತೆ ನೀಡುವುದು ಸಾಮಾನ್ಯವಾಗಿತ್ತು. ಅಂದರೆ ನಮ್ಮ ನೆಲದ ಪೌರಾಣಿಕ ಕಥೆಗಳನ್ನು ತಿರಸ್ಕರಿಸುವುದಾಗಿತ್ತು. (ಉದಾ. ಮುವತ್ತು ಅಡಿ ಎತ್ತರದ ರಾಜರು, ಮುವತ್ತು ಸಾವಿರ ವರ್ಷಗಳ ರಾಜ್ಯಭಾರದ ಚರಿತ್ರೆ, ಬೆಣ್ಣೆಯ ಸಾಗರ, ದೈವೀ ಅಥವಾ ಪವಾಡ ಪುರುಷರ ಅಸ್ತಿತ್ವ, ಮುಂತಾದವು)

ಹತ್ತೊಂಬತ್ತನೆಯ ಶತಮಾನದ ಮಧ್ಯಮವರ್ಗದ ಭಾರತೀಯನ ಬೌದ್ಧಿಕ ಅಭಿವೃದ್ಧಿಯಲ್ಲಿ ಮತ್ತು ಪ್ರಜಾ ಸಮಾಜದ ಉಗಮದ ಸಮಯದಲ್ಲಿ ಗದ್ಯದ ಸಂವಾದ ಒಂದು ಬಹುಮುಖ್ಯ ಅಂಶವಾಯಿತು. ಈ ಬದಲಾವಣೆಯ ಹಿಂದೆ ಅಧಿಕಾರ ಮತ್ತು ವಿದ್ವತ್ತಿನ ಪ್ರಕಾರಗಳಲ್ಲಾದ ಮಹತ್ತರ ಏರುಪೇರುಗಳು ಬ್ರಾಹ್ಮಣ್ಯದಿಂದ ಸರ್ವಧರ್ಮ ಸಮಾನತೆ–ಸಾಂಪ್ರದಾಯಕ ಪಂಡಿತರಿಗೆ ಅನುವಾದಕರಾಗಿ, ಮುನ್ಷಿಗಳಾಗಿ ಮತ್ತು ಪಠ್ಯಪುಸ್ತಕ ಬರಹಗಾರರಾಗಿ ಹೊಸ ಹೊಸ ಉದ್ಯೋಗಾವಕಾಶಗಳು ದೊರೆತದ್ದು ಕಾರಣವೆಂದು ಸಿ. ವಿಜಯಶ್ರೀ ಹೇಳುತ್ತಾರೆ. ಇವರು ತಿಳಿಸುವ ಪ್ರಕಾರ ತೆಲುಗಿನಲ್ಲಿ ಈಗಾಗಲೇ ತಳವೂರಿದ್ದ ಪ್ರವಾಸ, ಜೀವನ ಚರಿತ್ರೆ ಮತ್ತು ಚರಿತ್ರೆಯಂತಹ ಗದ್ಯ ನಿರೂಪಣೆಗಳಿಗೆ ಕೇಂದ್ರಬಿಂದುವಾಗಿ ಕಾದಂಬರಿ ಕಾಣಿಸಿಕೊಂಡಿತು. ಅಲ್ಲದೆ ಮುದ್ರಣ ತಂತ್ರಜ್ಞಾನ ಮತ್ತು ಓದಲು ಆಸಕ್ತರಾಗಿರುವ ಜನಸಮೂದಾಯದ ಲಭ್ಯತೆಯು ಗದ್ಯದ ಉಗಮಕ್ಕೆ ಕಾರಣವಾಯಿತು.

ಮತ್ತೊಂದು ಕಾರಣ, ಕ್ರಿಶ್ಚಿಯನ್ ಮಿಶನರಿಗಳು ಸಾಮಾಜಿಕ ಸುಧಾರಣೆಯ ಬಗೆಗಿನ ಕಾಳಜಿ ಹಾಗೂ ಪ್ರಸ್ತುತ ವಿಷಯಗಳ ಬಗೆಗಿನ ಸಂವಾದಕ್ಕಾಗಿ ವೇದಿಕೆಗಳಾಗಿ ಪ್ರಾರಂಭಿಸಿದ ಪತ್ರಿಕೆ, ನಿಯತಕಾಲಿಕೆಗಳು ಮುಂತಾದ ಅಂಶಗಳನ್ನು ಈ ಸಂಪುಟದಲ್ಲಿನ ಕೆಲವು ಪ್ರಬಂಧಗಳು ಗಣನೆಗೆ ತೆಗೆದುಕೊಂಡಿವೆ. ಒಟ್ಟಿನಲ್ಲಿ ಕಾದಂಬರಿಗಳಲ್ಲಿರುವ ಆಶಯ ಪಾಶ್ಚಾತ್ಯವಾಗಿಲ್ಲದಿದ್ದರೂ, ಪಾಶ್ಚಾತ್ಯ ಮಾನದಂಡಗಳನ್ನಿಟ್ಟುಕೊಂಡೆ ರಚನೆಯಾಗಿರುವಂತವುಗಳಾಗಿವೆ. ಹಾಗೂ ಕಾದಂಬರಿಗಳಲ್ಲಿರುವ ಆಶಯಗಳು ಎಷ್ಟು ಸಮಂಜಸವಾಗಿವೆ ಅಥವಾ ವಾಸ್ತವವಾಗಿವೆ ಎನ್ನುವುದು ಪ್ರಶ್ನೆಯಾಗಿಯೆ ಉಳಿದುಕೊಳ್ಳುತ್ತದೆ.

ಸಾಮಾಜಿಕ ಹೋರಾಟಕ್ಕೆ ಪ್ರೇರಣೆ

ಕಾದಂಬರಿ, ಚರಿತ್ರೆ, ರಾಷ್ಟ್ರ–ರಾಜ್ಯದ ಕಲ್ಪನೆಗಳೆಲ್ಲ ಆಧುನಿಕತೆಯ ಸಂಕೇತಗಳು ಎನ್ನುವ ಅಭಿಪ್ರಾಯಗಳು ಈಗಾಗಲೇ ನಮ್ಮ ಮುಂದೆ ಇವೆ. ಒಂದಲ್ಲ ಒಂದು ಕಾರಣಗಳಿಂದ ಕಾದಂಬರಿಗಳ ಬರವಣಿಗೆ ಶುರುವಾದವು. ಆದರೆ ಕಾಲಗತಿಯಲ್ಲಿ ಬರವಣಿಗೆಗಳ ಅಭಿರುಚಿಗಳು ಮತ್ತು ಕಾದಂಬರಿಗಳ ವಿಷಯಗಳು ಬದಲಾವಣೆಗೊಳ್ಳತೊಡಗಿದವು. ಉದಾ: ಮೊದಲ ಕಾದಂಬರಿಗಳು ಪ್ರಸ್ತುತ ಸಮಯದ ಪರಿಸ್ಥಿತಿಗಳನ್ನ ವಾಸ್ತವವೆನಿಸುವ ರೀತಿ ಚಿತ್ರಿಸಿದವು. ಇನ್ನೂ ಹೆಚ್ಚು ಕಾದಂಬರಿಗಳು ಪ್ರೇಮ ಕಾದಂಬರಿಗಳಾಗಿ ಮೂಡಿಬಂದವು. ಮತ್ತೆ ಕೆಲವು ಮಧ್ಯಕಾಲೀನ ಚರಿತ್ರೆಯ ಕತೆಗಳು ರೂಪುಗೊಳ್ಳುತ್ತಿದ್ದ ರಾಷ್ಟ್ರೀಯತೆಯ ಸಂವಾದದ ಭಾಗಗಳಾಗಿದ್ದವು.

ಕಾದಂಬರಿಗಳು ಕೆಲವು ಸಂದರ್ಭಗಳಲ್ಲಿ ಹೋರಾಟಕ್ಕೆ ಸ್ಪೂರ್ತಿಗಳಾದವು ಅಂದರೆ, ವಿದೇಶಿ ಆಕ್ರಮಣಕಾರರನ್ನು ಎದುರಿಸಲು ದಬ್ಬಾಳಿಕೆಗೆ ಒಳಗಾದ ಜನರಲ್ಲಿ ಸ್ಫೂರ್ತಿ ತುಂಬುವ ಕೆಲಸವನ್ನು ಮಾಡಿದವು. ಇವುಗಳು ಸ್ವಾಭಿಮಾನವನ್ನು ಕೆರಳಿಸುವ ಮಾನದಂಡಗಳಾದವು. ಹೆಚ್ಚಿನ ಕಾದಂಬರಿಗಳು ಮುಸಲ್ಮಾನಾಕ್ರಮಣಕಾರರನ್ನು ಎದುರಿಸುವ ಹಿಂದೂಗಳ

ಕಥೆಗಳಾಗಿರುತ್ತಿದ್ದವು. ಚರಿತ್ರಾಕಾರರು, ರಾಜಕೀಯ ಸಿದ್ಧಾಂತಿಗಳು ಮತ್ತು ಸಾಹಿತ್ಯದ ವಿದ್ಯಾರ್ಥಿಗಳು ಬೇರೆ ಬೇರೆ ರೀತಿಯಲ್ಲಿ ಅರ್ಥೈಸುವ ರಾಷ್ಟ್ರವೆನ್ನುವ ಪರಿಕಲ್ಪನೆ ಇವುಗಳಲ್ಲಿ ರೂಪುಗೊಳ್ಳತೊಡಗಿತು. ನಂತರದಲ್ಲಿ ಈ ಸಾಹಿತ್ಯದ ಚರ್ಚೆಯಲ್ಲಿ ಸಮಾಜದಲ್ಲಿನ ಮಹಿಳೆಯ ಸ್ಥಾನಮಾನಗಳ ಕುರಿತು ರಚನೆಯಾಗತೊಡಗಿದವು. ಅಂದರೆ ಮಹಿಳಾ ಕೇಂದ್ರೀಕೃತ ವಿಷಯಗಳನ್ನೆ ಮುಂಚೂಣಿಯನ್ನಾಗಿಸಿದವು.

ಅಷ್ಟೆ ಅಲ್ಲದೆ, ಉತ್ತರದಲ್ಲಿ ಸುಧಾರಣಾ ಆಂದೋಲನಗಳು ಧರ್ಮದ ಬಗ್ಗೆ ಕೇಂದ್ರೀಕರಿಸಿದರೆ, ದಕ್ಷಿಣದಲ್ಲಿ ಜಾತಿಯ ಬಗ್ಗೆ ಕೇಂದ್ರೀಕರಿಸಿದವು. ಈ ರೀತಿಯಲ್ಲಿ ಕಾದಂಬರಿಗಳ ರಚನೆಗಳು ಒಂದಲ್ಲ ಒಂದು ಸಾಮಾಜಿಕ ವಿಷಯಗಳ ಪ್ರಚಾರಕ್ಕೆ ಸಾಮಾಜಿಕ ಹೋರಾಟದ ಹಾದಿಗೆ ಪ್ರೇರಣೆಯಾಗತೊಡಗಿದವು. ವಿವೇಕ್ ಧಾರೇಶ್ವರ್‌ರವರು ಹೇಳುವಂತೆ, 'ಮೊದಲ ಕಾದಂಬರಿಗಳಲ್ಲಿ ಕಾಣುವುದು ಆಧುನಿಕ ಜಾತ್ಯಾತೀತ ಸ್ವಂತಿಕೆಯ ನಿರ್ಮಾಣ ಹಾಗೂ ಅದು ಸಾಂಪ್ರಾದಾಯಕತೆ ಮತ್ತು ಆಧುನಿಕತೆಯೊಂದಿಗೆ ಮುಖಾಮುಖಿಯಾಗಿ ತನ್ನ ನಿರ್ಮಾಣದ ಪ್ರಕ್ರಿಯೆಯಲ್ಲಿ ಸಂಘರ್ಷ ಹಾಗೂ ಸಮ್ಮಿಳಿತ ಎರಡರಲ್ಲೂ ತೊಡಗಿಸಿಕೊಳ್ಳುತ್ತದೆ. ಈ ದೃಷ್ಠಿಯಲ್ಲಿ ಕಾದಂಬರಿಯು ಜಾತ್ಯಾತೀತ ಸ್ವಂತಿಕೆಯ ಆತ್ಮಚರಿತ್ರೆಯು ಆಗಿದೆ.

ಆಧುನಿಕವಾಗಲು ಬಯಸುವ ಜಾತ್ಯಾತೀತ ಸ್ವಂತಿಕೆಯು ಸದಾ ಮೇಲ್ಜಾತಿಗೆ ಸೇರಿದುದಾಗಿತ್ತು. ಅಂದರೆ ಇಂಗ್ಲಿಷ್ ಶಿಕ್ಷಣದ ಪ್ರಭಾವಕ್ಕೆ ಒಳಗಾದ ಕೆಲವರು ತಮ್ಮ ಬರವಣಿಗೆಯಲ್ಲಿ ಪ್ರಗತಿಯನ್ನು ಸಾಧಿಸುವಂತ, ಸಂಸ್ಕೃತಿಯನ್ನು ಮರು ಸಜ್ಜುಗೊಳಿಸುವ, ವ್ಯಕ್ತಿ ಮತ್ತು ಕುಟುಂಬವನ್ನು ಪುನರ್‌ರಚಿಸುವ ಕೆಲಸವನ್ನು ಮಾಡುವ ರೀತಿಯಲ್ಲಿ ಪ್ರೇರಣೆಯನ್ನು ನೀಡುವಂತೆ ಕಾದಂಬರಿಗಳನ್ನು ರಚಿಸತೋಡಗಿದರು. ಅಂತಯೇ ಅವುಗಳು ಕನ್ನಡ ಕಾದಂಬರಿಗಳಲ್ಲಿ ನಾಟಕೀಕರಣ ರೂಪದಲ್ಲಿ ಕಂಡುಬರುತ್ತವೆ.

ಇದಕ್ಕೆ ಮುಂದುವರೆದಂತೆ ಪಾರ್ಥ ಚಟರ್ಜಿಯವರು ಹೇಳುವಂತೆ, 'ಆಧುನಿಕ ಜಾತ್ಯಾತೀತ ಸ್ವಂತಿಕೆಯು ತನ್ನ ಗುರಿಯನ್ನು ಸಾಧಿಸಲು ಆಧ್ಯಾತ್ಮಿಕ/ಧಾರ್ಮಿಕ ಹಾಗೂ ಪ್ರಾಪಂಚಿಕ ನೆಲೆಗಳ ನಡುವಿನ ವಿಭಜನೆಯನ್ನು ಬಳಸಿಕೊಳ್ಳುತ್ತದೆ'. ಅಂದರೆ ಕನ್ನಡದ ಸುಧಾರಣಾ ಕಾದಂಬರಿಗಳಲ್ಲಿ ಆಧ್ಯಾತ್ಮಿಕ/ ಧಾರ್ಮಿಕ ಜಗತ್ತು ಇನ್ನೂ ಎರಡು ಗುಂಪಾಗಿ ವಿಭಜಿಸಿತು. ಒಂದು ಧರ್ಮದ ಅಂತಸ್ಸಾರ ಮೌಲ್ಯಗಳನ್ನು ತಿಳಿಸಿಕೊಡುತ್ತಿದ್ದರೆ, ಇನ್ನೊಂದು ಧರ್ಮದ ಪರದೆಯ ಹಿಂದೆ ಭ್ರಷ್ಟ ಆಚರಣೆಗಳಿವೆ, ಮೂಢನಂಬಿಕೆ, ಬಲವಂತದ ಆಚರಣೆಗಳು, ಕ್ರೌರ್ಯದ ವಿಧಾನಗಳಿವೆ ಎಂದು ನಂಬಲಾಗಿತ್ತು. ಆದ್ದರಿಂದ ಆಧುನಿಕತೆ ಅಂತಹ ವಿಚಾರ ಹೀನ ವಿಷಯಗಳನ್ನು ಬಿಟ್ಟು ಮುನ್ನೆಡೆಯುವುದು ಅವಶ್ಯಕವೆಂದು ನಂಬಿದ ಮತ್ತೊಂದು ವಿಭಾಗವು ತಮ್ಮ ಬರವಣಿಗೆ ಅಥವಾ ಕಥೆಯಲ್ಲಿ ಇಂತಹ ವಿಷಯಗಳನ್ನು ತರಲಾರಂಭಿಸಿದರು. ಮೊದಲ ಕನ್ನಡ ಕಾದಂಬರಿಗಳು ಒಂದು ಸಾಮಾಜಿಕ ಗುರುತನ್ನು ಸಾಧಿಸಲು ಕತೆಗಳನ್ನು ನಿರೂಪಿಸುವುದರಲ್ಲಿ ಮುನ್ನೆಡೆಯಿತು.

ಇಂಗ್ಲಿಷ್ ಶಿಕ್ಷಣ ಪಡೆದ ಶಿಕ್ಷಿತರು ತಮ್ಮ ಅಕ್ಷರ ಜ್ಞಾನ ಹಾಗೂ ಸಾರ್ವಜನಿಕ ಬದುಕಿನ ಸುಲಭ ಲಭ್ಯತೆಯಿಂದಾಗಿ ಸಿಕ್ಕ ಸೀಮಿತ ಅವಕಾಶಗಳನ್ನು ತಮ್ಮದಾಗಿಸಿಕೊಂಡರು. ಅವರು ತಮ್ಮ ಹೊಸ ವಾಸ್ತವತೆಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ಹೊಸ ಹೊಸ ರೂಪ ಪಡೆಯಲು ಯತ್ನಿಸಿದರು. ತಮ್ಮ ಸಮುದಾಯ/ ಸಾಮಾಜಿಕ ಗುರುತನ್ನು ಉಳಿಸಿಕೊಳ್ಳಲು ಯತ್ನಿಸಿದರು. ಹಾಗೆ ಕಾದಂಬರಿಗಳು ಸಾಮಾಜಿಕ ವಾಸ್ತವತೆಯನ್ನು ಪ್ರತಿಫಲಿಸುವಂತೆಯು ಹಾಗೆಯೆ ಚರ್ಚೆಗೆ ಸಿದ್ಧಪಡಿಸುವಂತೆಯು ಚರಿತ್ರೆಯನ್ನು ದಾಖಲಿಸುವಂತೆಯು ಕಂಡುಬರುತ್ತವೆ.

ಈ ರೀತಿಯಾಗಿ ಮುಂದುವರೆದ ಕಥಾ ವಿಷಯಗಳು ಧಾರ್ಮಿಕ ವಿಚಾರಗಳನ್ನು ಬಿಟ್ಟು ಇನ್ನೂ ಮುಂದುವರೆಯುತ್ತವೆ. ಅಂದರೆ ನಂತರದ ಕಾಲಾವಧಿಯಲ್ಲಿ ಹೆಚ್ಚಿನ ಕಾದಂಬರಿಗಳ ವಿಷಯಗಳು ಮಹಿಳೆಯನ್ನು ಆಧರಿಸಿ ರಚನೆಯಾಗುತ್ತ ಬರುತ್ತವೆ. ಉದಾ: ವಿಧವಾ ವಿವಾಹ, ಬಾಲ್ಯವಿವಾಹ, ಲೈಂಗಿಕತೆ, ತಾರತಮ್ಯ ಮುಂತಾದವು. ನಂತರ ಜಾತಿಯ ಕುರಿತು ಸ್ವ ಸಮುದಾಯದ ಕುರಿತು ಮೂಡಿಬರುತ್ತವೆ. ಹಂತೆಯೆ ಭಾಷೆ ರಾಷ್ಟ್ರೀಯ ಭಾವನೆಯ ಕುರಿತು ಮುಂತಾದ ವಿಷಯಗಳು ಕಾದಂಬರಿಗಳ ಕಥಾ ಭಾಗಗಳಾಗುತ್ತವೆ. ಹೀಗೆ ಕಾದಂಬರಿಗಳು ಸಮಾಜ ಸುಧಾರಣೆಯ ಅಂಗವಾಗಿ ಮಾನ್ಯತೆಯನ್ನು ಪಡೆದುಕೊಳ್ಳುತ್ತ ಬಂದಿವೆ.

ಕಾದಂಬರಿಗಳು ಮತ್ತು ವಸಾಹತುಕರಣ

ಹೊಸ ಅನುಭವದ ಸಂದರ್ಭದಲ್ಲಿ ನಮ್ಮೆದುರು ಎರಡು ಪರ್ಯಾಯಗಳಿರುತ್ತವೆ. ಒಂದು ಅದನ್ನು ಸೃಜನಾತ್ಮಕವಾಗಿ ಎದುರಿಸುವುದು. ಇನ್ನೊಂದು, ಅದರಿಂದ ತಪ್ಪಿಸಿ ಕೊಳ್ಳುವುದು. ಭಾರತೀಯ ಸಮಾಜ ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ವಸಾಹತು ವಾದದ ಆಹ್ವಾನವನ್ನು ಸ್ವೀಕರಿಸಿತು. ಇದನ್ನು ಮಹಾತ್ಮ ಗಾಂಧಿಯವರ ಹಿಂದ್ ಸ್ವರಾಜ್ ಈ ದೃಷ್ಟಿಯಿಂದ ಇನ್ನೂ ಪ್ರಸ್ತುತವಾಗಿದೆ. ಈ ಹಿನ್ನೆಲೆಯಲ್ಲಿ "ಭಾರತೀಯ ಕಾದಂಬರಿಯ ಇತಿಹಾಸವನ್ನು ನೋಡಿದಾಗ ಎರಡು ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಮೊದಲನೆಯದು ವಾಸ್ತವವಾದ, ಎರಡನೇಯದು ರಮ್ಯವಾದ. ಭಾರತದಲ್ಲಿ ಕಾದಂಬರಿ ತಲೆದೂರುವ ವೇಳೆಗೆಂದರೆ ಯುರೋಪಿನಲ್ಲಿ ವಾಸ್ತವವಾದದ ಮಹಾಯುಗ ಕಳೆದುಹೋಗಿತ್ತು. ಆದರೆ ಈ ಮಾದರಿಗಳೇ ಆಗಿನ ಲೇಖಕರೆದುರು ಇದ್ದುದರಿಂದ ಅವುಗಳನ್ನು ಸ್ವೀಕರಿಸುವುದು ಒಂದು ರೀತಿಯಿಂದ ಅನಿವಾರ್ಯವಾಯಿತು. ಇಂಗ್ಲಿಷನ್ನು ಒಳಗೊಂಡಂತೆ ಭಾರತದ ಭಾಷೆಗಳಲ್ಲಿ ಹುಟ್ಟಿಕೊಂಡ ಮೊದಲ ಕಾದಂಬರಿಗಳಲ್ಲಿ ವಾಸ್ತವ ವಾದದ ಮಾರ್ಗವನ್ನು ಅನುಸರಿಸಿರುವುದು ತಿಳಿದುಬರುತ್ತದೆ".

ಜೆ.ಎಸ್. ಅಮೂರರವರು 'ಕಳೆದ ಒಂದು ಶತಮಾನದ ಕನ್ನಡ ಕಾದಂಬರಿಗಳನ್ನು ಅವಲೋಕಿಸಿದಾಗ ಕಾದಂಬರಿಗಳು ಹಲವಾರು ಆಯಾಮಗಳಲ್ಲಿ ಅಂದರೆ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಕೌಟುಂಬಿಕ, ವೈಯಕ್ತಿಕ ಹೀಗೆ ಗೋಚರವಾಗುತ್ತವೆ' ಎಂದು ಅಭಿಪ್ರಾಯ ಪಡುತ್ತಾರೆ. ಆಧುನಿಕತೆ ಕನ್ನಡದಲ್ಲಿ ಕಾವ್ಯಕ್ಕಿಂತಲೂ ಮೊದಲು ಕಾದಂಬರಿಯಲ್ಲಿ ಕಾಣಿಸಿಕೊಂಡಿತೆನ್ನುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ತ್ವದ್ದಾಗಿದೆ. 1875ರಿಂದ 1930ರ ವರೆಗಿನ ಕಾಲವನ್ನು ಕನ್ನಡ ಕಾದಂಬರಿಯ ಉದಯದ ಕಾಲವೆಂದು ಗುರುತಿಸ ಲಾಗಿದೆ. ಈ ಘಟನೆಯ ಹಿಂದಿನ ಮುಖ್ಯ ಪ್ರೇರಣೆ ಇಂಗ್ಲಿಷ್ ಶಿಕ್ಷಣದಿಂದ ನೇರವಾಗಿ, ಬಂಗಾಲಿ ಹಾಗೂ ಮರಾಠಿಗಳಂಥ ಭಾರತೀಯ ಭಾಷೆಗಳಿಂದ ಸುತ್ತಾಗಿ ಹರಿದುಬಂದ ಪಾಶ್ಚಾತ್ಯ ಪ್ರಭಾವವೆಂಬುದು ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಸಲ ದಾಖಲಾದ ಮಾತು.ಈ ಪಾಶ್ಚಾತ್ಯ ಪ್ರಭಾವವು ಸಾಹಿತ್ಯಕ್ಕಷ್ಟೆ ಸೀಮಿತವಾಗಿರದೆ ರಾಜಕೀಯ ಹಾಗೂ ಸಾಂಸ್ಕೃತಿಕ ಮುಖಾಮುಖಿಯ ಸಮಸ್ಯೆಯು ಆಗಿದೆ.

ಈಗಾಗಲೇ ಜನಪದ ಸಾಹಿತ್ಯದಲ್ಲಿಯೂ ಕಥೆ ಬಹಳ ಹಿಂದೆಯೇ ತನ್ನ ಪ್ರಭಾವವನ್ನು ಬೀರಿತ್ತು. ಪಾಶ್ಚಾತ್ಯ ಕಾದಂಬರಿಯ ಕಥನ ಸಾಹಿತ್ಯ ನಮ್ಮಲ್ಲಿ ಬಂದಾಗ ಸಹಜವಾಗಿಯೇ ದೇಶಿಯ ಪರಂಪರೆಯನ್ನು ಒಳಗೊಂಡು ಬೇರೆ ಸ್ವರೂಪವನ್ನು ತಳೆಯಿತು. ಭಾರತೀಯ ಕಾದಂಬರಿಯನ್ನು ಪಾಶ್ಚಾತ್ಯ ಸಾಹಿತ್ಯ ಗಾಢವಾಗಿ ಪ್ರಭಾವಿಸಿದೆ. ಭಾರತೀಯ ಕಾದಂಬರಿಗಳು

ಪಾಶ್ಚಾತ್ಯ ಪ್ರಭಾವದಲ್ಲಿಯೇ ಹುಟ್ಟಿ ಬೆಳೆಯುತ್ತಿರುವುದರಿಂದ ಅವುಗಳ ಮೌಲ್ಯಮಾಪನವನ್ನು ಪಾಶ್ಚಾತ್ಯ ಸಂದರ್ಭಲ್ಲಿಯೇ ಮಾಡುವುದು ಅನಿವಾರ್ಯವಾಗಿದೆ. ಬೌದ್ಧಿಕ ವಲಯದಲ್ಲಿ ಈ ರೀತಿಯ ಅಭಿಪ್ರಾಯಗಳು ಕೂಡ ಕಂಡುಬಂದಿವೆ.

ಒಟ್ಟಿನಲ್ಲಿ ಕಾದಂಬರಿಗಳು ವಸಾಹತುಶಾಹಿತ್ವಕ್ಕೆ ಮತ್ತದರ ಪ್ರಶ್ನೆಗಳಿಗೆ ಸ್ಪಂದಿಸುವ ಕಾರ್ಯವನ್ನು ಮಾಡಿತ್ತೇ ವಿನಹ ವಚನಕಾರರ ಆಶಯಗಳನ್ನು ನೈಜವಾಗಿ ಪಸರಿಸುವ ಕಾರ್ಯವನ್ನು ಮಾಡಲಿಲ್ಲ. ಕಾದಂಬರಿಗಳು ವಚನಗಳನ್ನು ಮತ್ತು ಆ ಚಳುವಳಿಯ ಮಹತ್ತ್ವವನ್ನು ವಿವರಿಸುವುದಕ್ಕಿಂತ, ಪಾಶ್ಚಾತ್ಯರಿಗೆ ಅಗತ್ಯವಿರುವ ಉತ್ತರವನ್ನು ನೀಡುವುದು ಅತ್ಯಂತ ಅವಸರದ ಕೆಲಸವಾಗಿತ್ತು, ಮತ್ತು ಅದುವೇ ಅದರ ಮುಂದುವರೆದ ಕಾರ್ಯದ ಭಾಗವೂ ಆಯಿತು.

---

1. ವಚನ ಸಾಹಿತ್ಯವನ್ನು ಮತ್ತು ಸಂಪ್ರದಾಯವನ್ನು ಹಲವಾರು ರೀತಿಯಲ್ಲಿ ಅರ್ಥೈಸುವ ಕಾರ್ಯವನ್ನು ಬೌದ್ಧಿಕವಲಯ ನಡೆಸಿಕೊಂಡು ಬಂದಿದೆ. ಅದೊಂದು ಅಧ್ಯಾತ್ಮ ಚಳುವಳಿ, ಸಾಮಾಜಿಕ ಚಳುವಳಿ ಹಾಗೂ ಅವೆರಡರ ಮಿಶ್ರಣವೂ ಹೌದು ಎನ್ನುವಂತಹ ತರಹೇವಾರಿ ಚಿತ್ರಣಗಳು ನಮ್ಮ ಮುಂದೆ ಇವೆ. ಆದರೆ, ಲೇಖನದ ಉದ್ದೇಶ ವಚನಗಳನ್ನು ಮತ್ತು ವೀರಶೈವ ಸಂಪ್ರದಾಯಗಳನ್ನು ಸಾಮಾಜಿಕ ಚಳುವಳಿ ಎಂದು ನಿರ್ದಿಷ್ಟವಾಗಿ ಚಿತ್ರಿಸುವಲ್ಲಿರುವ ಪ್ರಧಾನವಾದ ಸಂಪನ್ಮೂಲವನ್ನು ಮಾತ್ರ ಹುಡುಕುವುದಾಗಿದೆ. ಆದ್ದರಿಂದ, ವೈವಿಧ್ಯಮಯ ವಿವರಣೆಗಳನ್ನು ಇಲ್ಲಿ ನಮೂದಿಸಲು ಹೋಗುವುದಿಲ್ಲ. ಆದರೆ ಸಾಮಾಜಿಕ ಹೋರಾಟ ಎಂದು ಚಿತ್ರಿಸಿರುವ ಚಿಂತಕರು ಮತ್ತು ಕೃತಿಗಳು ಈ ಮುಂದಿನಂತಿವೆ: ಎಮ್.ಎಮ್.ಕಲಬುರ್ಗಿ–2010. ಹಿರೇಮಲ್ಲೂರು ಈಶ್ವರನ್–1993, 1997. ಮುನಿಸಾಮಪ್ಪ–2009, ಎಚ್.ಎಸ್.ಪಾಟೀಲ್, ಎಮ್.ಎಸ್. ಅಶಾದೇವಿ, ಕೆ.ಆರ್. ದುರ್ಗಾದಾಸ್, ಮುಂತಾದವರು
2. ಹಂಪ ನಾಗರಾಜಯ್ಯ, 11 ಮಾರ್ಚ 2013, ಪ್ರಜಾವಾಣಿ, ಪುಟ ಸಂಖ್ಯೆ 5.
3. ಡಾ. ಎಸ್. ವಿದ್ಯಾಶಂಕರ, ಭೀಮಕವಿಯ ಬಸವ ಪುರಾಣ, 2008, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
4. ಎಸ್.ವಿದ್ಯಾಶಂಕರ್(ಸಂ), ಭೀಮಕವಿಯ ಬಸವ ಪುರಾಣ, 2008, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪುಟ–4.
5. ಪಾಲ್ಕುರಿಕೆ ಸೋಮನಾಥ, ಅನು ಡಾ.ಪಿ.ವಿ ನಾರಾಯಣ, ಆ,1 ಸಾ. 189–212.
6. ಎಸ್.ಎನ್.ಬಾಲಗಂಗಾಧರ, 2015, ಬುದ್ಧಿಜೀವಿಗಳ ಮೂಢನಂಬಿಕೆಗಳು; ವಸಾಹತು ಪ್ರಜ್ಞೆಯ ವಿಶ್ವರೂಪ ಭಾಗ–2. ಉತ್ತರ ಕನ್ನಡ: ನಿಲುಮೆ ಪ್ರಕಾಶನ. ಪು. 25–26,
7. ಮಲ್ಲಿಕಾರ್ಜುನ ಜೆ ಅಮ್ಮೆ, 2011. ಆಧುನಿಕ ಸಾಹಿತ್ಯದಲ್ಲಿ ಬಸವಣ್ಣ. ರಾಮನಗರ: ನೀಲಮಲೆ ಪಬ್ಲಿಷಿಂಗ್ ಹೌಸ್. ಪು:5
8. ಎಂ.ಚಿದಾನಂದ ಮೂರ್ತಿ, 'ವಚನ ಸಾಹಿತ್ಯ', 1975, ಪು–18, ಸಪ್ನ ಬುಕ್‌ಹೌಸ್: ಬೆಂಗಳೂರು.
9. ರಾಜರಾಮ ಹೆಗಡೆ(ಸಂ), ಕೊಟ್ಟ ಕುದುರೆಯನೇರಲರಿಯದೆ, 2015, ನಿಲುಮೆ ಪ್ರಕಾಶನ. ಈ ಕೃತಿಯಲ್ಲಿ 'ನಿರೂಪಣೆಗಳ ಸುಳಿಯಲ್ಲಿ ವಚನಗಳು' ಎಂಬ ಲೇಖನವನ್ನು ನೋಡಬಹುದಾಗಿದೆ.
10. ಅಮರನಾಥಶಾಸ್ತ್ರಿ ಲಿಂಗಸೂಗೂರು, ಸಂಗೀತ ಬಸವೇಶ್ವರ ನಾಟಕ, 1911, ಬೆಳಗಾವಿ:
ಕೃಷ್ಣರಾಯ ಅ.ನ, ಜಾತಿಹೀನನ ಮನೆಯ ಜ್ಯೋತಿ, 1938, ಬೆಂಗಳೂರು
ಸಿದ್ಧಯ್ಯ ಪುರಾಣಿಕ, ಆತ್ಮಾರ್ಪಣ, 1942, ಹೈದರಾಬಾದ್, ವೀರಶ್ಯವ ತರುಣ ಸಂಘ.
ಬೂಸನೂರು ಮಠ ಆರ್ ಸಿ, ಭಕ್ತಿ ಭಂಡಾರಿ ಮತ್ತು ಇತರೆ ನಾಟಕಗಳು, 1958, ಧಾರವಾಡ
ಲಂಕೇಶ್ ಪಿ, ಸಂಕ್ರಾಂತಿ, 1973, ಬೆಂಗಳೂರು: ಪತ್ರಿಕೆ ಪ್ರಕಾಶನ
ಚನ್ನಬಸಪ್ಪ ಗೊರುರು, ಜಗಜ್ಯೋತಿ ಬಸವೇಶ್ವರ, 1980, ಬೆಂಗಳೂರು
ಕಣಬರ್ಗಿಮಠ, ಕರಿಬಸವಯ್ಯ ಬಿಎಸ್, ವಿಶ್ವಧರ್ಮಿ ಬಸವಣ್ಣ, 1982, ಬೆಂಗಳೂರು:

ಕಂಠೀರವ ಕಲಾವೃಂದ.
ಕಾನಾಡ್ ಗಿರೀಶ್, ತಲೆದಂಡ, 1990, ಧಾರವಾಡ: ಮನೋಹರ ಗ್ರಂಥಮಾಲೆ. ಇನ್ನೂ ಮುಂತಾದ ನಾಟಕಗಳಲ್ಲಿ ವಚನಕಾರರನ್ನು ಚಳುವಳಿಗಾರರನ್ನಾಗಿ ಚಿತ್ರಿಸುವ ಪ್ರಯತ್ನ ಮಾಡಲಾಗಿದೆ.

11. ಮೀನಾಕ್ಷಿ ಮುಖರ್ಜಿ, ಜೆ.ಬಾಲಕೃಷ್ಣ(ಅನು), ಭಾರತದಮೊದಲ ಕಾದಂಬರಿಗಳು, 2011, ಪುಟ–x.
12. ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ನಂತರ ಸಮಾಜದ ಸಮಸ್ಯೆಗಳನ್ನು ಚಿತ್ರಿಸುವ ಇಂಗ್ಲೀಷ್ ಕಾದಂಬರಿಗಳು ಬೆಳಕಿಗೆ ಬರಲು ಪ್ರಾರಂಭಿಸಿದವು, ಅವುಗಳಲ್ಲಿ ಮುಖ್ಯವಾದವುಗಳೆಂದರೆ, Charles Dickens'ರವರ Oliver Twist (1837), A Christmas Carol(1843), Great Expectations(1860), Anthony Trollope ರವರ The Warden (1855), Barchester Towers (1857), H.G. Wells ರವರ The war of the worlds (1898),
13. ಶಿವರಾಮ ಕಾರಂತರು ರಚಿಸಿರುವ ಚೋಮನ ದುಡಿ ಕಾದಂಬರಿಯನ್ನು ಈ ನೆಲೆಗಟ್ಟಿನಲ್ಲಿಯೇ ನೋಡಲಾಗಿದೆ.
14. ಡಂಕಿನ್ ಝಳಕಿಯವರ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ (ಅಪ್ರಕಟಿತ) ಈ ವಾದವನ್ನು ಹೆಚ್ಚೆಚ್ಚು ಸ್ಪಷ್ಟಗೊಳಿಸುತ್ತಾ ಹೋಗುತ್ತಾರೆ, Vachanas as Caste Critiques: Oriental Expression of Native Experience, 2009 ಪು. 148-52,
15. ಉದಾಹರಣೆಗೆ, ಮೊದಲ ತೆಲುಗು ಕಾದಂಬರಿ ಶ್ರೀ ರಂಗರಾಜ ಚರಿತ್ರೆ(1872) ಸರ್ಕಾರ ಪ್ರಕಟಿಸಿದ ಸ್ಪರ್ಧೆಗಾಗಿ ಬರೆಯಲಾಗಿತ್ತೆಂದು ಸಿ. ವಿಜಯಶ್ರೀ ತಿಳಿಸುತ್ತಾರೆ. ಶಾಲಾ ತರಗತಿಗಳಿಗೆ ಮತ್ತು ಮಹಿಳೆಯರಿಗೆ ಸೂಕ್ತವಾಗಬಲ್ಲಂತಹ ಪುಸ್ತಕಗಳಿಗೆ ರೂ.1000 ರವರೆಗೂ ಬಹುಮಾನ ಕೊಡಲಾಗುವುದೆಂಬ ಸರ್ಕಾರದ ಅಧಿಸೂಚನೆಗೆ ಪ್ರತಿಕ್ರಿಯೆಯಾಗಿ ನಜೀರ್ ಅಹಮದ್‌ರವರು ಮಿರಾಟ್–ಉಲ್–ಉರೂಸ್(1869) ಬರೆದಿರಬಹುದೆಂದು ಮೊದಮ್ಮದ್ ಅಸಾವುದ್ದೀನ್ ಉಲ್ಲೇಖಿಸುತ್ತಾರೆ.
16. ಅದಕ್ಕೆ ಸಾಕ್ಷಿಯಾಗುವಂತೆ ಲಾಲ್ ಬೆಹಾರಿ ಡೆಯವರ ಗೋವಿಂದ ಸಾಮಂತ, 1875 ಇದರಲ್ಲಿ ಹಲವಾರು ಉಲ್ಲೇಖಗಳು ಕಂಡುಬರುತ್ತವೆ.
17. 1857 ರಲ್ಲಿ ಭಾರತದ ಕಾದಂಬರಿ ರಾಷ್ಟ್ರದ ಪರಿಕಲ್ಪನೆಯಲ್ಲಿ ಸಿಕ್ಕಿಹಾಕಿಕೊಂಡಿದೆ ಎಂಬುದನ್ನು ನಾಮ್ವರ್ ಸಿಂಗ್ ತಿಳಿಸುತ್ತಾರೆ. 1857 ರಲ್ಲಿಯೇ ಭಾರತೊಂದು ರಾಷ್ಟ್ರವೆಂಬ ಪರಿಕಲ್ಪನೆ ಪ್ರಾರಂಭ ವಾಯಿತು ಇಂತಹ ವರ್ಷದಲ್ಲಿಯೇ ಭಾರತದಲ್ಲಿ ಕಾದಂಬರಿಗಳ ರಚನೆ ಆರಂಭವಾದವು ಎಂದು ಹೇಳಲಾಗುತ್ತದೆ.
18. ಈ ಹಂತದಲ್ಲಿಯೂ ಸಾಂಕೇತಿಕವಾಗಿ ಮಹಿಳೆಯನ್ನು ರಾಷ್ಟ್ರಕ್ಕೆ ಹೋಲಿಸಿ ಅವಳನ್ನು ಮುಕ್ತಗೊಳಿಸಬೇಕೆಂದು ಪ್ರತಿಪಾದನೆಗಳು ಕಂಡುಬಂದವು. ಸಾಂಪ್ರದಾಯಕ ಆಚಾರ ವಿಚಾರ, ಆಧುನಿಕ ಮನೋಭಾವನೆಗಳು ಇವೆಲ್ಲವಕ್ಕು ಮಹಿಳೆ ವಸ್ತು ವಿಷಯವಾದಳು.
19. ದಿಲಿಪ್ ಮೆನನ್‌ರವರು Caste, Nationalism and Communisim in South India.(2007), Cambridge University Press, ಪುಸ್ತಕದ ಮುನ್ನುಡಿಯಲ್ಲಿ ವಿಷದವಾಗಿ ಈ ವಿಷಯವನ್ನು ಚರ್ಚಿಸುತ್ತಾರೆ.
20. ವಿವೇಕ್ ಧಾರೇಶ್ವರ್, ಕ್ಯಾಸ್ಟ್ ಅಂಡ್ ದ ಸೆಕ್ಯುಲರ್ ಸೆಲ್ಫ್ ಜರ್ನಲ್ ಆಫ್ ಆರ್ಟ್ಸ್ ಅಂಡ್ ಈಡಿಯಾಸ್, ಸಂ, 25–26, ಪು–115–126.
21. ಪಾರ್ಥ ಚಟರ್ಜಿ, ದ ನೇಶನ್ ಅಂಡ್ ಇಟ್ಸ್ ಪ್ರಾಗ್ಮೆಂಟ್ಸ್, 1995, ನವದೆಹಲಿ.
22. ಕೆಲವನ್ನು ಹೆಸರಿಸುವುದಾದರೆ, ಬಾಬಾ ಪದುಮನಜೀಯವರ ಮರಾಠೀ ಕಾದಂಬರಿ– ಯಮುನಾ ಪರ್ಯಟನ(1857), ಭಾರತೇಯ ಹರಿಶ್ಚಂದ್ರರ ಹಿಂದೀ ಕಾದಂಬರಿ ಅಂಧೇರ್ ನಗರೀ ಚೌಪಟ್ ರಾಜಾ(1881),
23. ಪ್ರಭಾವ ಬೀರಿದ ವಿಚಾರವನ್ನು ಪುಟ್ಟಣ್ಣನವರ ಮಾಡಿದುಣ್ಣೋ ಮಹಾರಾಯ, ಕರಿಮಾಯಿ ಮುಂತಾದವುಗಳಲ್ಲಿ ಗುರುತಿಸಬಹುದು.

ಕಾರಂತ ಸಾಹಿತ್ಯ
ಪರಿಸರ ವಿನಾಶ ಮತ್ತು ವಲಸೆ ರಾಜಕಾರಣ

ದೇವು ಹನೆಹಳ್ಳಿ
ಬಂಡಿಮಠ, ಹನೆಹಳ್ಳಿ ಗ್ರಾಮ, ಬಾರಕೂರು, ಉಡುಪಿ ತಾಲೂಕು–ಜಿಲ್ಲೆ.

ಸತ್ಯಮೇವ ಜಯತೆ ನ ಅನೃತಂ ಎಂಬ ಪರಮ ಪವಿತ್ರ ಸುಳ್ಳಿನ ಕೃಪಾಛತ್ರದಡಿಯಲ್ಲಿ ಮಾತನಾಡುವುದು, ಬದುಕುವುದು ಅದೆಷ್ಟು ಸುಖದಾಯಕ ಎಂಬುದು ಕೇಂದ್ರ ಸಚಿವ ಕಿರಣ್ ರಿಜುಜು ಅವರಿಗೆ ಅರ್ಥವಾಗಿರಬಹುದು; ನ್ಯಾಯಮೂರ್ತಿ ಕರ್ಣನ್ ಅವರಿಗೆ ಬಲು ಚೆನ್ನಾಗಿಯೇ ಅರ್ಥವಾಗಿರಬೇಕು.*[1] ಹಾಗೆಯೇ, Whatsapp, Facebookಗಳ ಕೆಮರಾ ಮುಂದೆ ಕರಕಲಾದ, ಹಳಸಲು ವಾಸನೆ ಬೀರುತ್ತಿರುವ ರೊಟ್ಟಿಯನ್ನು ಹಿಡಿದು 'ದಂಗೆಯೆದ್ದ' ಸೈನಿಕರಿಗೆ ಮೈಕೈ ನೋಯುವಂತೆ ಅರ್ಥವಾಗಿರಬಹುದು. ಇವತ್ತು ಅಂತಹ ಒಂದು ಹಳಸಲು ರೊಟ್ಟಿಯನ್ನು ನಿಮಗೆಲ್ಲ ಬಡಿಸಲು ನಿಂತಿದ್ದೇನೆ. ಅದು ಕನ್ನಡ ಸಾಹಿತ್ಯದಲ್ಲಿ ಶಿವರಾಮ ಕಾರಂತರು ಹಿಡಿದ ರೊಟ್ಟಿ. ಬಲು ಸ್ವಾದಿಷ್ಟ ರೊಟ್ಟಿಯೆಂದು ಬಾಯಲ್ಲಿ ಹೇಳುತ್ತಾ ಹಲವಾರು ಮಂದಿ ಕನ್ನಡದ ಸಾಹಿತಿಗಳು, ರಾಜಕಾರಣಿಗಳು, ಬುದ್ಧಿಜೀವಿಗಳು ಮತ್ತು ವಿಮರ್ಶಕರು ಮೂಗುಮುಚ್ಚಿಕೊಂಡೇ ಸವಿಸವಿದು ತಿಂದ ಕೊಳೆತ ರೊಟ್ಟಿ. King is naked ಎಂದು ಘೋಷಿಸಿಬಿಡುವುದು ಜಾಣತನವೂ ಅಲ್ಲ, ಲಾಭದಾಯಕವೂ ಅಲ್ಲ, politically correct, politically lucrative ಕೂಡಾ ಅಲ್ಲ. ಆದರೂ ಹೇಳುವ ಮನಸ್ಸು ಮಾಡಿದ್ದೇನೆ. ಕಳೆದುಕೊಳ್ಳುವುದಕ್ಕೆ ಏನೂ ಉಳಿದಿಲ್ಲ.

ಮಂಗಳೂರಿನಲ್ಲಿ ನಾಲ್ಕಾರು ವರ್ಷಗಳ ಹಿಂದೆ ಯಕ್ಷಗಾನಕ್ಕೆ ಸಂಬಂಧಪಟ್ಟಂತೆ ಒಂದು ಗೋಷ್ಠಿ ನಡೆದಿತ್ತು. 'ಯಕ್ಷಗಾನಕ್ಕಾಗಿ ಕಾರಂತರು ಮಾಡಿದ್ದು ಅದೊಂದೇ. ಇದನ್ನು ಮಾಡಿಲ್ಲ, ಅದನ್ನು ಮಾಡಿಲ್ಲ; ತೆಂಕುತಿಟ್ಟಿಗಾಗಿ ಅವರೇನೂ ಮಾಡಿಲ್ಲ' ಎಂಬಿತ್ಯಾದಿಯಾಗಿ ಆರೋಪಗಳು ನಡೆದವು. ಮಾತು ಹಳಿತಪ್ಪುತ್ತಿರುವುದನ್ನು ಕಂಡು ಹಿರಿಯ ಕಲಾವಿದ, ಯಕ್ಷಋಷಿ ಹೊಸ್ತೋಟ ಮಂಜುನಾಥ ಭಾಗವತರು 'ಕಾರಂತರು ಅದನ್ನು ಯಾಕೆ ಮಾಡಿಲ್ಲ, ಇದನ್ನು ಯಾಕೆ ಮಾಡಿಲ್ಲ ಎಂದು ಕೇಳುವುದು ಸಮಂಜಸವಲ್ಲ, ಅದು ವ್ಯರ್ಥಾಲಾಪ;ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೇನು ಮಾಡಬಹುದು ಎಂದು ಯೋಚಿಸೋಣ' ಎಂದರು.

ಯಕ್ಷಗಾನವಿರಲಿ, ಸಾಹಿತ್ಯದಲ್ಲಿಯೂ ಕಾರಂತರು ತೋರಿದ ಈ ಹಳಸಲು ರೊಟ್ಟಿಯನ್ನು ಮುಟ್ಟುವ, ಮುಂದುವರಿಸುವ, ದಾಟಿಸುವ ಧೈರ್ಯವನ್ನು ಯಾರೂ ತೋರಲಿಲ್ಲ. ಅವರನ್ನು 'ಕೋಮುವಾದಿ' ಎಂದು ಜರೆದರು ವಿನಃ ಆ ಕಾದಂಬರಿಯನ್ನು ಯಾವ ವಿಮರ್ಶಕನೂ ಎತ್ತಿಕೊಳ್ಳುವ ಧೈರ್ಯ ಮತ್ತು ಪ್ರಾಮಾಣಿಕತೆಯನ್ನು ತೋರಲಿಲ್ಲ. ಈ ಹಳಸಲು ರೊಟ್ಟಿಯೆಂದರೆ ವಲಸೆಯ ಹಿಂದಿರುವ ಮತೀಯ ರಾಜಕಾರಣ. ಇಡೀ ಸಹ್ಯಾದ್ರಿಯ ಅರಣ್ಯ ಭೂಮಿಯೆಲ್ಲಾ ಕೇರಳದ ಹತ್ತಾರು ಬ್ರಾಂಡ್‌ಗಳ ಚರ್ಚ್ ವಶವಾದ ಮತೀಯ ಸೆಕ್ಯುಲರ್ ರಾಜಕಾರಣ.

ಅದೇ ಊರು ಅದೇ ಮರ, ಕಾರಂತರು 70ರ ದಶಕದಲ್ಲಿ ಬರೆದ ಕಾದಂಬರಿ.

ಕಾರಂತರ ಕ್ಲಾಸಿಕ್ ಕಾದಂಬರಿಗಳ ಸಾಲಲ್ಲಿ ನಿಲ್ಲುವ ಕಾದಂಬರಿ ಇದಲ್ಲ. ಈ ಕಾದಂಬರಿಯ ಕತೆಯ ಕಾಲಮಾನ ಬಲು ವಿಸ್ತಾರವಾದದ್ದು, ದೀರ್ಘವಾದದ್ದು. ಸರಿಸುಮಾರು 1850ರ ಸುಮಾರಿಗೆ ಆರಂಭವಾದ ಕತೆ 1980ರವರೆಗೂ ಚಾಚುತ್ತದೆ. ಮರಳಿಮಣ್ಣಿಗೆಯಂತೆ ಒಂದೇ ಕುಟುಂಬದ ಹಲವು ಪೀಳಿಗೆಗಳ ಕತೆಯೂ ಅಲ್ಲ. ಒಂದು ಕುಟುಂಬದ ಒಂದೆರಡು ಪೀಳಿಗೆಗಳ ಕತೆ ಮುಂದುವರೆಯುತ್ತದೆ, ಮುಗಿಯುತ್ತದೆ; ಮತ್ಯಾವುದೋ ಕುಟುಂಬದ ಒಂದೆರಡು ಪೀಳಿಗೆಗಳ ಕತೆ ಬರುತ್ತದೆ; ನಡುವೆ ದುತ್ತೆಂದು ಒಂದು ಕುಟುಂಬ, ಒಬ್ಬ ವ್ಯಕ್ತಿ ಬರುತ್ತಾರೆ, ಹೋಗುತ್ತಾರೆ. ನಡುವೆ, ಅಂದರೆ ಸುಮಾರು 1900ರಿಂದ 20–30ರ ಮೂರು ದಶಕಗಳ 'ಖಾಲಿಸ್ತಾನ್' ಕೂಡಾ ಇದೆ. ಹೊರಗಿನ ಹಣ ಬರಲು ಶುರುವಾದ 19ನೆಯ ಶತಮಾನದ ಎರಡನೆಯ, ಮೂರನೆಯ ದಶಮಾನದಲ್ಲಿ ಮತ್ತು ಸ್ವಾತಂತ್ರ್ಯಾನಂತರ Secular ಎಂದು ಕರೆಯಿಸಿಕೊಂಡ ಭಾರತದಲ್ಲಿ ತೊಡಗಿದ ಭಕ್ತಿಯ ವಿರೂಪದಿಂದ ಕಾದಂಬರಿ ತೊಡಗಿದರೂ ಕಾದಂಬರಿಯ ಮುಖ್ಯವಸ್ತು ಹಲವು ತರದ ವಲಸೆಗಳಿಂದ, ಲೋಲುಪತೆಗಳಿಂದ, ಜನಸಂಖ್ಯಾ ಸ್ಫೋಟದಿಂದ ನಿಸರ್ಗದ ಅವಯವಗಳು, ಸಂಪನ್ಮೂಲಗಳು ಯಾರ್ಯಾರಿಂದ, ಹೇಗೇಗೆ ಲೂಟಿಯಾಗುತ್ತಿವೆ, ನಾಶವಾಗುತ್ತಿವೆ ಎಂಬುದು.

ಯಾವುದೇ ಸಾಮಾಜಿಕ ಪಿಡುಗುಗಳ ಕುರಿತು ಮಾತನಾಡಲು ಕಷ್ಟವಾದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರುವ ಸುಳಿವನ್ನು ಕಾರಂತರು ಅಂದೇ ನೀಡಿದ್ದರು. ವಿಮರ್ಶೆಯಲ್ಲಿ politically correct ಧೋರಣೆಯನ್ನು ಟೀಕಿಸುವ ಮಾತುಗಳು ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಬರುತ್ತವೆ. ಕಾದಂಬರಿ ಸಾಗಿದಂತೆ ಪರಿಸರ ವಿನಾಶಕ್ಕೆ ನಮ್ಮ, ನಮ್ಮನ್ನು ಆಳುವವರ ಮೌನ ಕೂಡಾ ಹೇಗೆ ಕಾರಣವಾಗಿ ಬಿಟ್ಟಿತು ಎಂಬುದನ್ನು ಕಾರಂತರು ಸರಳವಾಗಿ, ನಿರಾಡಂಬರವಾಗಿ, ನೇರ ಮಾತುಗಳಲ್ಲಿ ಹೇಳುತ್ತಾರೆ. ಸೌಮ್ಯ–ನಿಷ್ಠುರವಾದಿ ಗಾಂಧಿ ಗೋಪಾಲಯ್ಯ ಮತ್ತು ಒರಟು–ನಿಷ್ಠುರವಾದಿ ಲಕ್ಷ್ಮಣರಾಯರ ಪ್ರಾಮಾಣಿಕತೆ, ಸತ್ಯನಿಷ್ಠೆ, ಅಲ್ಪತೃಪ್ತಿ, ಕಾರ್ಯಕ್ಷಮತೆ, ದಕ್ಷತೆ ಇತ್ಯಾದಿ ಎಲ್ಲವೂ ಅಪ್ರಸ್ತುತವಾಗಿವೆ, ಲೇವಡಿಗೆ ಒಳಗಾಗಿವೆ. ಅಂತಹ politically correct ವಿದ್ಯಮಾನಗಳು ಇಂದು ಮಲೆತು ನಿಂತಿವೆ. ನಂತರದ ತಲೆಮಾರಿನ ಸಾಹಿತಿಗಳಿರಲಿ, ಸಾಮಾಜಿಕ ಕಾರ್ಯಕರ್ತರು, ಪರಿಸರವಾದಿಗಳು, ಆಳುವವರು, ನ್ಯಾಯಾಂಗ ಕೂಡಾ ಪ್ರಸ್ತಾಪಿಸುವ ಧೈರ್ಯವನ್ನು ಮಾಡಿಲ್ಲ.[*2]

ಪರಿಸರ ವಿನಾಶವನ್ನು ಈ ಕಾದಂಬರಿ ಪ್ರಸ್ತಾಪಿಸಿದೆ ಎಂಬ ಕಾರಣಕ್ಕೆ ಈ ಕಾದಂಬರಿ ಮುಖ್ಯವಾಗುವುದಲ್ಲ. ಪರಿಸರವಿನಾಶಕ್ಕೆ politically correct ನಿರ್ವೀರ್ಯ ಧೋರಣೆಯೇ ಕಾರಣ ಎಂಬುದನ್ನು ಹೇಳಿದ ಕಾರಣಕ್ಕೆ ಮತ್ತು ಹಲವಾರು ಮಿಥ್ಯಾಮೌಲ್ಯಗಳ ಮೂಲಕ ಈ ನಾಶವನ್ನು ಸಮರ್ಥಿಸಲಾಗುತ್ತದೆ ಎಂಬುದನ್ನು ಕಾರಂತರು ಗ್ರಹಿಸುತ್ತಾರೆ ಮತ್ತು ಯಾವ ಅಳುಕೂ ಇಲ್ಲದೆ, ಯಾವ ಲಾಭಾಪೇಕ್ಷೆ ಇಲ್ಲದೆ ಹೇಳುತ್ತಾರೆ ಎಂಬ ಕಾರಣಕ್ಕೆ ಈ ಕಾದಂಬರಿ ಮುಖ್ಯವಾಗುತ್ತದೆ. ಮತ್ತು, ಹಲವು ವಲಸೆಗಳ ಪರಿಣಾಮಗಳನ್ನು ಚಾರಿತ್ರಿಕವಾಗಿ, ಗುರುತಿಸುತ್ತಾ, ವಿಶ್ಲೇಷಿಸುತ್ತಾ ಸಾಗುತ್ತಾರೆ ಎಂಬ ಕಾರಣಕ್ಕೆ.

ಕಾರಂತರು ತಮ್ಮ ಹಲವು ಕಾದಂಬರಿಗಳಲ್ಲಿ ಪ್ರಕೃತಿಯ ವಿರಾಟ್ ಸ್ವರೂಪದ ವಿವಿಧ ಮಗ್ಗುಲುಗಳನ್ನು ಕಾಣುತ್ತಾರೆ, ವರ್ಣಿಸುತ್ತಾರೆ. ಎಲ್ಲವೂ ಒಂದೇ ಕಾದಂಬರಿಯಲ್ಲಿ ಏಕತ್ರಗೊಳಿಸಬೇಕೆಂಬ ಹಠವಿಲ್ಲ, ಅದು ಸಾಧ್ಯವೂ ಅಲ್ಲ ಎಂಬಷ್ಟು ಬಹುಮುಖಿಯಾದದ್ದು.

ಕುಡಿಯರ ಕೂಸು ಕಾದಂಬರಿಯಲ್ಲಿ ಪ್ರಕೃತಿ ಮತ್ತು ಪ್ರಕೃತಿಯ ಚೆಲುವು ಪರಿಪೂರ್ಣವಾದದ್ದು, ಅದನ್ನು ಆಸ್ವಾದಿಸುವ ಮನಸ್ಸು ಮುಗ್ಧವಾದದ್ದು. ಅಲ್ಲಿಯೂ ಕೃಷಿಯಿದೆ. ಆದರೆ

ಅದು ಪರಿಸರದಿಂದ ಬೇರಾದದ್ದಲ್ಲ. ಆ ಕೃಷಿಯಲ್ಲಿ ಪರಿಸರದೊಂದಿಗೆ ಗುದ್ದಾಟವಿಲ್ಲ. ಬದುಕಲು ಪಟ್ಟಾ, ಖಾತಾ ಇತ್ಯಾದಿಗಳ ಅಗತ್ಯವಿಲ್ಲದ, ಪ್ರಕೃತಿಯೊಂದಿಗಿನ ತಾದಾತ್ಮ್ಯದ ಜೀವನ. ಆದರೆ ಅಲ್ಲಿ plantation ಕೃಷಿ ಪದ್ಧತಿ ಕಾಲಿಟ್ಟಿದೆ. ಅವರಿಗೇ ಅರಿವಿಲ್ಲದಂತೆ ಅವರು ಯಾರೋ ಹೊರಗಿನ ದಣಿಯೊಬ್ಬರ ಕೂಲಿಗಳಾಗಿ ಬಿಟ್ಟಿದ್ದಾರೆ. ಕೆಂಪಿಯ ರೂಪದಲ್ಲಿ, ರೂಪಕದಲ್ಲಿ ಪತನ ಆರಂಭವಾಗಿದೆ. ಆದರೆ ಕಾದಂಬರಿಯಲ್ಲಿ ವಿಶ್ವಾಸಕ್ಕೆ, ಭರವಸೆಗೆ ಅನುವು ಇದೆ. ಕಾದಂಬರಿಯ ಮೊದಮೊದಲ ವಾಕ್ಯಗಳಲ್ಲಿಯೇ ಮುಗ್ಧವಾಗಿ, ಪರಿಸರವನ್ನು ಭಾವನಾತ್ಮಕವಾಗಿ ಕಾಣುವ, ಅನುಭವಿಸುವ, ಕರಿಯ ಕೊನೆಯಲ್ಲಿ ಹಾಗೆಯೇ ಉಳಿದಿದ್ದಾನೆ, ಪಕ್ವವಾಗಿದ್ದಾನೆ; ಅಂದರೆ ವಿವೇಚನಾಬದ್ಧವಾಗಿ ಪರಿಸರವನ್ನು ಅನುಭವಿಸುವಷ್ಟು ಬೆಳೆದಿದ್ದಾನೆ. ಅಂದಿನ ದಣಿ ತೀರಿಕೊಂಡಿದ್ದಾರೆ. ಅವರ ಮಗ, ಇಂದಿನ ದಣಿ, ವಿವೇಕಶೀಲರು; ತಾವು ಇಲ್ಲಿನವರಲ್ಲ ಎಂಬುದನ್ನು ಅರಿತವರು; ಕುಡಿಯರ ಆಂತರಿಕ ವಿಷಯಗಳಲ್ಲಿ ತಲೆಹಾಕಬಾರದು ಎಂಬುದನ್ನು ಬುದ್ಧಿಪೂರ್ವಕವಾಗಿ ಕಂಡುಕೊಂಡವರು.

ಬೆಟ್ಟದ ಜೀವ ಕಾದಂಬರಿಯಲ್ಲಿ ಪರಿಸರ ಮನುಷ್ಯನಿಗೆ ಪಂಥಾಹ್ವಾನವನ್ನು ನೀಡುವಂತದ್ದು. ಪರಿಸರಕ್ಕೆ ಶರಣಾಗಿಯೇ ಪರಿಸರದ ಹಲವು ಘಟಕಗಳನ್ನು ಎದುರಿಸಿ ಬದುಕನ್ನು ಕಟ್ಟಿಕೊಳ್ಳುವ ಅನಿವಾರ್ಯ. ಪ್ರಜ್ಞಾಪೂರ್ವಕವಾಗಿ, ಮುಕ್ತ ಮನಸ್ಸಿನಿಂದ ಇದು ಸಾಧ್ಯವಾದರೆ ಬದುಕಿನ ಹಲವು ವಿಸಂಗತಿ–ವಿಕೃತಿಗಳನ್ನು ಸಂಯಮದಿಂದ ಸಹಿಸುವ ಶಕ್ತಿಯನ್ನು, ನಿರ್ವಿಕಾರಚಿತ್ತದಿಂದ ಬದುಕುವ ಸ್ಥೈರ್ಯವನ್ನು ಪಡೆಯುವುದನ್ನು ಕಾಣುತ್ತೇವೆ. ಬೆಟ್ಟದ ಜೀವ ಕಾದಂಬರಿಯಲ್ಲಿ ಪರಿಸರವನ್ನು ಗ್ರಹಿಸುವುದಕ್ಕಿಂತ ವ್ಯತಿರಿಕ್ತವಾಗಿ ಕಾಣುವುದು ಶನೀಶ್ವರನ ನೆರಳಿನಲ್ಲಿ ಕಾದಂಬರಿಯಲ್ಲಿ. ಇಲ್ಲಿನ ಕೆಲವು ಪಾತ್ರಗಳು, ಮುಖ್ಯವಾಗಿ ಕೃಷ್ಣ ಜೋಯಿಸರು, ಪ್ರಕೃತಿ ತಮ್ಮ ಬಯಕೆಯ ನೇರಕ್ಕೆ ಇರಬೇಕೆಂದು ಬಯಸುವವರು. ಭೂಸವೆತ, ಕಳೆ ಮುಂತಾದವುಗಳ ಬಗ್ಗೆ ಅವರ ಜತೆ ಮಾತನಾಡಿದ ನಿರೂಪಕ "ನಮ್ಮ ಯೋಚನೆಯಂತೆ ಲೋಕ ನಡೆಯಬೇಕಾದರೆ ಲೋಕವೆಲ್ಲ ನಮ್ಮ ಅಂಕೆಯಲ್ಲಿ ಇರಬೇಕು ಎಂದ ಹಾಗಾಯ್ತಲ್ಲವೇ?" ಎಂದು ಕೇಳುತ್ತಾನೆ.

ಮರಳಿ ಮಣ್ಣಿಗೆಯಲ್ಲಿ ನಿಸರ್ಗ ಪರಿಪೂರ್ಣವಾದದ್ದು ಮಾತ್ರವಲ್ಲ, ಮನುಷ್ಯ ತನ್ನ ಪರಿಪೂರ್ಣತೆಯನ್ನು ಸಾಧಿಸುವಲ್ಲಿ ಸಹಕಾರವನ್ನು ಮತ್ತು ಪಂಥಾಹ್ವಾನವನ್ನು ನೀಡುವಂತಾದ್ದು. ಇಂತಹ ಕ್ರಿಯೆಯಲ್ಲಿ ಕಡಲು ಮತ್ತು ಮಳೆ leitmotifಗಳಾಗಿ ಬರುವುದನ್ನು ಹಿರಿಯ ವಿಮರ್ಶಕ ಡಿ.ಎಲ್. ನರಸಿಂಹಾಚಾರ್ ಕಾರಂತರಲ್ಲಿ ಗುರುತಿಸುತ್ತಾರೆ. ಭೋರ್ಗರೆಯುವ ಭೌತಿಕ ಕಡಲು ಒಂದು ಕಡೆ; ಪ್ರಕ್ಷುಬ್ಧ ರೂಪಕವಾಗಿ ರಾಮನ ಆಂತರ್ಯದಲ್ಲಿ ಒಂದು ಕಡೆ. ಲೌಕಿಕ ತುಮುಲಗಳಲ್ಲಿ ಸಿಲುಕಿದ ಮನುಷ್ಯನ ಆಂತರ್ಯ ಪರಿಪೂರ್ಣತೆಗಾಗಿ ತುಡಿಯುವಾಗ ಕಡಲು, ಮಳೆ ಅವನಿಗೆ ಪಂಥಾಹ್ವಾನ ನೀಡುತ್ತವೆ, ಇಂಬು ನೀಡುತ್ತವೆ, ಮಾರ್ಗದರ್ಶನ ಮಾಡುತ್ತವೆ. ಪರಿಪೂರ್ಣತೆಯನ್ನು ಸಾಧಿಸುವ ಹಾದಿಯಲ್ಲಿ ಪ್ರಕೃತಿಯೊಂದಿಗಿನ ರಾಮನ ಅನುಸಂಧಾನ ಬೌದ್ಧಿಕವೂ ಹೌದು, ಭಾವನಾತ್ಮಕವೂ ಹೌದು.

ಅವನ ಓದು, ಅವನ ಸಂಗೀತ, ಅವನ ಕುಂಚ, ತಾಯಿಯೊಂದಿಗಿನ ಅವನ ಸಂಬಂಧ ಎಲ್ಲವೂ ಏಕತ್ರಗೊಳ್ಳುವುದು ಸಮುದ್ರದ ಮುಂದೆ. ಸಮುದ್ರದ ತೆರೆ ಎಲ್ಲ ದನಿಗಳ ಸಂಗಮ. ಅವನು ತನ್ನ ಪಿಟೀಲಿನ ಶ್ರುತಿ ಹಿಡಿಯುವುದು ಸಮುದ್ರದ ಭೋರ್ಗರೆತದ ಮುಂದೆ. (ಪ್ರಾಚೀನ ಗ್ರೀಕ್ ಸಾಹಿತ್ಯದ ಅನೇಕ ಕೃತಿಗಳಲ್ಲಿ ಸಮುದ್ರ ಯಾನವೆಂಬುದು leitmotif ಆಗಿತ್ತು. ಗ್ರೀಕ್ ಸಂಗೀತಗಾರರು ಮತ್ತು ಭಾಷಣಕಾರರು ಸಮುದ್ರದ ತೆರೆಗಳ

ಮುಂದೆ ನಿಂತು ತಮ್ಮ ದನಿಯನ್ನು ಹದಗೊಳಿಸಿಕೊಳ್ಳಬೇಕಾಗಿತ್ತು.) ತೆರೆಯ ಬೆಳ್ನೊರೆ, ಸಮುದ್ರದ ನೀರು ಎಲ್ಲ ಬಣ್ಣಗಳ ಸಂಗಮ. ಬಾನು–ಭೂಮಿಗಳ ಅಗಣಿತ ಬಣ್ಣಗಳು ಪ್ರತಿಫಲನಗೊಳ್ಳುವುದೂ ಸಮುದ್ರದಲ್ಲಿಯೇ. ರಾಗ ಎಂಬ ಪದ ಸಂಗೀತಕ್ಕೂ ಬೇಕು, ಕುಂಚಕ್ಕೂ ಬೇಕು, ಮಾನವಸಂಬಂಧಕ್ಕೂ ಬೇಕು. ಕುಂಚಕ್ಕಿಂತ ಮೊದಲು ಕಮಾನುಕಟ್ಟಿತು. "ರಾಮನು ಅವಳ(ತಾಯಿಯ) ಕೈಯಿಂದ ಅದನ್ನು ಎಳೆದುಕೊಂಡನು; ಅದನ್ನು ಬಿಗಿದು ಕಮಾನನ್ನು ಎಳೆದುಕೊಂಡನು. ತಂತಿಗಳ ಮೇಲೆ ಎರಡೇ ಎರಡು ಎಳೆತದಿಂದ ತೆಂಕು ಕೋಡಿಯಿಂದ ಬಡಗು ಕೋಡಿಯ ತನಕ ನೆಲವೇ ಅದುರಿದಂತೆ ಕಂಡಿತು... ರಾಮನ ಕೈಯು ಕಡಲಿನ ದನಿಗೆ ಶ್ರುತಿಗೂಡಿಸಿತು. ಮಳೆಗಾಳಿಯೊಂದರಂತೆ ರಾಮ ರಾಗದ ಸುಳಿಯೊಂದನ್ನು ಚಿಮ್ಮಿಸಿ, ಅದನ್ನು ಮೆಲುದೆರೆಗಳಂತೆ ಏರಿಸಿ–ಇಳಿಸಿ, ಹಾಸಿ–ಹರಡಿ ನಲಿಸುತ್ತಿದ್ದನು. ಬಾನಲ್ಲಿ ಬೆಳ್ಳಿ ಮೂಡಿದರೂ ರಾಮನ ಕೈ ತಡೆಯಲಿಲ್ಲ."(ಮರಳಿ ಮಣ್ಣಿಗೆ; ಪು.322) ಇದು ಒಬ್ಬ ತಾಯಿಯ ಮುಂದಾದರೆ ಇನ್ನೊಮ್ಮೆ ಮುಂಬಯಿಯಲ್ಲಿ ಆತನ ಇನ್ನೊಬ್ಬ ತಾಯಿ ನೋವಾಳ ಮುಂದೆ. "ಕಡಲಿನ ವಿಚಾರ ಹೇಳುವಾಗಲೆಲ್ಲ– 'ಮುಂಬಯಿಯ ಮಲಿನಸಮುದ್ರವು ನನಗೆ ವ್ಯಥೆ ಕೊಡುತ್ತದೆ' ಎನ್ನುತ್ತಿದ್ದ. ಹಾಗೆಯೇ ಮಾತನಾಡುತ್ತಾ ಎದುರಿಗೆ ಇರಿಸಿದ್ದ ಪಿಟೀಲನ್ನು ಎತ್ತಿ ಹಿಡಿದನು. ಅವನಿಗೆ ಕಡಲ ದಂಡೆಯ ತನ್ನ ಮನೆಯಲ್ಲಿ ತಾನೊಂದು ದಿನ ತಾಯನ್ನು ಕರೆದುಕೊಂಡು ಅರಾಲಿನ ಮೇಲೆ ಕುಳಿತು ರಾತ್ರಿಯಲ್ಲ ಏನೋ ಹಾಡನ್ನು ಬಾರಿಸಿದುದರ ನೆನಪಾಯಿತು. ಆ ನೆನಪಿನಿಂದ ಈಗಲೂ ಏನನ್ನೋ ಬಾರಿಸತೊಡಗಿದನು. ಹಾಗೆ ಎಷ್ಟು ಸಮಯ ಬಾರಿಸಿದನೋ ತಿಳಿಯದು. ಹೊರಗೆ ಹೋಗಿದ್ದ ನೋವಾಳ ತಂದೆಯೂ ಬಂದು, ಅವನ ಮುಂದೆ ಕುಳಿತಿದ್ದರು. ರಾಮ ಅವರು ಬಂದುದನ್ನು ಕಂಡು ಎಚ್ಚರವಾಗಿ ಬಾರಿಸುವುದನ್ನು ನಿಲ್ಲಿಸಿದ. ಆಗ ನೋವಾ, 'ನಿಮ್ಮ ಊರಿನ ಕಡಲು ಅಷ್ಟು ಸುಂದರವಾದುದೇ!' ಎಂಬ ಉದ್ಗಾರ ತೆಗೆದಳು. ಆ ದಿನ ನೋವಾ ಆನಂದಸ್ವರ್ಗದಲ್ಲಿ ತೇಲುತ್ತಿದ್ದಳು."(ಮರಳಿಮಣ್ಣಿಗೆ; ಪುಟ 388) ರಾಮ ಐತಾಳ ತನ್ನ ಅನನ್ಯತೆಯನ್ನು ಕಟ್ಟಿಕೊಳ್ಳುವುದು ಕೋಡಿಯ ಕಿನಾರೆಯ ಮರಳರಾಶಿಯ ಮೇಲೆ.

ನೋವಾ, ನಾಗವೇಣಿ ಇಬ್ಬರಿಗೂ ಪರಿಪೂರ್ಣತೆಯನ್ನು ಸಾಧಿಸುವುದು ಸಾಧ್ಯವಾಗಲಿಲ್ಲ. ಏಕೆಂದರೆ ಅವರಿಗೆ ನೋವನ್ನು ದಾಟುವುದು ಸಾಧ್ಯವಾಗಲಿಲ್ಲ. ನೋವಾಳಿಗೆ ತನ್ನ ನೆಲವಿಲ್ಲ. ಲಚ್ಚನಿಂದಾಗಿ ನಾಗವೇಣಿಯ ಬದುಕೇ ಅಪೂರ್ಣ. "ಇಬ್ಬರೂ ಬಹಳ ಹೊತ್ತು ಮಾತನಾಡಲಿಲ್ಲ; ಕೊನೆಗೆ ರಾಮನು 'ಅಮ್ಮ, ಏನಾದರೂ ನುಡಿಸು' ಎಂದನು. ತಾಯಿ ಮೆಲ್ಲನೆ ಪಿಟೀಲನ್ನ ಹಿಡಿದು, ಹಳೆಯ ಹಾಡೊಂದನ್ನು ನುಡಿಸಿದಳು. ಏನು ಮಾಡಿದರೂ ಅದರ ಸೆಳೆವೆಲ್ಲ ನೋವು, ನರಳುವಿಕೆಗಳ ತಾಪವನ್ನು ಪ್ರತಿಫಲಿಸುತ್ತಿತ್ತು. ಅವಳಿಗೆ ಒಂದೊಂದು ಹಾಡನ್ನು ಮುಗಿಸಿ ಉಸ್ಸೆಂದು ಧ್ವನಿಗರೆಯುವು ದೇ ಕೆಲಸವಾಗಿತ್ತು. ಈ ಜೀವದಲ್ಲಿ ಬೇಸರವೂ ಅಶ್ವತ್ಥ ಮರದಂತೆ ಎಲ್ಲೆಂದರಲ್ಲಿ ಬೇರುಬಿಟ್ಟಿತ್ತು." (ಮರಳಿಮಣ್ಣಿಗೆ; ಪುಟ 364) ನೋವಾಳಿಗೆ ಮಾತು ಕೊಟ್ಟಿದ್ದರೂ ರಾಮನಿಗೆ ಚಿತ್ರ ಬರೆಯಲು ಸಾಧ್ಯವಾಗಲೇ ಇಲ್ಲ. ಆ ಕ್ಷಣ ಬಂತು. "ಅಂತು ಬಂದ ಮಳೆ, ಬಂದಷ್ಟು ತ್ವರೆಯಲ್ಲೇ ನಿಂತಿತು. ಅರೆತಾಸಿನ ಮಳೆಯಲ್ಲಿ ಕಡಲೇನೆ ಉಕ್ಕಿ ಹರಿದಷ್ಟು ನೀರಾಗಿತ್ತು. ಎದುರಿನ ಬೆಟ್ಟು, ನೀರಿನದೊಂದು ಕೆರೆಯಾಗಿತ್ತು. ಕೆರೆಯಂತೆ ಕಾಣುತ್ತಿದ್ದ ನೀರು, ಬಾನನ್ನೂ, ಹನೆಮರಗಳನ್ನೂ ತಲೆಕೆಳಗಾಗಿ ಬಿಂಬಿಸಿತ್ತು. ಆ ಶಾಂತ ನೆರಳಿನ ಆಟವು ಅಲ್ಲಿನದಾದರೆ, ಎದುರಿನ ಪಡುಗಡಲು, ತನ್ನ ಆವೇಶಕ್ಕೆ ತಾನೇ ನಕ್ಕು ಉರುಳುವಂತೆ ಕಾಣುತ್ತಿತ್ತು. ರಾಮ ಈಚೆಂದ ಆಚೆಗೆ ನಿಸರ್ಗದ

ಶಾಂತಿಯಿಂದ ರೌದ್ರಕ್ಕೆ– ಕಣ್ಣು ತಿರುಗಿಸಿ ನೋಡುತ್ತಲೇ ಇದ್ದನು. ಆ ರಾತ್ರಿಯೆಲ್ಲ ಅವನು ಮೂಕನಾಗಿದ್ದನು. ಅವನ ಕಣ್ಣುಗಳ ಮುಂದೆ ಅಂದಿನ ಸಂಜೆಯ ಕಡಲು, ನಿಂತ ನೀರುಗಳೇ ಕುಣಿದಾಡುತ್ತಿದ್ದವು. ಮರುದಿನ ಬೆಳಿಗ್ಗೆ ಅವನು ಮನೆಯ ಚಾವಡಿಯಲ್ಲಿ ಕಾಗದವನ್ನು ಬಿಡಿಸಿ, ತನ್ನ ಹಿಂದಣ ಸಂಜೆಯ ಕನಸನ್ನು ಬರೆಯುತ್ತಿದ್ದನು. ದೆವ್ವದಂತಹ ನಾಲ್ಕು ಹನೆಮರಗಳು ನೆಲದಿಂದ ಬಾನನ್ನು ಸೀಳಿದ್ದುವು. ಎದುರಿಗೆ ಕಾಲಬುಡದಲ್ಲಿ ನಗುವ ಮೋಡಗಳನ್ನು ಬಿಂಬಿಸುತ್ತಿದ್ದ ವಿಶಾಲವಾದ ಹಾಳೆಯೊಂದಿತ್ತು. ಅದರಿಂದಾಚೆ ಕಡಲ ದಿನ್ನೆ, ಮುಂದೆ ರೌದ್ರವಾಗಿ ಹುಚ್ಚೆದ್ದು ನಗುತ್ತಿರುವ ಅಲೆಗಳು, ಅದರ ತೀರ ತೀರ ಹಿಂಗಡೆಯಲ್ಲಿ ಬಾನನ್ನು ಹೊಂಬೆಳಕಿನ ಆಗರವನ್ನಾಗಿ ಮಾಡಿದ ಸೂರ್ಯನ ಲೀಲೆ. ಊಟಕ್ಕೆ ತಾಯಿ ಕರೆಯುವ ತನಕವೂ ಅವನ ಕುಚ್ಚಿನ ಆಟ ಸಾಗಿತ್ತು. ನಾಗವೇಣಿ ಮಗನ ಕೈವಾಡವನ್ನು ನೋಡಿ ಮರುಳಾಗಿ ನಿಂತಿದ್ದಳು."(ಮರಳಿಮಣ್ಣಿಗೆ; ಪುಟ 408) ಚಿತ್ರವನ್ನು ಮುಂಬಯಿಗೆ ಕಳುಹಿಸಿಯೆ ರಾಮ ಮದುವೆಗೆ ಹೆಣ್ಣು ನೋಡಲು ಬ್ರಹ್ಮಾವರಕ್ಕೆ ಹೋಗುತ್ತಾನೆ.

ಪ್ರಕೃತಿಯಲ್ಲಿ ತಾದಾತ್ಮ್ಯವನ್ನು ಹೊಂದಿ ಪರಿಪೂರ್ಣತೆಯನ್ನು ಸಾಧಿಸುವ ಹಾದಿಯಲ್ಲಿ ಮರಳಿ ಮಣ್ಣಿಗೆಯ ರಾಮನ ವ್ಯಕ್ತಿತ್ವದ ಮುಂದುವರಿದ ಭಾಗಗಳಾಗಿ ಕಾಣುವವರು ಸ್ವಪ್ನದ ಹೊಳೆಯ ಕೃಷ್ಣರಾಯ ಮತ್ತು ಮೊಗ ಪಡೆದ ಮನದ ವ್ಯಾಸ.

ಸ್ವಪ್ನದ ಹೊಳೆ ಪ್ರಕೃತಿ ವರ್ಣನೆಯಿಂದ ಭಾರವಾದ ಕಾದಂಬರಿ. ಈ ಕಾದಂಬರಿಯಲ್ಲಿ ಕಾರಂತರು ಚಿತ್ರಿಸಿದ ಪ್ರಕೃತಿವರ್ಣನೆ ಕನ್ನಡ ಕಥನ ಪರಂಪರೆಯಲ್ಲಿಯೇ ಅತಿವಿಲಕ್ಷಣವೂ, ಭಿನ್ನವೂ, ವಿಶಿಷ್ಟವೂ, ಚೇತೋಹಾರಿಯೂ, ಆದದ್ದು. ಏಕಕಾಲಕ್ಕೆ ಅದು ಪ್ರಕೃತಿವರ್ಣನೆಯೂ, ಪ್ರಕೃತಿಯ ಸ್ವಪ್ನವೂ, ಸೌಂದರ್ಯ ವರ್ಣನೆಯೂ, ಸೌಂದರ್ಯದ ಸ್ವಪ್ನವೂ, ಪ್ರಕೃತಿ ವರ್ಣನೆಯ ಸ್ವಪ್ನವೂ ಆಗಿದೆ. ಕಾದಂಬರಿಯು ಮನುಷ್ಯನ ಆದಿಮ ಬಯಕೆಗಳ ಕುರಿತದ್ದು. ಪ್ರಾಕೃತಿಕವಾದ, ದಿವ್ಯ ಅನುಭೂತಿಯನ್ನು ನೀಡುವ ಲೈಂಗಿಕ ಸುಖವನ್ನು ಭ್ರಷ್ಟಗೊಳಿಸುವ ಲೋಲುಪತೆ, ಸ್ವಾರ್ಥವನ್ನು ಕಾದಂಬರಿ ಶೋಧಿಸುತ್ತಾ ಹೋಗುತ್ತದೆ. ಹಾಗೆಯೇ ಆದರ್ಶ ಮತ್ತು ಋಜುತ್ವಗಳಿಗಾಗಿ ಅವನ ಅಂತರಂಗದ ಶೋಧ ಕೂಡಾ. ಇವೆರಡೂ ಶೋಧಗಳಿಗೆ ನಿಸರ್ಗದ ಚಲನಶೀಲ ಸೌಂದರ್ಯವೇ ಹಾದಿ. ಹಾದಿಯೆಂದರೆ ಸ್ವಪ್ನದ ಹೊಳೆ. ಆತ ನಿಸರ್ಗ ಸಹಜವಾದ ದಿವ್ಯಾನುಭೂತಿಗಾಗಿ ಹಂಬಲಿಸುತ್ತಾ ಕನಸುಕಂಗಳಿಂದ ಲೋಕವ್ಯಾಪಾರವನ್ನು ಗಮನಿಸುತ್ತಾ ಅದೆಂತಹ ಸಮಚಿತ್ತವನ್ನೂ, ಔದಾರ್ಯವನ್ನೂ, ಒಳ್ಳೆಯತನವನ್ನೂ ಗಳಿಸುತ್ತಾನೆಂದರೆ ಕಳ್ಳಗುರುವಿನಿಂದ ಬಸಿರಾದ ಬನ್ನಿ ಎಂಬ ಮುಗ್ಧ ಬಾಲೆಯನ್ನೇ ಮದುವೆಯಾಗುತ್ತಾನೆ.

ಮೊಗ ಪಡೆದ ಮನ ಇನ್ನೊಂದು ಬಗೆಯಲ್ಲಿ ವಿಶಿಷ್ಟ ಕಾದಂಬರಿ. ಕಲೆಯಲ್ಲಿ ಪ್ರಾವೀಣ್ಯವೋ, ಪರಿಪೂರ್ಣತೆಯೋ ಎಂಬ ಗೊಂದಲದಲ್ಲಿ ಬಿದ್ದ ವ್ಯಾಸ ಪರಿಪೂರ್ಣತೆಯನ್ನು ಸಾಧಿಸಲು ಕೋಡಿಯ ಕಡಲತೀರಕ್ಕೆ, ರಾಮ ಐತಾಳನ ಬಳಿಯೇ ಬರುವಂತಾದುದು ಕಥಾತಂತ್ರದ ದೃಷ್ಟಿಯಿಂದ ಮಾತ್ರವಲ್ಲ, ಕಥಾವಸ್ತುವಿನ ದೃಷ್ಟಿಯಲ್ಲಿಯೂ ವಿಶಿಷ್ಟವಾದುದು, ಔಚಿತ್ಯಪೂರ್ಣವಾದದ್ದು. ಇಲ್ಲವಾದರೆ ಆ ಕಾದಂಬರಿಯೊಳಗೇನೇ ರಾಮನಂತಹ ಇನ್ನೊಂದು ಪಾತ್ರವನ್ನು ಸೃಷ್ಟಿಸುವ 'ಕೃತ್ರಿಮ'ಕ್ಕೆ ಇಳಿಯಬೇಕಾಗುತ್ತಿತ್ತು. ಆಗ ಕಾದಂಬರಿಯ ಬಂಧ ಸಡಿಲವಾಗುತ್ತಿತ್ತು.

ಮರಳಿ ಮಣ್ಣಿಗೆ ಬಂದು ಸರಿಸುಮಾರು ನಾಲ್ಕು ದಶಕಗಳ ಅನಂತರ ಬಂದದ್ದು ಅದೇ ಊರು ಅದೇ ಮರ. 20ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಸಹ್ಯಾದ್ರಿಯ ಹರವಿನಲ್ಲಿ

ಇಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಎಂದು ಕರೆಯಿಸಿಕೊಳ್ಳುವ ಭೂಭಾಗದ ತಪ್ಪಲಿನಲ್ಲಿ ಮತ್ತು ಇಳಿಜಾರಿನಲ್ಲಿ ಕೇರಳ ಮೂಲದ ನಾಲ್ಕೈದು ಚರ್ಚ್ ಪಂಗಡಗಳಿಂದ ನಡೆದ ಒತ್ತುವರಿ ಮತ್ತು ಅತಿಕ್ರಮಣ ಬೇಸಾಯವನ್ನು ಕುರಿತಿಟ್ಟು ಮಾತ್ರ ಕಾರಂತರು ಹೇಳಿದ್ದರೆ ಇದೊಂದು political propaganda, selective communal agenda ಇತ್ಯಾದಿ ಏನೇನೋ ಅನ್ನಿಸಿಕೊಳ್ಳಬಹುದಿತ್ತು. ಆದರೆ ಅಂತಾಗಲಿಲ್ಲ. ಕಾರಂತರು ವಲಸೆಯ ನಾನಾ ರೂಪಗಳನ್ನು ವಿಶಾಲವಾದ ಚಾರಿತ್ರಿಕ ಭಿತ್ತಿಯ ಮೇಲಿಟ್ಟು ವಿಶ್ಲೇಷಿಸುತ್ತಾರೆ. ಆಲದೂರು ಯಾನೆ ವಟಪುರವೆಂಬ ಗ್ರಾಮ–ಪಟ್ಟಣವು ಲಾಗಾಯ್ತಿನಿಂದ ಹೊಟ್ಟೆಪಾಡು, ಯುದ್ಧ, ನಿರಾಶ್ರಯ, ಭಿಕ್ಷಾಟನೆ ಮುಂತಾದ ಹತ್ತು ಹಲವು ಕಾರಣಗಳಿಂದ ಹೇಗೆ ವಲಸೆಗಳಿಗೆ ನೆಲೆಯಾಯಿತು ಎಂಬುದನ್ನು ರಾಮಭಟ್ಟರ ಮೂಲಕ ಕಾಣಿಸುತ್ತಾರೆ. ಪರಿಸರಕ್ಕೂ ಕೈಚಾಚುತ್ತಾರೆ, ಪುರಾಣಕ್ಕೂ ಕೈಚಾಚುತ್ತಾರೆ. ಆಲದೂರಿಗೆ ನೂರೆಂಟು ದಿಕ್ಕುಳಿಂದ ಪಶುಪಕ್ಷಿಗಳು ಬಂದು ತಂಗುತ್ತವೆ, ಸಂಸಾರ ನಡೆಸುತ್ತವೆ, ತೆರಳುತ್ತವೆ. ವಟಪುರಕ್ಕೆ ಅಗಸ್ತ್ಯರೂ ಬಂದುಹೋಗಿದ್ದರು! ಹಕ್ಕಿಪಕ್ಕಿಗಳು ಬಂದುಹೋದಂತೆ ನಿಯಮಿತವಾಗಿ ಬಂದು ಹೋಗುವ ಹಾಲಕ್ಕಿ ನರಸಣ್ಣನ ಸಂಸಾರವೂ ಬಂದುಹೋಗುತ್ತದೆ. ವಿಜಯನಗರ, ಕೆಳದಿ ಅರಸರ ದಂಡು ಬಂದದ್ದು, ದಂಡು ಹೋದ ಮೇಲೂ ಉಳಿದವರು; ಬಂದವರಿಂದ, ಬಂದುಳಿದವರಿಂದ ಅಳಿದುಹೋದ ಜೈನರನ್ನೂ ಕಾಣುತ್ತಾರೆ. ಈ ಎಲ್ಲ ವಲಸೆಗಳಿಗೆ ಹತ್ತಾರು ಕಾರಣಗಳು, ಹಿತಾಸಕ್ತಿಗಳು, ಅನಿವಾರ್ಯಗಳು, ಒತ್ತಡಗಳು. ಗೋಮಾಂತಕದಲ್ಲಿ ಪೋರ್ಚುಗೀಸರು ನಡೆಸಿದ ಮತೀಯ ಬರ್ಬರತೆಯಲ್ಲಿ ನಲುಗಿ ಓಡಿ ಬಂದ ಕೊಂಕಣಿಗರು ವರ್ತಮಾನದ ವಟಪುರದಲ್ಲಿ ಸಮಾಧಾನದ ಜೀವನ ನಡೆಸುತ್ತಿದ್ದಾರೆ.

ವಲಸೆ, ದಂಡಯಾತ್ರೆ, ಪಯಣ, ಯಾತ್ರೆ, ಹೊಟ್ಟೆಪಾಡು ಎಲ್ಲವೂ ಒಂದರೊಳಗೊಂದಾಗುತ್ತಾ, ಒಂದಕ್ಕೊಂದು ಕಾರಣವಾಗುತ್ತಾ ಸಾಗುತ್ತವೆ. ಎಲ್ಲಿಂದಲೋ ಬಂದು ನಾಲ್ಕು ದಿನವಿದ್ದು ಹೋಗುವವರು, ಎಲ್ಲಿಂದ ಬಂದರೋ ಅಲ್ಲಿಗೆ ಪುನಃ ಹೋಗದವರು, ಹೋಗಲಾಗದವರು, ಗೊತ್ತುಗುರಿಯಿಲ್ಲದೆ ಸಾಗುತ್ತಾ ಇರುವವರು. ಆಲದಮರವು ದಿಬ್ಬಣಕ್ಕೂ ನೆರಳು ಒದಗಿಸುತ್ತದೆ. ಕಾರಂತರ ಸೂಕ್ಷ್ಮದೃಷ್ಟಿ ವಧುವಿನ 'ವಲಸೆ'ಯನ್ನೂ ಬಿಟ್ಟಿಲ್ಲ!

ಅನಾದಿಯಿಂದ ಇದಕ್ಕೆಲ್ಲ ಮೌನಸಾಕ್ಷಿಯಾಗಿರುವುದು, ನಿರ್ಲಿಪ್ತ ಆಸರೆಯಾಗಿರುವುದು ಆಲದ ಮರ. ನಿಸ್ಸಹಾಯಕರಾಗಿ, ಯಾವ ಪ್ರತಿಕ್ರಿಯೆಯನ್ನು ನೀಡಲಾಗದೆ, ಎಲ್ಲವನ್ನೂ ಗಮನಿಸುವವರು ರಾಮಭಟ್ಟರು.

ಯಾವ ಲೌಕಿಕ ಹಿತಾಸಕ್ತಿಯೂ ಇಲ್ಲದೆ ಸಾಕ್ಷಿಯಾಗಿ ನೆಲದ ಉದ್ದಗಲಕ್ಕೆ ನಡೆದಾಡಿದ ಓಡಲಮನೆಯ ಸುಬ್ರಾಯ ಹೆಗಡೆಯವರು. ಅವರಿಬ್ಬರೂ ಆಲದಮರದ ನೆರಳಲ್ಲಿ ಭೇಟಿಯಾದದ್ದು ಅರ್ಥಪೂರ್ಣ. ವಲಸೆ ಬಂದವರಿಗೆ ಸ್ಥಳೀಯರ ಬಗ್ಗೆ ಅನುಮಾನ. ಸ್ಥಳೀಯರಿಗೆ ವಲಸೆ, ವಲಸೆಗಾರರ ಬಗ್ಗೆ ಅನುಮಾನ. ಈ ಪರಿಸ್ಥಿತಿ ಬಲು ಮನೋಜ್ಞವಾಗಿ ಮೂಡಿಬಂದ ಸಂದರ್ಭವೆಂದರೆ ಮರ್ತಪ್ಪ ಪ್ರಭುಗಳು ಮತ್ತು ರಾಮಭಟ್ಟರು ತಮ್ಮ ಅಂತರಂಗವನ್ನು ತೆರೆದುಕೊಳ್ಳುವುದು ಯಾವ ಹಿತಾಸಕ್ತಿಯೂ ಇಲ್ಲದ ಸುಬ್ರಾಯ ಹೆಗಡೆಯವರ ಮುಂದೆ! ಜೀವನಪರ್ಯಂತ ಜತೆಗಿದ್ದ ಅವರಿಬ್ಬರು ಪರಸ್ಪರರ ಮುಂದೆ ಅಂತರಂಗವನ್ನು ತೆರೆದದ್ದಿಲ್ಲ. (ಯಾರು ಯಾರನ್ನು ನುಂಗುತ್ತಿದ್ದಾರೆ ಎಂಬ ಅನುಮಾನ!). ಅದೇ ರೀತಿ, ಸುಬ್ರಾಯ ಹೆಗಡೆಯವರು ತೆರೆದುಕೊಂಡದ್ದು ಕೂಡಾ ರಾಮಭಟ್ಟರ ಮುಂದೆ. ಇಡೀ ಯಾತ್ರೆಯಲ್ಲಿ ಯಾರ ಮನೆಗೂ ಹೋಗದ ಹೆಗಡೆಯವರು ಭಟ್ಟರ ಮನೆಗೆ ಊಟ

ಸ್ವೀಕರಿಸಲು ದಾಕ್ಷಿಣ್ಯಪಡುವುದಿಲ್ಲ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಇಬ್ಬರು, ಅಪ್ಪಳಸ್ವಾಮಿ ಮತ್ತು ಆರೋಕ್ಯಸ್ವಾಮಿ ಎಂಬ ಅಧಿಕಾರಿಗಳ ಹುನ್ನಾರದಲ್ಲಿ ಸಹ್ಯಾದ್ರಿಯ ಮಲೆ, ಇಳಿಜಾರು ಮತ್ತು ತಪ್ಪಲಿನ ಅರಣ್ಯವೆಲ್ಲ ಕೇರಳೀಯರ ವಶವಾದ ಪ್ರಸ್ತಾಪದೊಂದಿಗೆ ನಿರೂಪಣೆ ಮುಖ್ಯ ಮಜಲನ್ನು ತಲುಪುತ್ತದೆ. ಇದಕ್ಕೆ ಎರಡು ಮುಖ. ಒಂದು, ಅರಣ್ಯ ನಾಶ: ಇನ್ನೊಂದು, ಸ್ಥಳೀಯರಿಗಾಗುವ ವಂಚನೆ. ಈ ಹಿಂದೆ ಹೇಳಿದ ಸೌಂದರ್ಯ, ಪರಿಪೂರ್ಣತೆ, ಪಂಥಾಹ್ವಾನ ಈ ಯಾವ ಸೆಲೆ, ಸೆಳೆತವೂ ಇಲ್ಲದ, ಲಾಭಕೋರತನವೊಂದೇ ಮಾರ್ಗದರ್ಶಿಯಾಗಿರುವ ರೂಕ್ಷ ಪ್ರಪಂಚದ ಒಂದು ಬೀಭತ್ಸ ಚಿತ್ರಣವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಕಾರಂತರು ಬಳಸುವ ಅವರ ಇಷ್ಟದ ಪದ 'ಚೆಲುವು' ಒಮ್ಮೆಯೂ ಈ ಕಾದಂಬರಿಯಲ್ಲಿ ಬಂದಿಲ್ಲ. ಪರಿಸರ ನಾಶದ ಜತೆಗೆ ಹೊರಗಿನ ಜನರ ಅವ್ಯಾಹತ ನುಸುಳುವಿಕೆಯಿಂದ ಜನಸಂಖ್ಯಾನುಪಾತ demography, ಏರುಪೇರಾಗಿ ಸಾಂಸ್ಕೃತಿಕ ಅವನತಿಯನ್ನೂ ಕಾಣುತ್ತೇವೆ. ನಿಸರ್ಗವೆಂದರೆ ವಿಶ್ವಾತ್ಮಕ ವ್ಯಕ್ತಿತ್ವವೆಂಬ ಭಾವ ಅಳಿದು ಅದು ಕೇವಲ ಒಂದು ಕಚ್ಚಾವಸ್ತುಗಳ ಮಂಡಿ ಎಂದಾಯಿತು.

ಜಾಗತಿಕ ಮತೀಯ ರಾಜಕಾರಣದಲ್ಲಿ ಇದು ಹೊಸತಲ್ಲ. ವಲಸೆ ರಾಜಕಾರಣ ಮತ್ತು ಜನಸಂಖ್ಯಾ ರಾಜಕಾರಣ ಮತೀಯತೆಯ ಎರಡು ಪ್ರಮುಖ ಪ್ರವರ್ತಕಗಳು. ಎರಡು ಅಮೇರಿಕಾಗಳು, ಒಂದು ಆಫ್ರಿಕಾ, ಒಂದು ಆಸ್ಟ್ರೇಲಿಯಾ, Polynesia, ಅರ್ಧ ಏಶಿಯಾವನ್ನು ನುಂಗಿನೊಣೆದ ಕ್ರೈಸ್ತ ವಲಸೆ ರಾಜಕಾರಣದ ಒಂದು ಪುಟ್ಟ ಮಾದರಿ sample ಇದು– ಸಹ್ಯಾದ್ರಿ ಪ್ರದೇಶ Jacobite, Syrian, Pentecost, Marthoma ಇತ್ಯಾದಿ ಚರ್ಚ್‌ಗಳ ವಶವಾದದ್ದು. ಇದೊಂದು ಸುವ್ಯವಸ್ಥಿತ ಸಂಚು. Spanish ಮತ್ತು Portuguese ಎಂಬ ಎರಡು ಕಬಂಧಬಾಹುಗಳ ಮೂಲಕ ಕಾರ್ಯಾಚರಣೆ ಮಾಡುತ್ತಿದ್ದ ಚರ್ಚ್‌ಗೆ 200 ವರ್ಷ ಕಳೆದರೂ ಬ್ರಿಟಿಷರಿಂದಾಗಿ ಭಾರತವನ್ನು ನುಂಗುವುದು ಸಾಧ್ಯವಾಗಲಿಲ್ಲ. ಬ್ರಿಟಿಷರು ಹೋದ ಕೂಡಲೇ ನಮ್ಮವರೇ ಇಡೀ ಸಹ್ಯಾದ್ರಿಯನ್ನು ಚಿನ್ನದ ತಟ್ಟೆಯಲ್ಲಿ ಇಟ್ಟು ಚರ್ಚ್‌ನ ವಶಕ್ಕೆ ಕೊಟ್ಟರು. ಇಂದು ಕೇರಳ, ತಮಿಳುನಾಡು, ಕರ್ನಾಟಕದ ಮಲೆನಾಡಿನ ಬಹುಭಾಗ, ಪೂರ್ವಕರಾವಳಿಯ ಅರಕು ಕಣಿವೆ ಮುಂತಾದೆಡೆ, ಪೂರ್ವಾಂಚಲದ ಬಹುಪಾಲು ಅರಣ್ಯಭಾಗ ಚರ್ಚ್‌ನ ವಶದಲ್ಲಿವೆ. ಪಟ್ಟಾ ಅದರ ಹೆಸರಲ್ಲಿ ಇಲ್ಲ ಎಂಬುದೊಂದೇ ವ್ಯತ್ಯಾಸ. ಶಾಂತಸಾಗರವನ್ನೇ ಕೆಂಪಾಗಿಸಿದ ರಕ್ತ ಇಲ್ಲಿ ಹರಿದಿಲ್ಲ ಎಂಬುದಷ್ಟೇ ವ್ಯತ್ಯಾಸ.

ವಲಸೆ ಹೋದಾಗ ಅನನ್ಯತೆ ಯಾವುದು? ಸಂಸ್ಕೃತಿಗೆ ನೆಲದ ನಂಟಿರುತ್ತದೆ. ಮತಕ್ಕೆ ನೆಲದ ನಂಟಿರುವುದಿಲ್ಲ. ಅಂದರೆ ನೆಲದಿಂದ ಪಲ್ಲಟಹೊಂದಿದರೆ ಒಂದು ಜನಾಂಗಕ್ಕೆ ಸಂಸ್ಕೃತಿ ಅನನ್ಯತೆಯಾಗಿ ಉಳಿಯುವುದಿಲ್ಲ. ಮತವೇ ಅನನ್ಯತೆಯಾಗಿಬಿಟ್ಟರಂತೂ ಸಂಸ್ಕೃತಿ, ಪ್ರಕೃತಿ ಯಾವುದರ ಗೊಡವೆಯೂ ಇರುವುದಿಲ್ಲ. ದೇವರನ್ನಂತೂ ಕ್ರಾಟನ್ ಗಿಡದಂತೆ ಕಿತ್ತು ಎಲ್ಲೆಂದರಲ್ಲಿ ನೆಡಬಹುದು! ಹಾಗಾಗಿ ವಲಸೆ ಹೋಗುವವರ ಗಂಟಲ್ಲಿ ಹಿಟ್ಟಿಲ್ಲದಿದ್ದರೂ ದೇವರು ಇರುತ್ತದೆ! ಹಾಗಾಗಿ ವಟಪುರದಲ್ಲಿ ದೇವಾಲಯಗಳಿಗೆ ಬರವಿಲ್ಲ. ವಟಪುರವೆಂಬುದು ಇಂತಹ ಅನನ್ಯತೆಗಳ ಗೋರಿ. ಭಗ್ನಾವಶೇಷಗಳ ನಡುವೆಯೇ ಸ್ವಲ್ಪ ಜಾಗವನ್ನು ತೆರವುಗೊಳಿಸಿ ವೆಂಕಟರಮಣ ದೇವಾಲಯವನ್ನು ಕಟ್ಟಿಸುವ ಉಮೇದು ಮರ್ತಪ್ಪ ಪ್ರಭುಗಳಿಗೆ!

ನಂತರ ಎಲ್ಲೆಂಲ್ಲಿಂದಲೋ ಮುಸ್ಲಿಮರು ಬಂದರು; ಮಸೀದಿ ಬಂತು. ಕ್ರಿಶ್ಚಿಯನ್ನರು

ಬಂದರು; ಚರ್ಚ್ ಬಂತು. ವಲಸೆ ಬಂದವರು ಜೋಪಡಿಯಲ್ಲಿ ಬದುಕಿದರೂ ಅವರನ್ನು 'ಗಟ್ಟಿಗೊಳಿಸುವ' ಚರ್ಚ್‌ಗಳು ಮಜಬೂತಾಗಿರುತ್ತವೆ. ಕಾರಂತರ ಕಾಲ ಮುಗಿಯುವ ಕಾಲಕ್ಕೆ ಪುತ್ತೂರು, ನಂತರ ಬೆಳ್ತಂಗಡಿ

ಊಂಠಿಭಿಜಜಗಳಾದವು. ಇಲ್ಲಿ ಕಾರಂತರು 'ಸರಕಾರದ ಕೃಪೆ' ಎನ್ನುತ್ತಾರೆ. ಹಿಂದೆ, ಪ್ರಭುತ್ವ ಈ ವಲಸೆಗಳಲ್ಲಿ ಅದೆಷ್ಟು ಪ್ರಜ್ಞಾಪೂರ್ವಕವಾಗಿ ಶಾಮೀಲಾಗಿರುತ್ತಿದ್ದವೋ ಎಂಬುದನ್ನು ಈಗ ಹೇಳುವುದು ದುಸ್ತರ. ಹಿಂಸೆಯಿಂದ ವಲಸೆ ಹುಟ್ಟಿಕೊಳ್ಳುತ್ತಿತ್ತು ನಿಜ. ವಲಸೆ ಹೋಗಬೇಕು, ವಲಸೆ ಹೋಗಿಸಬೇಕು ಎಂಬುದು ಎಷ್ಟು ಪ್ರಜ್ಞಾಪೂರ್ವಕವಾಗಿ ನಡೆಯುತ್ತಿತ್ತು ಎಂದು ಹೇಳುವುದು ಕಷ್ಟ. ಇಂದಂತೂ ಯಾವ Denominationನ ಸರಕಾರವಾದರೂ, ಎಲ್ಲಿನ ಸರಕಾರವಾದರೂ 'ವಲಸೆ'ಯಲ್ಲಿ ಸಹಾಯಕವಾಗಿಯೋ, ಅಸಹಾಯಕವಾಗಿಯೋ ಶಾಮೀಲಾಗಿರುತ್ತವೆ.

ಬಾಂಗ್ಲಾದಿಂದ ಬಂದ ನಿರಾಶ್ರಿತರನ್ನು, ಅಕ್ರಮವಲಸಿಗರನ್ನು ಕಾರಂತರು ಪ್ರಸ್ತಾಪಿಸುತ್ತಾರೆ. ಶ್ರೀಲಂಕಾದಿಂದ ವಲಸೆಬರುತ್ತಿರುವ ತಮಿಳರಿಗಾಗಿ ಸುಳ್ಯಪರಿಸರದಲ್ಲಿ ರಬ್ಬರ್ ಪ್ಲಾಂಟೇಶನ್‌ಗಳು ಹುಟ್ಟಿಕೊಳ್ಳುತ್ತಿರುವುದನ್ನು, ಅದಕ್ಕಾಗಿ ಕಾಡು ತೆರವಾಗುತ್ತಿರುವುದನ್ನು ಕಾರಂತರು ಪ್ರಸ್ತಾಪಿಸುತ್ತಾರೆ.

ಎರಡು ಶತಮಾನಗಳ ಹಿಂದಿನವರೆಗಾದರೆ ವಲಸೆಹೋದವರು ಎಂತೋ ಏನೋ ಹೋದಲ್ಲಿ ತಂಗುತ್ತಿದ್ದರು. ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ವಲಸೆ ಬಂದವರೆಲ್ಲ ಕಾಲಾಂತರದಲ್ಲಿ ಸ್ಥಳೀಯರೇ ಆಗಿಹೋದರು. ಆದರೆ ಯುರೋಪ್ ಮುಂತಾದೆಡೆ ಅಂತಾಗಲಿಲ್ಲ. ಅವರು ಹೊರಗಿನವರೇ ಆಗಿ ಉಳಿದುಬಿಟ್ಟರು. ಜಿಪ್ಸಿ, ರೋಮನಿ ಜನರು (ನಮ್ಮಲ್ಲಿನ ಲಂಬಾಣಿ ಅಥವಾ ಬಂಜಾರಾ ಬುಡಕಟ್ಟಿನವರು) ಹಿಂಸೆಗೆ ಗುರಿಯಾಗುತ್ತಾ ಬದುಕುತ್ತಿದ್ದಾರೆ.) ಕಳೆದೆರಡು ಶತಮಾನಗಳಿಂದ ಅಂತಾರಾಷ್ಟ್ರೀಯ ಗಡಿಗಳೆಲ್ಲ ಹೆಚ್ಚುಕಡಿಮೆ ಭದ್ರವಾಗಿ ರೂಪಿಸಲ್ಪಟ್ಟಿದ್ದರಿಂದ ಮತ್ತು ಜನಸಂಖ್ಯೆ ಅಗಾಧವಾಗಿ ಹೆಚ್ಚಿದ್ದರಿಂದ ಈಗ ವಲಸೆ ಹೋದವರು ನಿರಾಶ್ರಿತರೆಂಬ ಹಣೆಪಟ್ಟಿ ಅಂಟಿಸಿಕೊಂಡು ಅತಂತ್ರರಾಗಿಯೇ ಉಳಿಯುವ ಸ್ಥಿತಿ ನಿರ್ಮಾಣವಾಗಿದೆ. ಒಂದು ಅಂಕಿಅಂಶಗಳ ಪ್ರಕಾರ ಈ ವಿಶ್ವದಾದ್ಯಂತ 30 ಮಿಲಿಯಕ್ಕೂ ಅಧಿಕ ನಿರಾಶ್ರಿತರಿದ್ದಾರೆ.)

ಮಾನವ ಚರಿತ್ರೆಯಲ್ಲಿ ವಲಸೆ ಎಂಬುದು ರಕ್ತಸಿಕ್ತ ಅಧ್ಯಾಯ. ಪಶುಪಕ್ಷಿಪ್ರಾಣಿಗಳು ವಲಸೆಹೋಗುವುದು ಕೇವಲ ಮೂರು ಕಾರಣಗಳಿಗಾಗಿ. ಆಹಾರ, ವಂಶಾಭಿವೃದ್ಧಿ ಮತ್ತು ಬೆಚ್ಚನೆ ಅಥವಾ ಶೀತ ವಾತಾವರಣದಲ್ಲಿ ಬದುಕಲು. ಇದು ಸಂವತ್ಸರದ ಒಂದು ನಿರ್ದಿಷ್ಟ ಸಮಯದಲ್ಲಿ ನಡೆಯುತ್ತದೆ, ಎರಡು ನಿರ್ದಿಷ್ಟ ಪ್ರದೇಶಗಳ ನಡುವೆ ನಡೆಯುತ್ತದೆ. ಆದರೆ ಮನುಷ್ಯನ ವಿಷಯ ಹಾಗಲ್ಲ.

ಮಾನವ ನಾಗರೀಕತೆಯನ್ನು ರೂಪಿಸಿದ, ಜನಾಂಗ–ಜನಾಂಗಗಳನ್ನೇ ಇಲ್ಲವಾಗಿಸಿದ, ಭಾಷೆ–ಸಂಸ್ಕೃತಿಗಳನ್ನು ಪ್ರಭಾವಿಸಿದ, ನಾಶಗೊಳಿಸಿದ ಒಂದು ದೊಡ್ಡ ವಿದ್ಯಮಾನವೆಂದರೆ ವಲಸೆ. ವಲಸೆ ಎಂಬುದು ಅನಾದಿ ಕಾಲದಿಂದ ತೊಡಗಿ ಇಂದಿನ ತನಕ ಹತ್ತಾರು, ನೂರಾರು ರೂಪಗಳಲ್ಲಿ ಕಾಣಿಸಿಕೊಂಡಿದೆ.

ಇಂದು ನಾವು ಆಫ್ರಿಕಾ ಎಂದು ಕರೆಯುವ ಭೂಭಾಗದ ಪರ್ವತ ಪ್ರದೇಶದ ದಟ್ಟ ಕಾಡುಗಳಲ್ಲಿ ಮಿಲಿಯಾಂತರ ವರ್ಷಗಳ ಕಾಲ ಬದುಕಿ 'ಬೋರ್' 'ನೀರಸ' ಎಂದು ತಿಳಿದ ಒಂದು ನರವಾನರ, Ape, ಅಕಸ್ಮಾತ್ ಮರ ಇಳಿದು ಬದುಕುವ ನಿರ್ಧಾರ ಮಾಡುವಲ್ಲಿಂದ ತೊಡಗಿ ನಿನ್ನೆಮೊನ್ನೆ Kansas ನ Pub ಒಂದರಲ್ಲಿ ಆಂಧ್ರದ ಹುಡುಗ ಶ್ರೀನಿವಾಸ್

ಕೂಚಿಬೊಟ್ಲನ ಎದೆಗೆ ಬಡಿದ ಗುಂಡಿನ ತನಕ ವಲಸೆಗೆ ನೂರಾರು ಮುಖಗಳು, ರೂಪಗಳು, ಕಾರಣಗಳು, ನಿಷ್ಕಾರಣಗಳು.

ಮರ ಇಳಿದು Homo Erectus, Homo Neanderthal, Homo Sapiens, ಎಂಬಿತ್ಯಾದಿ ಮನುಷ್ಯ ಎನ್ನಿಸಿಕೊಂಡ ನರವಾನರ ತನ್ನ ಪ್ರಸರಣಕ್ಕೆ ನಾಂದಿಹಾಡಿತು. ಆ ಹೊತ್ತಿಗೆ ಸರಿಯಾಗಿ ಭೂಮಿಯ ಮೇಲ್ಮೈ ಚಿಪ್ಪುಗಳು, plates, ಛಿದ್ರವಾಗಿ ಚದುರಲಾರಂಭಿಸಿ ಮನುಜಸಂಕುಲವೂ ಇತರ ಅಸಂಖ್ಯ ಜಂತುಗಳೊಂದಿಗೆ ಜಗತ್ತಿನ ಮೂಲೆಮೂಲೆಗೆ ಚದುರುವಂತಾಯಿತು. ಒಂದು ಪ್ರಬೇಧ ಹತ್ತು ಉಪಪ್ರಬೇಧಗಳಾಗಿ ಒಡೆಯುವಂತಾಯಿತು. ಸಸ್ಯಾಹಾರಿಯಾದ ಮನುಷ್ಯ ಬೆಂಕಿಯ ಉಪಯೋಗವನ್ನು ಮತ್ತು ಬೇಟೆಯನ್ನು ಕಲಿತ ಅನಂತರ ಅವನ ಗುಂಪುಗಳು ಅನಿವಾರ್ಯವಾಗಿ ಪಲ್ಲಟಗೊಳ್ಳಬೇಕಾಯಿತು. ಇದು ಪ್ರಾಣಿಗಳ ವಲಸೆಗಿಂತ ಭಿನ್ನ. ಮೊದಲು ಜನಾಂಗ ಅನಂತರ ಭಾಷಾ ಭೇದ, ತದನಂತರ ಕೃಷಿ ಮತ್ತು ನಾಗರಿಕತೆಗಳು ಹುಟ್ಟಿದ ಮೇಲೆ ಮನುಷ್ಯಪ್ರಬೇಧದಲ್ಲಿ ಗುಂಪುಗಾರಿಕೆ ಹೆಚ್ಚಿತು. ಅನೇಕ ತರದ ಈ ಗುಂಪುಗಳ ನಡುವೆ ಲಾಗಾಯ್ತಿನಿಂದ ಸಂಘರ್ಷ, ಯುದ್ಧ. ಯುದ್ಧದ ಕಾರಣದಿಂದ ವಲಸೆ, ನಿರಾಶ್ರಯ; ನಿರಾಶ್ರಯದಿಂದ ಮತ್ತೆ ವಲಸೆ, ಯುದ್ಧ.

ರಾಜಕೀಯ ಮತ್ತು ರಾಜ್ಯಗಳ ಉದಯದಿಂದ ಯುದ್ಧವೂ ಹೆಚ್ಚಿತು. ಯುದ್ಧಕ್ಕಾಗಿ ಕುದುರೆಕತ್ತೆಗಳನ್ನು ಸಾಕಲು ವಿಸ್ತಾರವಾದ ಭೂಮಿಯನ್ನು ತೆರವುಗೊಳಿಸಲಾಯಿತು. ಉತ್ತರ ಆಫ್ರಿಕಾ, ಮಧ್ಯ ಏಶಿಯಾದ ಹಲವು ವಿಸ್ತಾರ ಪ್ರದೇಶಗಳಲ್ಲಿ ಸಾವಿರಾರು ಕುದುರೆಗಳನ್ನು ಸಾಕಿ ಯುದ್ಧಭೂಮಿಗಳಿಗೆ ರಫ್ತು ಮಾಡುವುದೇ ಕಾಯಕವಾಯಿತು. ಅನೇಕ ಜನಸಮುದಾಯಗಳು ಈ ಕಾಯಕಕ್ಕಾಗಿಯೇ ವಲಸೆಹೋದರು, ಅದರಿಂದಾಗಿಯೇ ಹಲವು ಸಮುದಾಯಗಳು ಗುಳೆ ಏಳುವಂತಾಯಿತು. ಸಾವಿರಾರು, ಸಾವಿರಾರು ಹೆಕ್ಟೇರ್ ಅರಣ್ಯಭೂಮಿಯನ್ನು ಅದಕ್ಕಾಗಿ ತೆರವುಗೊಳಿಸಿ ಹುಲ್ಲುಗಾವಲನ್ನಾಗಿ, ಮರುಭೂಮಿಯನ್ನಾಗಿ ಪರಿವರ್ತಿಸಲಾಯಿತು. ಈ ಕುದುರೆಗಳ ಆಮದಿಗಾಗಿಯೆ ರೇವುಗಳು ಹುಟ್ಟಿಕೊಂಡವು.

ಪುಣ್ಯಭೂಮಿ ಭಾರತವೂ ಇದರಲ್ಲಿ ಹಿಂದೆ ಬೀಳಲಿಲ್ಲ. ಯುದ್ಧದಲ್ಲಿ ಹೋರಾಡಲು ಸಾವಿರಾರು ಆನೆಗಳನ್ನು ಹಿಡಿದು ಕೊಲ್ಲಲಾಯಿತು; ವಿಸ್ತಾರ ಅರಣ್ಯಭೂಮಿಯನ್ನು ನಾಶಗೊಳಿಸಲಾಯಿತು. ಸೈನಿಕರ ಗುರಾಣಿಯನ್ನಾಗಿ ಬಳಸುವ ಚಿಪ್ಪಿಗಾಗಿ ತುಂಗಭದ್ರಾ ಮತ್ತಿತರ ನದಿಗಳಲ್ಲಿ ಹೇರಳವಾಗಿ ಬದುಕಿದ್ದ ಬೃಹದ್ಗಾತ್ರದ ಆಮೆಗಳನ್ನು ಹೆಚ್ಚುಕಡಿಮೆ ನಿರ್ನಾಮ ಮಾಡಲಾಯಿತು. ಆನೆ ಮತ್ತು ಆಮೆಗಳನ್ನು ಹಿಡಿಯುವ ಕಾಯಕಕ್ಕಾಗಿಯೇ ಕೆಲವು ಸಮುದಾಯಗಳು ಕಾಡುಪ್ರದೇಶಕ್ಕೆ ವಲಸೆಹೋದವು. ಯುದ್ಧರಂಗದಲ್ಲಿ ಅನಾಥವಾಗಿ ಬಿದ್ದ ಚಿಪ್ಪು ಮತ್ತಿತರ ಸಾಮಗ್ರಿಗಳ ಸಂಗ್ರಹಕ್ಕಾಗಿಯೂ ತಾತ್ಕಾಲಿಕ ಮತ್ತು ಶಾಶ್ವತ ವಲಸೆ ನಡೆಯಿತು. ಸೈನ್ಯ ಸಾಗಾಟ ಸುಗಮವಾಗಲು ನದಿಗಳಲ್ಲಿ ಬದುಕಿದ್ದ ಮೊಸಳೆಗಳ ಮಾರಣಹೋಮ ಮಾಡಲಾಯಿತು. ಪಶ್ಚಿಮ ಕರಾವಳಿಯಲ್ಲಿ ಈಗ ಮೊಸಳೆಗಳು ನಿರ್ವಂಶವಾಗಿವೆ.

ಮರಾಠಾ, ಪೋರ್ಚುಗೀಸ್, ಬಿದನೂರು, ಕೆಳದಿ, ಬ್ರಿಟಿಷ್, ನಂತರ ನಮ್ಮದೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯುದ್ಧ ಮತ್ತು ಆಡಳಿತದ ಹೆಸರಲ್ಲಿ ನಡೆದ ವಲಸೆ ಮತ್ತು ನೇಮಕವೆಂಬ ಬಿಡಿ ವಲಸೆಗಳ ವಿಶ್ಲೇಷಣೆಯನ್ನು ಕಾರಂತರು 'ಅದೇ ಊರು ಅದೇ ಮರ' ಕಾದಂಬರಿಯಲ್ಲಿ ನಡೆಸುತ್ತಾರೆ. ಅವರೆಲ್ಲರಿಗೂ ಭೂಮಿ–ಮನೆ ಬೇಕು, ಕಟ್ಟಿಗೆಬೇಕು. ಕಾಡು ನಾಶವಾಗಬೇಕು. ಕಾದಂಬರಿಯ ಕೊನೆ ಮುಟ್ಟುವ ಹೊತ್ತಲ್ಲಿ ವಟಪುರ ಎಂಬ ಹಳ್ಳಿಯು ಕಾಡು, ಹಾಡಿ, ಮರ ಏನೂ ಇಲ್ಲದ ಬೆಂಗಾಡಾಗಿದೆ. ಕಾದಂಬರಿಯ ಆರಂಭದಲ್ಲಿ

ಬೇಣದ ಗೋಳಿಮರದ ನೆರಳಲ್ಲಿ ನಿಂತ ರಾಮ ಭಟ್ಟರು ಅದನ್ನು ಸಹಸ್ರಾರು ಹಕ್ಕಿ ಮತ್ತು ಇತರ ಜೀವಿಗಳ ಆವಾಸ, ಆಶ್ರಯ ತಾಣವಾಗಿ ಗುರುತಿಸುತ್ತಾರೆ. ಕಾದಂಬರಿಯ ಕೊನೆಯಲ್ಲಿ ಮರವೆಂದರೆ ಬರೇ ಮೋಪು, ಕಟ್ಟಿಗೆ. ನಮಗೆ ಲಾಭ ತರುವ ರಬ್ಬರು, Cintenella ಹುಲ್ಲು, ಶುಂಠಿ, ಲಾವಂಚ, ಅಡಿಕೆ ಇತ್ಯಾದಿ ಬಿಟ್ಟು ಉಳಿದೆಲ್ಲ ಗಿಡಮರಗಳೆಲ್ಲ ಕಳೆಗಳೇ. ಪಶುಪಕ್ಷಿಗಳೆಲ್ಲ ಪ್ಲೇಟುತಟ್ಟೆಗಳಿಲ್ಲದೆ, ನಡೆದಾಡಿಕೊಂಡು supply ಆಗುವ ಪಲ್ಯ ಸಾಂಬಾರುಗಳು. ಅಪ್ಪಳಸ್ವಾಮಿ ಮತ್ತು ಆರೋಕ್ಯಸ್ವಾಮಿ ನಮಗೆ ಇಷ್ಟನ್ನು ಕಲಿಸಿದರು, ನಾವು ಸಂತೋಷದಿಂದ ಕಲಿತೆವು. ವಟಪುರವೆಂದರೆ ದಕ್ಷಿಣ ಕನ್ನಡದ, ಕರ್ನಾಟಕದ, ಭಾರತ ದೇಶದ ಯಾವ ಹಳ್ಳಿಯೂ ಆಗಬಹುದು, ಪ್ರತಿ ಹಳ್ಳಿಯೂ ಆಗಬಹುದು. ಅದೇ ಊರು ಅದೇ ಮರ ಕಾದಂಬರಿಯಲ್ಲಿ ಕಾರಂತರು ಸಂಪೂರ್ಣವಾಗಿ, ವಿವರವಾಗಿ ವಿಶ್ಲೇಷಿಸಿದ ವಿಷಯಗಳಲ್ಲಿ ಕೆಲವು ಇಡಿಯಾಗಿ, ಬಿಡಿಯಾಗಿ ಮೂಜನ್ಮ, ನಾವು ಕಟ್ಟಿದ ಸ್ವರ್ಗ ಮುಂತಾದ ಕಾದಂಬರಿಗಳಲ್ಲೂ ಚರ್ಚೆಯಾಗುತ್ತವೆ.

ಗುಲಾಮಗಿರಿಯನ್ನು ಬಹುತೇಕ ಅವಲಂಬಿಸಿದ್ದ ಗ್ರೀಕ್ ಮತ್ತು ರೋಮನ್ ನಾಗರಿಕತೆ ಮತ್ತು ಚಕ್ರಾಧಿಪತ್ಯಗಳು ಕೂಡಾ ಅದಕ್ಕಾಗಿ ನಡೆಸಿದ ಯುದ್ಧಗಳು, ಪರಿಸರ ನಾಶ, ಹುಟ್ಟುಹಾಕಿದ ವಲಸೆಗಳು ಎಣೆಯಿಲ್ಲದ್ದು. ರೋಮನ್ ದೊರೆ ಪೋಂಪೆ ತನ್ನ ಪ್ರೇಯಸಿ ಕ್ಲಿಯೋಪಾತ್ರಾಳನ್ನು ಮೆಚ್ಚಿಸಲು 1500 ಸಿಂಹಗಳ ಮೆರವಣಿಗೆಯನ್ನು ಏರ್ಪಡಿಸಿದ್ದನಂತೆ. ಅಷ್ಟು ಸಿಂಹಗಳನ್ನು ಹಿಡಿಯುವಾಗ ನಡೆದ ವನ್ಯಜೀವಿಗಳ ಹತ್ಯೆ, ಅರಣ್ಯನಾಶ, ವಲಸೆ ಎಷ್ಟಿರಬಹುದು! ಇದೊಂದು ಚಿಕ್ಕ ಉದಾಹರಣೆ.

ಗುಲಾಮಗಿರಿ ಎಂದಾಗ ನೆನೆಪಾಗುವುದು ಅದೇ ಊರು ಅದೇ ಮರ ಕಾದಂಬರಿಯಲ್ಲಿ ಕಾರಂತರು ಚಿತ್ರಿಸುವ ಕೊರಗರ ಕರುಣಾಜನಕ ಸ್ಥಿತಿ. ಸುದೈವವಶಾತ್ ಯಾವ ವಿಮರ್ಶಕರೂ ಅದರ ಬಗ್ಗೆ ಮಾತನಾಡಿಲ್ಲ, ದಲಿತ ಚಿಂತಕರೂ ಅದನ್ನು ಗುರುತಿಸಲಿಲ್ಲ. ಕೇರಳದ ಚರ್ಚ್‌ಗಳಿಗೆ ಸಾವಿರಾರು ಎಕರೆ ಅರಣ್ಯಭೂಮಿ, ರೆವಿನ್ಯೂ ಭೂಮಿ ಕೊಡಮಾಡಿದ ನಮ್ಮ ಸರಕಾರಗಳಿಗೆ, ರಾಜಕೀಯ ಪಕ್ಷಗಳಿಗೆ ಕೊರಗ ಮೊದಲಾದ ಬಡವರಿಗೆ ಮೂಲನಿವಾಸಿಗಳಿಗೆ ಒಂದು ಸೆಂಟ್ಸ್ ಜಾಗವನ್ನೂ ನೀಡಲಾಗಲಿಲ್ಲ ಎನ್ನುತ್ತಾರೆ ಕಾರಂತರು.

ವಿಶ್ವದಾದ್ಯಂತ ಅದೆಷ್ಟೋ ಜನಸಮುದಾಯಗಳು ಪಶುಪಾಲನೆ ಮಾಡುತ್ತಾ, ಕುಮರಿ ಬೇಸಾಯ ಮಾಡುತ್ತಾ ಜಾಗದಿಂದ ಜಾಗಕ್ಕೆ ವಲಸೆ ಹೋದದ್ದನ್ನು ಕಾಣುತ್ತೇವೆ. ಅದೇ ರೀತಿ ಸಮುದಾಯದೊಳಕ್ಕೆ ಜನಸಂಖ್ಯೆ ಹೆಚ್ಚಿ ಒಡೆದು ವಲಸೆಹೋದ ಗುಂಪುಗಳು ಮತ್ತೆಲ್ಲಿಯೋ ಚಿಗುರಿ ಪ್ರತ್ಯೇಕ ಸಮುದಾಯಗಳೇ ಆದವು. ಬರಗಾಲದಿಂದ ವಲಸೆ ಹೋದ ಸಮುದಾಯಗಳು ಅನೇಕ.

ದಂಡೆತ್ತಿ ಹೋಗಿ ಅಲ್ಲಿಯೇ ಉಳಿದವರಿದ್ದಾರೆ, ತಮ್ಮ ಒಂದು ತುಕಡಿಯನ್ನು ಉಳಿಸಿ ಬಂದವರಿದ್ದಾರೆ. ಹಿಮಾಚಲಪ್ರದೇಶದ ಒಂದು ಹಳ್ಳಿಯಲ್ಲಿ ಇರುವ ಒಂದು ವಿಶಿಷ್ಟ ಜನಸಮುದಾಯವು ಅಲೆಕ್ಸಾಂಡರ್ ಚಕ್ರವರ್ತಿ ಭಾರತದಲ್ಲಿ ಉಳಿಸಿಹೋದ ತುಕಡಿಯ ಪೀಳಿಗೆಯವರು ಎಂಬ ಅಭಿಪ್ರಾಯವಿದೆ. ಮರಾಠಾ ಸೈನ್ಯ ಕೂಡಾ ಇಂತಹ ಕ್ರಮವನ್ನು ಪಾಲನೆ ಮಾಡಿದ್ದುಂಟು. ತಂಜಾವೂರಿನಲ್ಲಿರುವ ಸಂಸ್ಥಾನ ಆ ಬಗೆಯದ್ದು. ಗುಂಪುಗುಂಪುಗಳಾಗಿ ಹೋಗಿ ವೇತನ ಕೊಟ್ಟವರ ಸೈನ್ಯದಲ್ಲಿ ದುಡಿಯುತ್ತಿದ್ದ ಸಮುದಾಯಗಳೂ ಇದ್ದವು. ಮರಾಠಾ ಹೋರಾಟಗಾರರು, ನೇಪಾಳಿ ಗೂರ್ಖಾ ಸಮುದಾಯಗಳು ಅಂತವರು ಒಂಥರಾ mercinaries ಇದ್ದ ಹಾಗೆ. ಅವರ ಸಾಂಸ್ಕೃತಿಕ ಅವನತಿ ಸಹಜವಾಗಿಯೇ ನಡೆಯುತ್ತದೆ.

ಬಲು ಹಿಂದಿನ ಚರಿತ್ರೆಯಲ್ಲಿ ಶುರುವಾಗಿ ಇಂದೂ ಮುಂದುವರಿಯುತ್ತಿರುವ ಒಂದು ದೊಡ್ಡ ನಿರಾಶ್ರಿತ–ವಲಸೆ ಸಮುದಾಯವೆಂದರೆ ಯುದ್ಧ ನಿರಾಶ್ರಿತರು, War Refugees.

ಮತಪಂಥ, ನಂಬಿಕೆ, ಆಚರಣೆ ಇತ್ಯಾದಿಗಳ ಇತಿಹಾಸದಲ್ಲಿ ಬಲುದೊಡ್ಡ ತಿರುವೆಂದರೆ ಎರಡು ವಿಸ್ತರಣಾವಾದಿ ಅಬ್ರಹಾಮಿಕ್ ಮತ, ರಿಲಿಜನ್‌ಗಳ ಉಗಮ. ಇಸ್ಲಾಂ ಮತ್ತು ಕ್ರೈಸ್ತ ಮತಗಳ ಚರಿತ್ರೆಯೆಂದರೆ ಅನೇಕ ಜನಾಂಗಗಳ ಮಾರಣಹೋಮ, ವಿಸ್ತಾರ ಭೂಭಾಗಗಳ ನಾಶ, ಸಂಸ್ಕೃತಿ, ಭಾಷೆ, ಆಚರಣೆಗಳ ವಿನಾಶಗಳ ಚರಿತ್ರೆ. ಅವರಿಬ್ಬರ ನಡುವಿನ ಜಗಳದಲ್ಲಿ, ಅಂದರೆ ಜೆಹಾದ್–ಕ್ರುಸೇಡ್ ಜುಗಲ್‌ಬಂಧಿಯಲ್ಲಿ ಯುರೋಪ್, ಆಫ್ರಿಕಾ, ಏಶಿಯಾ ಖಂಡಗಳೇ ಸ್ಮಶಾನ ಭೂಮಿಗಳಾಗಿವೆ. ಆ ಜುಗಲ್‌ಬಂಧಿ ಇನ್ನೂ ನಡೆಯುತ್ತಲೇ ಇದೆ. ಈ ಅಬ್ರಹಾಮಿಕ್ ವಿಸ್ತರಣಾವಾದಕ್ಕೆ imperialism ಗೆ, ಎರಡು ಆಯಾಮಗಳಿವೆ. ಒಂದು, ಹೊಸನಾಡುಗಳಿಗೆ ವಲಸೆಹೋಗಿ, ಮೂಲನಿವಾಸಿಗಳನ್ನು ಕೊಂದು ಅಥವಾ ಒಕ್ಕಲೆಬ್ಬಿಸಿ ಓಡಿಸಿ ಅವರ ಜಾಗವನ್ನು ಆಕ್ರಮಿಸುವುದು. ಇನ್ನೊಂದು, ವಲಸೆಹೋಗಿ ಅವರನ್ನು ಆಮಿಷ ಒಡ್ಡಿಯೋ, ಬಲಾತ್ಕರಿಸಿಯೋ ಮತಾಂತರಿಸಿ ತಮ್ಮವರನ್ನಾಗಿಸುವುದು. ಮತ್ತೆ ಹಾಗೆ ಮತಾಂತರವಾದವರು ವಿಸ್ತರಣಾವಾದವನ್ನು ಮುಂದುವರಿಸುತ್ತಾರೆ. ಎಲ್ಲಿಗೆ ಯಾವುದು ಸೂಕ್ತವೋ ಅದನ್ನು ಅನುಸರಿಸುವುದು. ಅತಿಕ್ರಮಣ ಮತ್ತು ವಶಪಡಿಸಿಕೊಳ್ಳುವಿಕೆ (Encroachment and Capture) ಅಬ್ರಹಾಮಿಕ್ ಮತಗಳ ಮುಖ್ಯ ಸಿದ್ಧಾಂತ.

ಆಫ್ರಿಕಾದ ಉತ್ತರಭಾಗ ಸಂಪೂರ್ಣ ಅರಬರ ವಶವಾದರೆ, ಪೋರ್ಚುಗಲ್‌ನ ಸ್ವಲ್ಪ ಭೂಭಾಗ, ಯುರೋಪಿನ ಪೂರ್ವ, ಏಶಿಯದ ಬಹುಭಾಗ ವಹಾಬಿ ವಿಸ್ತರಣಾವಾದಕ್ಕೆ ಬಲಿಯಾಯಿತು. ನಾಶವಾದ ಪರಿಸರ, ಜನಾಂಗ, ಸಂಸ್ಕೃತಿಗಳ ಲೆಕ್ಕವಿಟ್ಟವರಿಲ್ಲ. Romani, Gypsy ಮತ್ತು Jews ಯಹೂದಿ ಜನರು ಮಿಲಿಯಾಂತರ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರು; ಅಳಿದುಳಿದವರು ವಿಶ್ವದಾದ್ಯಂತ ಹಂಚಿಹೋಗಿದ್ದಾರೆ. ಇಡೀ ಜಗತ್ತಿನಲ್ಲಿ ನಡೆದ ಪರಿಸರ ಮತ್ತು ಸಂಸ್ಕೃತಿ ನಾಶ ಒಂದು ತೂಕವಾದರೆ ಚರ್ಚ್ ಮತ್ತು ಲೂಟಿಕೋರರು ಜತೆಯಾಗಿ ಎರಡು ಅಮೇರಿಕಾಗಳಲ್ಲಿ ನಡೆಸಿದ ನಾಶವೇ ಒಂದು ತೂಕ. ಕಳೆದ 3–4 ಶತಮಾನಗಳಲ್ಲಿ ಸ್ಪಾನಿಶ್ ಮತ್ತು ಪೋರ್ಚುಗೀಸ್ ಚರ್ಚ್ ಮತ್ತು ಲೂಟಿಕೋರರು ದಕ್ಷಿಣ ಅಮೇರಿಕಾ ಒಂದರಲ್ಲೇ ಕೊಂದು ಕಳೆದ ಜನರ ಸಂಖ್ಯೆ 120 ಮಿಲಿಯನ್‌ಗೂ ಅಧಿಕ. ಇನ್ನು ಪಶುಪಕ್ಷಿಪ್ರಾಣಿಗಳಿಗೆ ಲೆಕ್ಕವಿಲ್ಲ. ಬರಿದಾದ ಅರಣ್ಯ, ನಾಶವಾದ ನಿಸರ್ಗ ವ್ಯವಸ್ಥೆಗಳಿಗೂ ಲೆಕ್ಕವಿಲ್ಲ. ಹಲವಾರು ಜನಾಂಗಗಳೇ ನಾಮಾವಶೇಷವಾದವು. ಹಲವು ಜನಾಂಗಗಳಲ್ಲಿ ಬೆರಳೆಣಿಕೆಯ ಮಂದಿ ಉಳಿದಿದ್ದಾರೆ. ಉತ್ತರ ಅಮೇರಿಕಾದಲ್ಲಿ ಕೊಲ್ಲಲ್ಪಟ್ಟ ವಿವಿಧ Red Indian ಜನಾಂಗಗಳ ಜನರ ಸಂಖ್ಯೆ ಒಂದು ಅಂದಾಜಿನ ಪ್ರಕಾರ 30 ಮಿಲಿಯನ್. ಲೇಖಕ Charles Mann ಅವರ ಪ್ರಕಾರ ಇದು 100 ಮಿಲಿಯನ್. ಕೆಲವು ಜನಾಂಗಗಳು ಅಳಿದು ಹೋಗಿವೆ. ಒಂದೊಮ್ಮೆ ಇಡೀ ಉತ್ತರ ಅಮೇರಿಕಾದಾದ್ಯಂತ ಓಡಾಡಿಕೊಂಡಿದ್ದ Bison, Cougars, Reindeers, Puma ಎಲ್ಲವೂ ಬೆರಳೆಣಿಕೆಯಲ್ಲಿ ಉಳಿದುಕೊಂಡಿವೆ.

ವಲಸೆಯ ಈ ಎಲ್ಲ ಕಾರಣಗಳು ಒಂದರೊಳಗೊಂದು ಮಿಳಿತವಾಗಿ ಹತ್ತಲ್ಲ, ನೂರಲ್ಲ, ಸಾವಿರಾರು ರೂಪಗಳನ್ನು, ಪ್ರಮಾಣಗಳನ್ನು ಪಡೆದಿವೆ.

ಮುಖ್ಯವಾಹಿನಿಯ ಮಾಧ್ಯಮ ವಿಸ್ತರಣಾವಾದಿಗಳ ಜತೆಗೇ ಇದ್ದರೂ ಕೂಡಾ ಯುರೋಪಿನ ಸಂಸ್ಕೃತಿಯಲ್ಲಿ, ಬೌದ್ಧಿಕತೆಯಲ್ಲಿ ಹಾಸುಹೊಕ್ಕಾಗಿರುವ ಸತ್ಯಸಂಧತೆ, ವೈಜ್ಞಾನಿಕ ಮನೋಧರ್ಮ, ನಿರ್ಭಯತೆ, ಪ್ರಾಮಾಣಿಕತೆಗಳನ್ನು ಕದಲಿಸುವುದು ಈ ಮತಪಂಥಗಳಿಗೆ

ಸಾಧ್ಯವಾಗಲಿಲ್ಲ. ಅವು ಎಷ್ಟೇ ಕ್ಷೀಣವಾಗಿದ್ದರೂ ಈ ವಿನಾಶವೆಲ್ಲ ಕಾಲಕಾಲಕ್ಕೆ ಅಷ್ಟೋಇಷ್ಟೋ ದಾಖಲಾಗಿವೆ. ಈ ಎಲ್ಲ ದಾಖಲೆಗಳನ್ನು ವಿಸ್ತರಣಾವಾದಿಗಳು ತಳ್ಳಿಹಾಕುತ್ತಾ ಬಂದಿದ್ದಾರೆ.

ತಮ್ಮೆಲ್ಲಾ ಅನ್ಯಾಯಗಳನ್ನು ಸಮರ್ಥಿಸಲು ಹಲವಾರು ಸಿದ್ಧಾಂತಗಳನ್ನು ರೂಪಿಸುತ್ತಾರೆ. ಅವುಗಳಲ್ಲಿ ಸೇವೆ ಒಂದು. (ಚರ್ಚ್‌ನ 'ಸೇವೆ'ಯನ್ನು ಸತ್ಯವೆಂದು ಹೃದಯಪೂರ್ವಕವಾಗಿ ನಂಬಿದವರು ನಾವು ಮಾತ್ರ. ನಿಜವೆಂದರೆ ಪ್ರೊಟೆಸ್ಟಂಟ್ ಪಂಥ ಹುಟ್ಟಿಕೊಂಡಾಗ ತಾನು ಉಳಿದುಕೊಳ್ಳಲು ಕೆಥೋಲಿಕ್ ಚರ್ಚ್ ಹುಟ್ಟಿಸಿಕೊಂಡ ಒಂದು ಹತ್ಯಾರ ಅಷ್ಟೇ ಅದು. ಅದೇ Counter Reformation.) 'ಮೂಢನಂಬಿಕೆ' ಎಂಬುದು ಇನ್ನೊಂದು ಅಂತಹ ಹತ್ಯಾರ. ಮತಾಂತರವಾಗಲು ಒಪ್ಪದಿದ್ದಾಗ Barbarians, Cannibals ಎಂದು 'ಸಾಬೀತು ಪಡಿಸಿ' ಅವರನ್ನು ಕೊಂದುಕಳೆದದ್ದುಂಟು. ಯಾರು ಬಲಿಪಶುಗಳಾಗಿದ್ದಾರೆ, ಅವರಲ್ಲಿ ನೈಚ್ಯಭಾವ ಹುಟ್ಟುವ ಹತ್ತು ಹಲವು ಶಿಕ್ಷಣಗಳನ್ನು ಕೊಡುವುದು. ತಾವೇಮುಂದಾಗಿ Victimhood ಅನ್ನು ಆವಾಹಿಸಿಕೊಳ್ಳುವುದು. ಒಮ್ಮೆ ನೈಚ್ಯಭಾವ ಮತ್ತು Dhimmyism ನಮ್ಮ ಮನದಲ್ಲಿ ಹುಟ್ಟಿಕೊಂಡರೆ ಸಾಕು, ಬಿಡುಗಡೆ ಇಲ್ಲ. ನಮ್ಮನ್ನು ಕೊಂದುಕಳೆದವರೇ ನಮಗಿಂತ ದೊಡ್ಡ ಬಲಿಪಶುಗಳು ಎಂದು ಒಮ್ಮೆ ಅನ್ನಿಸಿಬಿಟ್ಟರೆ ಮುಗಿಯಿತು.

ಅಮೇರಿಕಾಗಳಲ್ಲಿ ನಡೆದ ಅನ್ಯಾಯಗಳನ್ನು ದಾಖಲಿಸಿದವರನ್ನು, ಪ್ರಶ್ನಿಸುವವರನ್ನು ಚರ್ಚ್ ಮತ್ತು ಅದರ ಪರವಾದ ಮುಂಚೂಣಿಯ ಮಾಧ್ಯಮಗಳು ಎಡಪಂಥೀಯರು, ದೈವವಿರೋಧಿಗಳು, heretics ಎಂದು ಕರೆಯುತ್ತಾ ಬಂದಿವೆ. ಉತ್ತರ ಅಮೇರಿಕಾದಲ್ಲಿ ನಡೆದ ನರಮೇಧವನ್ನು ದಾಖಲಿಸಿದ Charles Mannನ 1491: The Americas before Columbus, David Stannardನ American Holocaust ಕೃತಿಗಳನ್ನು ಗೇಲಿ ಮಾಡುತ್ತಾರೆ, ವಿರೋಧೀ ಅಂಕಿಅಂಶಗಳನ್ನು ಸೃಷ್ಟಿಸುತ್ತಾರೆ. ಅವರನ್ನು ಕೊಂದದ್ದಲ್ಲ, ಅವರು cholera, influenza, Tuberculosis, gonorrhea, syphilis ಇತ್ಯಾದಿ ಕಾಯಿಲೆ ಬಂದು ತೀರಿಕೊಂಡರು ಎಂಬ Science fictionಗಳನ್ನು ಸೃಷ್ಟಿಸುತ್ತಾರೆ. Holocaust ನಡೆದೇ ಇಲ್ಲ, ಅದು ಕಪೋಲಕಲ್ಪಿತ ಎಂದು ಹೇಳುವುದು ಇರಾನಿನ ಆಡಳಿತ ಮೊದಲಲ್ಲ. ಅಮೇರಿಕಾದಲ್ಲಿ 'The myth of holocaust' ಎಂದು ಪ್ರಚಾರ ಮಾಡುವ Christian lobby ಇದೆ. ಜಿಂಬಾಬ್ವೆ ದೇಶದ ಅಧ್ಯಕ್ಷ ರಾಬರ್ಟ್ ಮುಗಾಬೆಯನ್ನು ಇಡೀ ಐರೋಪ್ಯ ಮತ್ತು ಅಮೇರಿಕಾದ ಮಾಧ್ಯಮ ಪ್ರಜಾಪ್ರಭುತ್ವದ ವಿರೋಧಿಯನ್ನಾಗಿ, ದುಷ್ಟನನ್ನಾಗಿ ಚಿತ್ರಿಸಿವೆ. ಯಾಕೆಂದರೆ ದೇಶದ ನೆಲದ 95% ಭಾಗ ಶೇಕಡಾ 2ರಷ್ಟಿರುವ ಬಿಳಿಯರ ಕೈಯಲ್ಲಿದೆ. ಇಡೀ ದೇಶದ ಕರಿಜನರು ಬೆರಳೆಣಿಕೆಯ ಬಿಳಿಜನರ ಕೂಲಿಗಳು. ಇದನ್ನು ಆತ ಪ್ರಶ್ನಿಸುತ್ತಿದ್ದಾನೆ. (ಅದರರ್ಥ ಅವನು ಬಹಳ ಸುಭಗ ಎಂದೇನಲ್ಲ. ಆದರೆ ಆತ ಹೇಳುವ ಈ ವಿಚಾರ ಸರಿ.)

ಅಮೇರಿಕಾಗಳಲ್ಲಿ ನಡೆದ ನರಮೇಧ, ಆಫ್ರಿಕಾಗಳಲ್ಲಿ ನಡೆದ ನರಮೇಧ ಮತ್ತು ಅಪಹರಣ ಮತ್ತು ಸಾಗಾಟ ಸ್ವಲ್ಪಮಟ್ಟಿಗಾದರೂ ಹೊರಗಿನ ಪ್ರಪಂಚಕ್ಕೆ ತಿಳಿದಿರಬಹುದು. ಆದರೆ ಆಸ್ಟ್ರೇಲಿಯಾದಲ್ಲಿ ನಡೆದದ್ದು ಇನ್ನೂ ಘೋರ. ಮೂಲನಿವಾಸಿಗಳು ಸಂಪೂರ್ಣ ಹತರಾಗಿ ಬೆರಳೆಣಿಕೆಯಲ್ಲಿ ಉಳಿದಿದ್ದಾರೆ. ಯಾವ ದಾಖಲಾತಿಯೂ ಇಲ್ಲ. ಅವರು ಬದುಕು, ಸಂಸ್ಕೃತಿ, ಮತಾಚರಣೆಗಳು ಹೇಗಿದ್ದವು ಎಂಬುದಕ್ಕೆ ಯಾವ ಕುರುಹೂ ಉಳಿಯದಂತೆ ನಾಶಮಾಡಲಾಯಿತು. ಮಿಲಿಯಾಂತರ ಮಕ್ಕಳನ್ನು ವ್ಯಾಟಿಕನ್ ಅಪಹರಿಸಿ ಕೊಂದು ಕಳೆಯಿತು ಎಂದರೆ ಪೈಶಾಚಿಕತೆಯ ಪರಿ ನಿಮಗೆ ಅರ್ಥವಾಗಬಹುದು. ಬಿಳಿಜನರು (ಅವರಲ್ಲಿ ಹೆಚ್ಚಿನವರು ಯುರೋಪಿಗೆ ಮತ್ತು ಯುರೋಪಿಯನ್ ಚರ್ಚ್‌ಗೆ ಬೇಡವಾದ

ಅಪರಾಧಿಗಳು) ಹೋಗುವ ಮೊದಲು ಇಡೀ ಆಸ್ಟ್ರೇಲಿಯಾ ಸಹಜ ಪ್ರಾಕೃತಿಕ ಆವಾಸದ ನೆಲವಾಗಿತ್ತು. ಕೇವಲ 150 ವರ್ಷಗಳಲ್ಲಿ ಎಲ್ಲವೂ ಧ್ವಂಸವಾಯಿತು.

ದಕ್ಷಿಣ ಆಮೇರಿಕಾದಲ್ಲಿ ಚರ್ಚ್ ಮತ್ತು ಸ್ಪಾನಿಶ್ ಮತ್ತು ಪೋರ್ಚುಗೀಸ್ ಲೂಟಿಕೋರರು ನಡೆಸಿದ ನರಮೇಧವನ್ನು ದಾಖಲಿಸಿದ Eduardo Hughes Galeano ಅವರ ಸಂಶೋಧನಾ ಕೃತಿಗಳ ಬಗ್ಗೆ ತಮಗೆ ತಿಳಿದಿರಬಹುದು. Memories of Fire ಶ್ರೇಣಿಯ ಮೂರು ಪುಸ್ತಕಗಳು. ಕ್ರಿಶ್ಚಿಯನ್ ಪ್ರಪಂಚದಲ್ಲಿ ಈ ಪುಸ್ತಕಗಳಿಗೆ ಭಾರೀ ವಿರೋಧವಿದೆ. ಆದರೆ ಸಂಶೋಧನಾ ವಲಯದಲ್ಲಿ, ಅಕಡೆಮಿಕ್ ವಲಯದಲ್ಲಿ ಸಂತ್ರಸ್ತ ವಲಯದಲ್ಲಿ ಆ ಕೃತಿಗಳಿಗೆ ಗೌರವವಿದೆ. ದಕ್ಷಿಣ ಅಮೇರಿಕಾದಲ್ಲಿ ಯುರೋಪಿನ ಸ್ಪೈನ್–ಪೋರ್ಚುಗೀಸ್ ಕ್ರೈಸ್ತ ಮತಾಂಧರು ನಡೆಸಿದ ಸ್ಥಳೀಯ–ಮೂಲನಿವಾಸಿಗಳ ನರಮೇಧವನ್ನು ದಾಖಲಿಸಿದ Eduardo Galeano ಅವರ ಒಂದು ಗ್ರಂಥವನ್ನು ಶ್ರೀ ಕೆ.ಪಿ. ಸುರೇಶ ಅವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಭಾಷಾಂತರ ಮಾಡಿದ ಪರಿ ಕುತೂಹಲಕಾರಿಯಾಗಿದೆ. ಇಲ್ಲಿನ ವಿಸ್ತರಣಾವಾದಿ ಕ್ರೈಸ್ತರಿಗೆ ನೋವಾಗದಂತೆ ಸಾಕಷ್ಟು ಭಟ್ಟಿ ಇಳಿಸಿ, ಖಾರ ಕಡಿಮೆಮಾಡಿ ಭಾಷಾಂತರಿಸಿದ್ದಾರೆ. ಮುನ್ನುಡಿ ಡಾ. ಯು. ಆರ್. ಅನಂತಮೂರ್ತಿಯವರದು! ಭಾಷಾಂತರಿಸಿದವರು ಮತ್ತು ಮುನ್ನುಡಿ ಬರೆದವರು ಇಬ್ಬರೂ ಭಾರತದಲ್ಲಿ ಆ ವಿಸ್ತರಣಾವಾದಿಗಳ ಪರವಾಗಿ ಮಾತನಾಡುವವರು ಮತ್ತು ಅವರನ್ನು ವಿರೋಧಿಸುವವರನ್ನು ಕೋಮುವಾದಿಗಳೆಂದು ಜರೆಯುವವರು! ಹಾಗಾದರೆ ಅಂತಹ ಪುಸ್ತಕವನ್ನು ಭಾಷಾಂತರಿಸಿದ್ದು ಯಾಕೆ?! ಯಾಕೆಂದರೆ ಇದು ಅಲ್ಲಿಯೂ ಸಲ್ಲುವ ಇಲ್ಲಿಯೂ ಸಲ್ಲುವ ಗುರುಶಿಷ್ಯರ ಹುನ್ನಾರ! ಆಧುನಿಕ ಯುರೋಪ್ ಮತ್ತು ಅಮೇರಿಕಾಗಳ ವಿದ್ವದ್ವಲಯವು ಚರ್ಚ್ ನಡೆಸಿದ ಹತ್ಯಾಕಾಂಡ ಮತ್ತು ವಿಸ್ತರಣೆಯನ್ನು ವಿರೋಧಿಸುತ್ತಿದೆ, ಪ್ರಶ್ನಿಸುತ್ತಿದೆ, ದಾಖಲಿಸುತ್ತಿದೆ. ಭಾರತದ ವಿದ್ವದ್ವಲಯವು ಈ ಎಲ್ಲ ಕುಕೃತ್ಯಗಳಲ್ಲಿ ಚರ್ಚ್‌ನೊಂದಿಗೆ ಶಾಮೀಲಾಗಿದೆ! ಅಂದರೆ ಈ ಇಬ್ಬರು ಗುರುಶಿಷ್ಯರು–ತಮ್ಮ ಅಸಂಖ್ಯಾತ ಮಿತ್ರರೊಂದಿಗೆ–ಏಕಕಾಲಕ್ಕೆ ವಿಶ್ವಮಟ್ಟದಲ್ಲಿ ಸತ್ಯವಂತರೂ, ಸಾಮ್ರಾಜ್ಯಶಾಹೀ ವಿಸ್ತರಣಾವಾದದ ವಿರೋಧಿಗಳೂ ಮತ್ತು ಭಾರತದಲ್ಲಿ ಶಾಂತಿದೂತರೂ, ಕೋಮುವಾದದ ವಿರೋಧಿಗಳೂ, ಕೋಮುಸಾಮರಸ್ಯದ ಹರಿಕಾರರೂ ಆಗಿ ಚರಿತ್ರೆಯಲ್ಲಿ ನಮೂದಾಗುತ್ತಾರೆ! (ಎರಡೂ ಕಡೆಗಳಲ್ಲಿ ಅವಕ್ಕಾದ ಅನುದಾನಗಳೂ, ಪೀಠಗಳೂ, ಪ್ರಶಸ್ತಿಗಳೂ ಸಿಗುತ್ತವೆ.)

ಇಡೀ ಪೂರ್ವಾಂಚಲವು ವ್ಯಾಟಿಕನ್‌ನ ಬಾಕಿಮಾರು ಗದ್ದೆಯಾದದ್ದಕ್ಕೆ ಇವರ ಆಕ್ಷೇಪವಿಲ್ಲ. ಮತಾಂತರವಾದ ಕೂಡಲೇ ಅದು ಹೇಗೆ ಪರಿಸರದ ಕುರಿತಾದ ನಮ್ಮ ಧೋರಣೆ ಬದಲಾಗುತ್ತದೆ; ಇಡೀ ಪೂರ್ವಾಂಚಲ ಕ್ರೈಸ್ತ–ವಹಾಬಿಯಾಗಿ ಬದಲಾದ ಕೂಡಲೇ ಕಾಡು ನಾಶವಾಗಿ, ವನ್ಯಜೀವಿಗಳೆಲ್ಲ ಅವರ ಆಹಾರವಾಗಿ ಬಿಟ್ಟವು ಎಂದು ಜೀವವಿಜ್ಞಾನಿಗಳು ಸಾಬೀತುಪಡಿಸಿದಾಗ ಇವರು ಕಣ್ಮುಚ್ಚಿ Secularism ಮತ್ತು minority rights ಜಪಮಾಡತೊಡಗಿದರು. ಅದೇ ಪೋಪರು 'Go, evangelise Asia' ಎಂದಾಗ ಇವರ್ಯಾರೂ ಮಾತನಾಡಲೇ ಇಲ್ಲ. ಅವರು ವಿಶ್ವದ ಬೇರೆಡೆ ಮಾಡಿದ್ದನ್ನು ಇಲ್ಲಿಯೂ ಮಾಡಿದಾಗ ದನಿಯೆತ್ತಿದ ಕಾರಂತರು ಇವರ ಪಾಲಿಗೆ ಕೋಮುವಾದಿಯಾದರು. ಗೋವಾದಲ್ಲಿ ನಡೆದ ನರಮೇಧವನ್ನು, ಕೊಂಕಣಿಗರ ವಲಸೆಯನ್ನು ಮನ ಕಲಕುವಂತೆ ಚಿತ್ರಿಸಿದ (ಆದರೂ, ಇಂದಿನ ಚರ್ಚ್ ಹಾಗೂ ಕ್ರಿಶ್ಚಿಯನ್ನರ ಕಣ್ಣು ಕೆಂಪಾಗದಂತೆ ಘೋರಕ್ರೌರ್ಯವನ್ನು ಬಹುಪಾಲು ಮರೆಮಾಚಿದರೂ), ಒಂದು ಸಾಹಿತ್ಯ ಕೃತಿಯಾಗಿಯೂ ಶ್ರೇಷ್ಠವಾದ ಸ್ವಪ್ನ ಸಾರಸ್ವತವನ್ನು ಇದೇ ಗುಂಪಿನವರು ಹೀನಾಮಾನ ತೆಗಳಿದರು. ಕೇಂದ್ರ

ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿದಾಗಲೂ ವಿರೋಧಿಸಿದರು. ಇವರ ನಿಲುವು ಎಷ್ಟು ಪ್ರಾಮಾಣಿಕವಾದದ್ದು ಎಂಬುದು ತಿಳಿಯುತ್ತದಲ್ಲ? ನಮ್ಮ ಕಾಡುಗಳಲ್ಲಿರುವ ಕಾಡುಕೋಣ, ಕಡವೆ, ಜಿಂಕೆ, ಹಂದಿ ಮುಂತಾದ ಪ್ರಾಣಿಗಳನ್ನು ಕೊಂದು ಮಾಂಸವನ್ನು ಸಂಸ್ಕರಿಸಿ ವಿದೇಶಕ್ಕೆ ಕಳುಹಿಸುವ ದಂಧೆಯನ್ನು ನಮ್ಮ ಪರಿಸರವಾದಿಗಳು ಖಂಡಿಸುವುದಿಲ್ಲ. ಕರ್ನಾಟಕದ ಒಂದೂವರೆ ಸೆಂಟ್ಸ್ ಜಾಗದಲ್ಲಿ ನಿಂತು 'ಬಹುಭಾಷೆ, ಬಹುಸಂಸ್ಕೃತಿ' ಎಂದು ಎಂದು ಭಜನೆಮಾಡುತ್ತಾ ಸಂಪಾದನೆ ಮಾಡುವ ನಮ್ಮ ವಿಮರ್ಶಕರು ಪೂರ್ವಾಂಚಲದಲ್ಲಿ ಪರಿಸರನಾಶಕ್ಕೆ ಬಹುಸಂಸ್ಕೃತಿಯ ನಾಶವೇ ಕಾರಣ ಎಂಬುದನ್ನು ಗುರುತಿಸುವುದಿಲ್ಲ. ಕನ್ನಡ ಯಾಕೆ ಉಳಿಯಬೇಕೆಂದರೆ ಕನ್ನಡ ವಿಮರ್ಶಕರಿಗೆ, ಅಧ್ಯಾಪಕರಿಗೆ ಸಂಬಳ ಬರಬೇಕು ಎಂಬ ಕಾರಣಕ್ಕೆ ಅಷ್ಟೆ. ಇದು ತನಕ ಕನ್ನಡದ ಯಾವೊಬ್ಬ ವಿಮರ್ಶಕನೂ ಪೂರ್ವಾಂಚಲದಲ್ಲಿ 100ಕ್ಕೂ ಅಧಿಕ ಭಾಷೆಗಳು, 5000ಕ್ಕೂ ಅಧಿಕ ದೇವರು ನಾಶವಾಗಿದ್ದರ ಬಗ್ಗೆ ಒಂದಕ್ಷರವನ್ನೂ ಮಾತನಾಡಿಲ್ಲ, ಬರೆದಿಲ್ಲ. D.H. Lawrence ನ pornographic ಕಾದಂಬರಿಗಳನ್ನು ಓದಿ ಕಚಗುಳಿ ಇರಿಸಿಕೊಳ್ಳುವುದರಲ್ಲಿಯೇ ಕೃತಾರ್ಥರಾಗುವ ನಮ್ಮ ವಿಮರ್ಶಕರು ಇಡೀ ದಕ್ಷಿಣ ಅಮೇರಿಕಾ, ಮೆಕ್ಸಿಕೋಗಳು ಪರಿಸರ ವಿನಾಶದ ವಿಚಾರದಲ್ಲಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಸರ್ವನಾಶವಾದ ಕತೆಯನ್ನು ಹೇಳುವ ಆತನ The Plumed Serpent ಕಾದಂಬರಿಯ ಬಗ್ಗೆ ಬರೆದ ಓರ್ವ ವಿಮರ್ಶಕರನ್ನೂ ನಾಕಾಣೆ.

The Plumed Serpent ಕಾದಂಬರಿಯಲ್ಲಿ ಓರ್ವ ಪಾದ್ರಿ ಹೇಳುತ್ತಾನೆ, "The old gods, why, what are they? Nothing but dead illusions. And ugly, repulsive illusions! This is such a nonsense… After all, he is an educated man! How could he believe in such nonsense?"

" It isn't for you to save Mexico, Ramon, Christ has already saved it"

ಭಾರತದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ದೇಶೀಯರ ಸಂಖ್ಯೆ ಸರಿಸುಮಾರು ಮೂರು ಕೋಟಿ. ಸಾವಿರಾರು ಲಕ್ಷಾಂತರ ಎಕರೆ ಭೂಮಿಯನ್ನು ಅಕ್ರಮವಾಗಿ ಅತಿಕ್ರಮಿಸಿ ಕೊಂಡಿದ್ದಾರೆ. ಅವರಿಗೆ ಆ ನೆಲದ ಪಟ್ಟಾ ಕೊಡುವ, ಅವರಿಗೆ ಅಕ್ರಮವಾಗಿ ಮತದಾರ ಚೀಟಿ, ಆಧಾರ್ card ಕೊಡುವ, ಪಡಿತರ ಚೀಟಿ ಕೊಡುವ ರಾಜಕೀಯ ಪಕ್ಷಗಳಿವೆ. ಖ್ಯಾತ ಎಡಪಂಥೀಯ ಚಿಂತಕ ಜಿ. ರಾಜಶೇಖರ್ ಅವರು 'ಹೀಗೆ ಬರುವ ಬಾಂಗ್ಲಾ ದೇಶೀಯರನ್ನು ಅಕ್ರಮ ವಲಸಿಗರು ಎನ್ನುವುದು ತಪ್ಪು. ಏನೋ ಹೊಟ್ಟೆಪಾಡಿಗೆ ಬರುತ್ತಾರೆ. ಅವರನ್ನು ಹಿಂದೆ ಕಳುಹಿಸಿ ಎನ್ನುವುದು ತಪ್ಪು' ಎನ್ನುತ್ತಾರೆ. ಪರಿಸರದ ಕುರಿತಾಗಿ ಅಂಕಣ ಬರೆಯುವ ನರೇಂದ್ರ ರೈ ದೇರ್ಲ ಅವರು ಕೂಡಾ ಕೇರಳದ ವಲಸಿಗರ ಕುರಿತಂತೆ 'ಏನಾಯಿತೀಗ? ಕಷ್ಟಪಟ್ಟು ದುಡಿಯುತ್ತಾರೆ. ನಮ್ಮವರಂತೆ ಸೋಮಾರಿಗಳಲ್ಲ; ಕೈ ಕೆಸರು ಮಾಡಿಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ' ಎನ್ನುತ್ತಾರೆ. ಆಶ್ಚರ್ಯವೆಂದರೆ ರೈಯವರು ಹೀಗೆ ಹೇಳುವುದಕ್ಕಿಂತ 45 ವರ್ಷಗಳ ಮೊದಲೇ ಕಾರಂತರು ಇದಕ್ಕೆ ಅದೇ ಊರು ಅದೇ ಮರ ಕಾದಂಬರಿಯಲ್ಲಿ ಅದಕ್ಕೆ ಉತ್ತರ ಕೊಟ್ಟಿದ್ದರು. ಕಿಗ್ಗಳ್ಳಿಯಲ್ಲಿ ಬೆಂಕಿಕಡ್ಡಿ ಮಾಡಲು ಅನುಕೂಲವಾಗುವ ಮರ ಇದೆಯೇ ಎಂದು ನೋಡಲು ಹೋದ ಲಕ್ಷ್ಮಣರಾಯರು ರೈಯವರ ಮಾತನ್ನೇ ಹೇಳಿದಾಗ ಅವರ ಬಂಧು ಹೇಳುತ್ತಾನೆ,

"ಲಕ್ಷ್ಮಣ ಏನು ಹೇಳುತ್ತಿ ನೀನು? ಆಚೀಚಿನ ಕಾಡು ಕಡಿದು, ಮರಗಳನ್ನು ಮಾರಿ, ಆ ದುಡ್ಡಿನಿಂದ ಸಾಗುವಳಿ ಮಾಡುವುದಾದರೆ ನಮಗೆ ಅಷ್ಟು ಮಾಡಲಿಕ್ಕೆ ಬರುವುದಿಲ್ಲವೇ?

ಹಾಗಿದ್ದರೆ ನಾವು ಇಷ್ಟು ದರಿದ್ರಾವಸ್ಥೆಯಲ್ಲಿರುತ್ತಿದ್ದೆವೇ? ಅವರಂತೆ ಮರಗೆಣಸು ಬೆಳಸಲಿಕ್ಕಿಲ್ಲ, ಮಜ್ಜಿಗೆ ಹುಲ್ಲು ಬೆಳೆಸಲಿಕ್ಕಿಲ್ಲ, ನಿಜ. ಆ ಕೃಷಿ ನಮಗೆ ಹೊಸತು. ಅವರಿಗೆ ಗೊತ್ತಿದ್ದದ್ದು ಅಷ್ಟೇ ಹೊರತು..." ಎಂದು ಮಾತು ನಿಲ್ಲಿಸುತ್ತಾನೆ. ವಟಪುರಕ್ಕೆ ವಾಪಸು ಬಂದ ಲಕ್ಷ್ಮಣರಾಯರು ಗಾಂಧಿಗೋಪಾಲಯ್ಯ ಮತ್ತು ನಾಗಣ್ಣನವರಲ್ಲಿ ಮಾತನಾಡುತ್ತಾ ಹೇಳುತ್ತಾರೆ "ನಮ್ಮ ತಾಲೂಕಿನಲ್ಲಿ, ನೆರೆಯ ತಾಲೂಕಿನಲ್ಲಿ; ನಮ್ಮ ಮೂಡಣ ಹಳ್ಳಿಯಿಂದ ಹೊರಟು ಸುಬ್ರಹ್ಮಣ್ಯದ ತನಕವೂ ಹೀಗಾಗಿದೆಯಂತೆ. ಹೊರಗಿಂದ ಬಂದ ಜನರು ಕಷ್ಟಪಟ್ಟು ದುಡಿದಿದ್ದಾರೆ ನಿಜ. ಅದು ಪ್ರತಿಕ್ಷಣಕ್ಕೂ ಕಾಣಿಸುತ್ತದೆ. ಈ ವಟಪುರ ಹೋಬಳಿಯವರೂ ಕೂಡಾ ಹಾಗೆ ದುಡಿಯಲಾರರೇ? ಬರಿಯ ದುಡಿಮೆ ಸಾಲದು, ನೋಡಿ, ದುಡಿಮೆಯ ಜತೆಗೆ ಬಂಡವಾಳ ಬೇಕು. ಬೇಕಾದ ಬಂಡವಾಳವನ್ನು ಸಾರ್ವಜನಿಕ ಖಜಾನೆಯಿಂದ ದೋಚಿಕೋ ಎನ್ನುವ ಉದಾರಿಗಳಿದ್ದರೆ ಇಲ್ಲಿಯೂ ಹಾಗಾಗಬಹುದು".

ಮೊದಲೇ ತಮ್ಮ ನೆಲವನ್ನು ಕಳೆದುಕೊಂಡ, ಮರ್ಯಾದೆಯನ್ನು ಕಳೆದುಕೊಂಡ ತುಳುವರನ್ನು ಗೇಲಿಮಾಡುವ, ಈ ಅಕ್ರಮ ವಲಸೆಯನ್ನು ಸಮರ್ಥಿಸುವ ಒಂದು ಮಲಯಾಳಂ ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರಕಿತ್ತು. ಆ ಪ್ರಶಸ್ತಿಯ ಹಿಂದೆ ಯಾವೆಲ್ಲ ಲಾಬಿಗಳು ಕೆಲಸಮಾಡಿರಬಹುದು? ಆಶ್ಚರ್ಯವೆಂದರೆ ಕೇರಳೀಯ ಚರ್ಚ್‌ಗಳು ಇಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸುತ್ತಿರುವುದನ್ನು ಕಾರಂತರು ಗಮನಿಸುತ್ತಿರುವ ಹೊತ್ತಿಗೆ ನೆಲ್ಯಾಡಿಯಲ್ಲಿ ಓರ್ವ ವ್ಯಕ್ತಿ ಅದಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದರು. ಅವರು ನೆಲ್ಯಾಡಿ ಶೇಖರ ಗೌಡರು. ನಮ್ಮ ಸರಕಾರ, ಪೊಲೀಸ್ ಇಲಾಖೆ ನೆಲ್ಯಾಡಿ ಶೇಖರ ಗೌಡರಿಗೇ ಶಿಕ್ಷೆ ವಿಧಿಸಿತು ಎಂದರೆ ಇವರೆಲ್ಲ ಯಾರ ಪರವಾಗಿದ್ದಾರೆ ಎಂದು ತಿಳಿಯುತ್ತದಲ್ಲ? ರಾಷ್ಟ್ರಪ್ರಶಸ್ತಿ ಸಿಕ್ಕಿದ ಆ ಸಿನೆಮಾದಲ್ಲಿ ನೆಲ್ಯಾಡಿ ಶೇಖರ ಗೌಡರೇ ವಿಲನ್. ನಮ್ಮ ತುಳುಜನರೇ ಕೂಲಿಗಳಂತೆ ಸಿನೆಮಾದ ಸಲಕರಣೆ ಹೊತ್ತು, ನಟಿಸಿ, ಪುಣ್ಯಸಂಪಾದನೆ ಮಾಡಿದರು.

ಹಾಗೆಯೇ, ಇನ್ನೊಂದು ವ್ಯಂಗ್ಯವಿದೆ. ಕೇರಳದ ಈ ಹಲವು ಚರ್ಚ್‌ಗಳಿಗೆ ಭೂಮಿ ಕೊಟ್ಟು ಪಕ್ಷನಿಧಿಗೆ ದೇಣಿಗೆ ಪಡೆಯುವ ರಾಜಕೀಯ ಪಕ್ಷಗಳಿಗೆ ಅವರು ಓಟು ಕೊಡುವುದಿಲ್ಲ. ಓಟು ಪಡೆಯಲು ಕೇರಳದಲ್ಲಿ ಒಂದೊಂದು ಕ್ರಿಶ್ಚಿಯನ್ ಸಂಘಟನೆಗೆ ಒಂದೊಂದು ಕಾಂಗ್ರೆಸ್ ಪಕ್ಷವಿದೆ! ದಕ್ಷಿಣ ಕನ್ನಡದ ಕೆಲೆವೆಡೆ Demographic imbalance ಯಾವ ಅಪಾಯಕಾರೀ ಹಂತವನ್ನು ತಲುಪಿದೆ ಎಂದರೆ ಅಲ್ಲಿ ನಮ್ಮ ಪ್ರತಿನಿಧಿಯಾಗುವವರು ಕೇರಳದವರು. ನಮ್ಮ ಮಕ್ಕಳು ಶುಲ್ಕ ತೆತ್ತು ಅವರ ಕಾಲೇಜಿಗೆ ವಿದ್ಯಾರ್ಥಿಗಳಾಗಿ ಹೋಗಬೇಕು. ಕೊಡಗಿನಲ್ಲಿ ಸಾವಿರಾರು ಎಕರೆ ಅರಣ್ಯಭೂಮಿಯನ್ನು ಅತಿಕ್ರಮಣ ಮಾಡಿದ ಕೇರಳದ ಓರ್ವ ಕಳ್ಳಬಟ್ಟಿ ದೊರೆ ಕರ್ನಾಟಕ ರಾಜ್ಯದ ಮಂತ್ರಿಯಾಗಿದ್ದ ಎಂಬುದು ನಿಮಗೆ ತಿಳಿದಿರಬಹುದು.

ಯುರೋಪ್ ಮತ್ತು ಅಮೇರಿಕಾಗಳಲ್ಲಿ ಇವುಗಳ ಬಗ್ಗೆ ನೂರಾರು ಸಂಶೋಧನಾ ಕೃತಿಗಳು ಬಂದಿವೆ. D.H.Lawrence ನ Plumed Serpent ನಂತಹ ನೂರಾರು ಕಾದಂಬರಿಗಳು ಬಂದಿವೆ. ನಮ್ಮಲ್ಲಿ ಏನೂ ಇಲ್ಲ ಎಂದರೆ ಏನೂ ಇಲ್ಲ. ಆ ದನಿಯನ್ನು, ಧೈರ್ಯವನ್ನು, ಪ್ರಾಮಾಣಿಕತೆಯನ್ನು, ಸತ್ಯನಿಷ್ಠೆಯನ್ನು ಕಳೆದುಕೊಂಡಿದ್ದೇವೆ. ನಮ್ಮ ಪರಿಸರವಾದಿಗಳೂ ಕೂಡಾ 'ಪರಿಸರ ಉಳಿಸಿ, ಪರಿಸರ ಉಳಿಸಿ', 'ಮರಕಡಿಯಬೇಡಿ, ಮರಕಡಿಯಬೇಡಿ' 'ನೀರಿಂಗಿಸಿ, ನೀರಿಂಗಿಸಿ' ಎಂದು ಸುಬ್ರಹ್ಮಣ್ಯಮಠದಲ್ಲಿ ರುದ್ರಪಾರಾಯಣ, ಲಲಿತಾಸಹಸ್ರನಾಮ ಮಾಡಿದ ಹಾಗೆ ಉರುಹೊಡೆದು ದಕ್ಷಿಣೆ ತೆಗೆದುಕೊಳ್ಳುವುದು ಅಷ್ಟೆ. ಅದು ಬರೇ ಹೊಟ್ಟೆಪಾಡಿನ hypocrisy. ಜನಸಂಖ್ಯಾ ಸ್ಫೋಟದ ಬಗ್ಗೆ, ವಲಸೆಯ ಬಗ್ಗೆ

ಮಾತನಾಡಿದರೆ 'ಸೆಕ್ಯೂಲರ್' ಪಟ್ಟ ತಪ್ಪಿ ಹೋಗುತ್ತದೆ; ಪ್ರಶಸ್ತಿ ಸಿಗುವುದಿಲ್ಲ, ಅನುದಾನ ಸಿಗುವುದಿಲ್ಲ, ಕೇರಳಕ್ಕೆ ಕಾಲಿಡುವಂತಿಲ್ಲ!

ವಲಸೆಯ ಹಿಂದಿರುವ, ಜನಸಂಖ್ಯಾ ಸ್ಫೋಟದ ಹಿಂದಿರುವ ಕ್ಯಾಥೊಲಿಕ್ ಮತ್ತು ವಹಾಬಿ ರಾಜಕಾರಣದ ಬಗ್ಗೆ ಬಲು ಹಿಂದೆಯೇ ಬ್ರಿಟಿಷ್ ಸಂಸತ್ ಸದಸ್ಯ, ಒಲಿಂಪಿಕ್ ಆಟಗಾರ, ಚಿತ್ರಕಾರ ಸರ್ ಪೀಟರ್ ಸ್ಕಾಟ್ ಹೇಳಿದ್ದುಂಟು.*3 ಇಂತಹ ವಿರಾಟ್ ರೂಪದ ವಲಸೆ ಮತ್ತು ಜನಸಂಖ್ಯಾಸ್ಫೋಟ ಸಮಸ್ಯೆ ಇನ್ನೂ ಗಂಭೀರ ಸ್ವರೂಪ ಪಡೆದದ್ದು Industrial Revolution ನಡೆದ ಬಳಿಕ. Industrial Revolution ಜಗತ್ತಿನ ವಾಣಿಜ್ಯ, ಅರ್ಥ, ರಾಜಕೀಯ ಎಲ್ಲದರ ಸ್ವರೂಪವನ್ನೂ ಬದಲಾಯಿಸಿತು. ಹೊಸಹೊಸ ಉದ್ಯಮಗಳು, ಯೋಜನೆಗಳು ವಲಸಿಗರನ್ನೂ, ನಿರಾಶ್ರಿತರನ್ನೂ, ಅನುಗಾಲ ತಿರುಗಾಟದವರನ್ನು(Floating Population) ಮಿಲಿಯಾಂತರ ಸಂಖ್ಯೆಯಲ್ಲಿ ಹುಟ್ಟುಹಾಕಿದವು. ಪ್ರತಿಯೊಂದು ಉದ್ಯಮ ಆಧುನಿಕ ಆವಿಷ್ಕಾರಗಳಿಂದ ಹೊಸ ರೂಪತಳೆದು ಜನಸಂಖ್ಯಾಸ್ಫೋಟಕ್ಕೆ ತಳುಕು ಹಾಕಿಕೊಂಡು ನೈಸರ್ಗಿಕ ಸಂಪನ್ಮೂಲಗಳ ಮಾರಣಹೋಮಕ್ಕೆ ಹೇತುವಾದವು. ಯಾವುದನ್ನೇ ತೆಗೆದುಕೊಳ್ಳಿ, ಮನೆ ನಿರ್ಮಾಣ, ಆಹಾರ, ನೀರು, ಸಾರಿಗೆ... ಎಲ್ಲವೂ ಸಂಪನ್ಮೂಲಗಳ ನಾಶಕ್ಕೆ ಕಾರಣವಾಗತೊಡಗಿದವು.

ನೆಲದ ನಂಟು ಬಿಡಲಾರದ್ದಕ್ಕೆ ಹೋಗಿ ಬದುಕುವಲ್ಲಿ ಒಂದು ಮನೆ, ಹುಟ್ಟಿದೂರಲ್ಲಿ ಒಂದು ಮನೆ. ನಮ್ಮ ಅರ್ಥವ್ಯವಸ್ಥೆ Abrahamic religion ಮಾದರಿಗೆ ಮಾರುಹೋಗಿ ಕೆಟ್ಟಿತು. ಅವರಿಗೆ ಮತೀಯ, religious edicts, scriptures, doctrines, commandments, code ಮುಖ್ಯ. ನಮ್ಮದು ನೆಲಮೂಲದ ಸಂಸ್ಕೃತಿ. ಆದುದರಿಂದ ವಲಸೆಗೆ ಸಿಲುಕಿ ನಾವು ಭೌತಿಕವಾಗಿ, ಸಾಂಸ್ಕೃತಿಕವಾಗಿ, ಮತೀಯವಾಗಿ, ಭಾಷಿಕರಾಗಿ ಅನಾಥರಾಗುತ್ತಿದ್ದೇವೆ. ಮರಳಿಮಣ್ಣಿಗೆ, ಅದೇ ಊರು ಅದೇ ಮರ, ಇದ್ದರೂ ಚಿಂತೆ ಮೊದಲಾದ ಕಾದಂಬರಿಗಳಲ್ಲಿ ಕಾರಂತರು ವಲಸೆಯಿಂದ ಉಂಟಾಗುವ ಇಂತಹ ಸಮಸ್ಯೆಗಳನ್ನು ಚರ್ಚಿಸುತ್ತಾರೆ. ಸಮೂಹಗಳ ವಲಸೆಯಿಂದಾಗುವ ಸಮಸ್ಯೆಗಳು ಒಂದು ತೆರನಾದರೆ, ಒಬ್ಬ ವ್ಯಕ್ತಿ ಅಥವಾ ಒಂದು ಸಂಸಾರ ವಲಸೆ ಹೋಗುವ ಆಧುನಿಕ ಕಾಲದಲ್ಲಿ ಅವುಗಳ ಸ್ವರೂಪವೇ ಬೇರೆ. ಕಿರಿಯ ರಾಮ ಐತಾಳನೇನೋ ಮರಳಿ ಬಂದ. ಎಲ್ಲರಿಗೂ ಆ ಸೌಭಾಗ್ಯ ಎಲ್ಲಿಂದ ಬರಬೇಕು? ಇಸ್ರೇಲ್‌ನ ನಿರಾಶ್ರಿತೆ ನೋವಾ ಹಿಂತಿರುಗಿ ತನ್ನ ನೆಲಕ್ಕೆ ಹೋಗಲಾರಳು. "ನಿಜ, ಅದಲ್ಲವಾದರೆ ನಾವೇಕೆ ಮುಂಬಯಿಗೆ ಬರಬೇಕಾಗಿತ್ತು... ಇಲ್ಲಿದ್ದು ನಿತ್ಯ ಆ ಬೆಟ್ಟ, ಬಯಲುಗಳನ್ನು ಕನವರಿಸುತ್ತಿದ್ದೇನೆ ನಾನು? ಯಾವ ನಾಡೂ ಒಬ್ಬನ ಹುಟ್ಟಿದ ಊರಿನ ಸೊಗಸನ್ನು ತಾಳಲಾರದು." (ಮರಳಿಮಣ್ಣಿಗೆ; ಪುಟ 394) ತಾಯಿ ನಾಗವೇಣಿ ಮಗನಲ್ಲಿ ಕೇಳುತ್ತಾಳೆ "ನಮ್ಮ ಕಡಲೇ ಅಲ್ಲಿಗಿಂತ ಚಂದ ಅನ್ನುತ್ತೀಯಾ ಮಗು?" ರಾಮ ಹೇಳುತ್ತಾನೆ "ನಮ್ಮನಮ್ಮದು ಯಾವಾಗಲೂ ಚೆಂದವೇ" (ಮರಳಿಮಣ್ಣಿಗೆ; ಪುಟ 320)

ಜನಸಂಖ್ಯಾಸ್ಫೋಟವನ್ನು ಪರಿಸರ ದೃಷ್ಟಿಕೋನದಿಂದ ನೋಡದೆ ವಾಣಿಜ್ಯದ ಸಂಕುಚಿತ ದೃಷ್ಟಿಯಿಂದ, Human Resource ಎಂದು ಸುಳ್ಳುಸುಳ್ಳೇ ನಂಬಿ ನಡೆದ ವಂಚನೆಯ ಹಾದಿ ಬಹುದೂರ ನಮ್ಮನ್ನು ನಡೆಸಲಾರದು ಎಂಬುದು ಈಗ ಅರಿವಾಗುತ್ತಿದೆ. ಕಾರಂತರು ಅದೇ ಊರು ಅದೇ ಮರ ಕಾದಂಬರಿಯಲ್ಲಿ ಹೇಳಿದಾಗ ನಾವು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈಗಂತೂ 'ಸೆಕ್ಯುಲರ್' ರಾಜಕಾರಣಕ್ಕೆ ಹೆದರಿ, ಜನಸಾಮಾನ್ಯರು ಬಿಡಿ, ನಮ್ಮನ್ನು ಆಳುವವರೂ, ಜನಸಂಖ್ಯೆಯ ಕುರಿತು ಮಾತನಾಡುವುದಿಲ್ಲ. 'ಜನಸಂಖ್ಯೆ ಹೆಚ್ಚಲಿ,

ವಿದೇಶಕ್ಕೆ ಹೋಗಲಿ, ಮನಿಆರ್ಡರ್ ಕಳುಹಿಸಲಿ' ಎಂದು ಆರ್ಥಿಕತಜ್ಞರೆಂಬ ಕುರುಡರು ಅಂಜನಹಾಕಿದರು. ಆ ಅಂಜನ ಹತ್ತು ವರ್ಷದಾಚೆ ತೋರಲಿಲ್ಲ. ಇವತ್ತು ಅಮೇರಿಕಾ, ಗಲ್ಫ್, ಆಫ್ರಿಕಾ, ಆಸ್ಟ್ರೇಲಿಯಾಗಳಿಂದ ಭಾರತೀಯರು ವಾಪಾಸು ಬಂದರೆ ಉಂಡು, ಮಲಗಲಿಕ್ಕೆ ಇರಲಿ, ನಿಂತು ಮೂತ್ರ ಮಾಡಲೂ ಜಾಗವಿಲ್ಲ.

ಹೊಟ್ಟೆ ತುಂಬುವ ಕೃಷಿ ಹಿನ್ನೆಲೆಗೆ ಸರಿದು ಯಾವಾಗ ಚಟದ ಬಾಯಿ ತುಂಬುವ ಕೃಷಿ ಬಂತೋ ವಲಸೆಗೆ ಇನ್ನೊಂದು ಆಯಾಮ ದೊರಕಿತು. ಪರಿಸರ ನಾಶ ಮತ್ತು ಸಾಂಸ್ಕೃತಿಕ ಅಧಪತನ ಎರಡಕ್ಕೂ ಹೇತುವಾಯಿತು. ಅದೇ ಊರು ಅದೇ ಮರ ಕಾದಂಬರಿಗಳಲ್ಲಿ ಅದು ಪರಿಸರ ಸಮಸ್ಯೆಯ ರೂಪದಲ್ಲಿ ಕಾಣಿಸಿಕೊಂಡರೆ ಚೋಮನದುಡಿ ಮತ್ತು ಕುಡಿಯರ ಕೂಸು ಕಾದಂಬರಿಗಳಲ್ಲಿ ಮನುಷ್ಯನ ಆಂತರ್ಯದ ನಾಶದ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. Coffee, tea, rubber ಅಡಿಕೆ, ಮುಂತಾದ plantation ಬೆಳೆಗಳಿಂದ ಭೂಮಿ ನಾಶ ಒಂದೆಡೆಯಾದರೆ Plantation ಕೂಲಿಗಳಾಗಿ ವಲಸೆ ಬಂದವರಿಂದ, ವಲಸೆ ಹೋದವರಿಂದ, ಗುಲಾಮರಾಗಿ ಹಿಡಿದು ತಂದವರಿಂದ ಆದ ಸಮಸ್ಯೆಗಳು ಅನೇಕ. ಹಾಗೆಯೇ ಅವರಿಗಾದ ಸಮಸ್ಯೆಗಳೂ ಅಗಾಧ. ಫಿಜಿ, ಆಫ್ರಿಕಾ, ಅಮೇರಿಕಾ ಎಲ್ಲೆಡೆ ಇವೇ ಸಮಸ್ಯೆ.

ಜನರನ್ನು ದುಡಿದು ತಿನ್ನಲು ಪ್ರೇರೇಪಿಸುವ ನೈತಿಕ ಶಕ್ತಿಯಿಲ್ಲದ ಸರಕಾರಗಳು Tourism ಮತ್ತು Pilgrimage Industryಗಳನ್ನು ಹುಟ್ಟುಹಾಕಿ ಹೇಗೆ ಸುಲಿಗೆ ಮಾಡಿ ಬದುಕಬಹುದು ಎಂಬುದನ್ನು ಕಲಿಸಿಕೊಟ್ಟವು. ಇಡೀ ಜಗತ್ತಿನಲ್ಲಿ ಈಗ ಪರಿಸರ ನಾಶಕ್ಕೆ ಅತೀ ಹೆಚ್ಚು ದೇಣಿಗೆ ನೀಡುವ Industryಗಳಲ್ಲಿ ಅವೂ ಒಂದು. ಮೊನ್ನೆಮೊನ್ನೆ ಕೇದಾರನಾಥ ದುರಂತ ಸಂಭವಿಸಿತು. ಪರಿಸರ ನಾಶ, ಸಾಂಸ್ಕೃತಿಕ ಅಧಪತನ, ವ್ಯಕ್ತಿಯ ಆಂತರ್ಯ ಭ್ರಷ್ಟವಾಗುವುದು. ಇಂದು ನಮ್ಮೆಲ್ಲಾ ತೀರ್ಥಕ್ಷೇತ್ರಗಳು, ಸುಬ್ರಹ್ಮಣ್ಯವೂ ಸೇರಿದಂತೆ, ಸ್ಲಂ ಆಗಿಬಿಟ್ಟಿವೆ. ಭೌತಿಕ ಸ್ಲಂ ಕೂಡಾ ಹೌದು, ನಂಬಿಕೆಯ ಸ್ಲಂ ಕೂಡಾ ಹೌದು. ನಮಗೆ ಹಣವಾದರಾಯಿತು.

ಸನ್ಯಾಸಿಯ ಬದುಕು ಮತ್ತು ಮೂಕಜ್ಜಿಯ ಕನಸುಗಳು ಕಾದಂಬರಿಯಲ್ಲಿ ಇವು ಸೂಚ್ಯವಾಗಿ ಬಂದರೆ ಅದೇ ಊರು ಅದೇ ಮರ ಮತ್ತು ಆಳ ನಿರಾಳ ಕಾದಂಬರಿಗಳಲ್ಲಿ ವಿಸ್ತಾರವಾಗಿ ಬರುತ್ತದೆ. ಆಳ ನಿರಾಳ ಕಾದಂಬರಿಯಂತೂ ಉತ್ತರಭಾರತದ ತೀರ್ಥ ಯಾತ್ರೆಯೇ ವಸ್ತುವಾಗುಳ್ಳ ಕಾದಂಬರಿ.

ವರ್ತಮಾನದಲ್ಲಿ ಜನಾಂಗವೊಂದು ವಲಸೆಹೋಗಿ ಅನ್ಯರನ್ನು ಮೂಲೆಗುಂಪುಮಾಡುವ ಒಂದು ಭಯಾನಕ ಉದಾಹರಣೆಯೆಂದರೆ ಚೀನಾದ 'ಹಾನ್' ಜನಾಂಗದ ವಲಸೆ. ಮಂಚೂರಿಯಾ, ಟಿಬೆಟ್, ಹಿಂದೂ ಮಹಾಸಾಗರದ ದ್ವೀಪರಾಷ್ಟ್ರಗಳು ಮತ್ತು ದೇಶದೊಳಗಿನ ಬೇರೆ ಪ್ರದೇಶಗಳಿಗೆ ವಲಸೆ ಹೋಗಿ ಹಾನ್ ಜನರು ಸ್ಥಳೀಯರನ್ನು ಹೊರನೂಕುವ, ಇಲ್ಲವಾಗಿಸುವ ಕ್ರೌರ್ಯ ಭೀಕರವಾದದ್ದು. ಇದು ವರ್ತಮಾನದ ಚೀನಾದ ಕಮ್ಯೂನಿಷ್ಟ್ ಸರಕಾರದ ಅಧಿಕೃತ ಆಡಳಿತ ನೀತಿಯಾಗಿದೆ.

'ಮನುಜಕುಲ ತಾನೊಂದೆ ವಲಂ' ಎನ್ನುತ್ತಾನೆ ಪಂಪ. ಈ ಪದ್ಯದ ತಪ್ಪಾದ ಅರ್ಥವನ್ನೇ ಸರಿ*4 ಎಂದುಕೊಂಡರೂ ಮನುಷ್ಯ ಒಂದೇ ಅಲ್ಲ. 'ಉದಾರ ಚರಿತಾನಾಂ ವಸುಧೈವ ಕುಟುಂಬಕಂ' ಎನ್ನುತ್ತಾನೆ ವಿಷ್ಣು ಶರ್ಮ.*5 ನಿಸರ್ಗದ ಜಗತ್ತು ಹಾಗಿರುವುದಿಲ್ಲ. ಕಾಡಿನಲ್ಲಿ ಪ್ರಾಣಿಗಳು ಅನಗತ್ಯವಾಗಿ ಇನ್ನೊಂದು ಜೀವಿಯನ್ನು (ತನ್ನದೇ ಪ್ರಬೇಧವಾದರೂ ಕೂಡಾ) ಸಂಧಿಸುವುದಿಲ್ಲ, ಸಂಧಿಸಿದರೂ ಸಹಿಸುವುದಿಲ್ಲ. ಕಾಡಿನ ಅಸ್ತಿತ್ವದ ಒಂದು ಪ್ರಮುಖ ಲಕ್ಷಣವೆಂದರೆ ಕಾಡಿನ ಜಂತುಗಳು ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ

ಒಂದನ್ನೊಂದು ನಿವಾರಿಸಿಕೊಂಡು Avoiding each other, ಬದುಕುವುದು.

ನಾವಿಂದು ಅನಗತ್ಯವಾಗಿ ನೋಡುವ, ಭೇಟಿಯಾಗುವ, ಮಾತನಾಡುವ ಜನರಸಂಖ್ಯೆ ಜಾಸ್ತಿಯಾಗಿದೆ. ಇಡೀ ಜಗತ್ತಿನೆಲ್ಲೆಡೆ ಮನ ಮತ್ತು ಮನೆಗಳು ಅನ್ಯರಿಂದ ತುಂಬಿ, ಅನ್ಯದಿಂದ ತುಂಬಿ ಕುದಿಯುತ್ತಿದೆ. ಸ್ಫೋಟಗೊಳ್ಳಲು ಇದೀಗ ಆರಂಭಗೊಂಡಿದೆ. ಆದರೆ ಅದನ್ನು ಹೇಳುವ ನೈತಿಕ ಹಕ್ಕನ್ನು ಟ್ರಂಪ್, ಯುರೋಪ್ ಮೊದಲ್ಗೊಂಡು ಎಲ್ಲರೂ ಕಳೆದುಕೊಂಡಿದ್ದಾರೆ.

ನವೋಮಿ ವೂಲ್ಫ್-Naomi Wolf-(ಸ್ತ್ರೀವಾದಿ, ಪರಿಸರವಾದಿ) ಹೇಳುತ್ತಾರೆ "Future is ours, to lose". ಭವಿಷ್ಯವೇನು, ವರ್ತಮಾನವೇ ಕಳೆದುಹೋಗಿದೆ. ಏಕೆಂದರೆ ಸತ್ಯ ಹೇಳುವ ಕಾಲದಲ್ಲಿ ಹೇಳದಿದ್ದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಸತ್ಯಕ್ಕೂ ಒಂದು expiery date ಇರುತ್ತದೆ. ಅದನ್ನು ಕೇಳಿಸಿಕೊಳ್ಳುವ ಕಿವಿಗೂ ಒಂದು expiery date ಇರುತ್ತದೆ. ಸತ್ಯಕ್ಕೆ ಇರುವುದು ಒಂದೇ ಅವಕಾಶ. ಈಗ ಹೇಳಿದರೆ ಏನು ಪ್ರಯೋಜನ? 'ಸ್ಥಳೀಯ ಜನರನ್ನು ಕೊಲ್ಲಬೇಡಿ, ಅವರ ಹಕ್ಕನ್ನು ಗೌರವಿಸಿ' ಎಂದು ಈಗಿನ ಪೋಪ್ ಮಹಾಶಯರು ಹೇಳುತ್ತಾರೆ.*6 ಆದರೆ 1450ರಲ್ಲಿ ಪೋಪ್ ನಿಕಾಲಸ್‌ಗಿ 'ಸ್ಥಳೀಯ ಆದಿವಾಸಿ ಜನರನ್ನು ಕೊಲ್ಲಬಹುದು, ಅವರ ಧನಕನಕಗಳನ್ನು ದೋಚಬಹುದು, ನೆಲವನ್ನು ಅಪಹರಿಸಬಹುದು, ಅವರಿಗೆ ಬದುಕುವ ಹಕ್ಕಿಲ್ಲ' ಎಂಬ ಆದೇಶವನ್ನೇ ಹೊರಡಿಸಿ ಕ್ರೈಸ್ತವಲಸೆಯನ್ನು, ವಿಸ್ತರಣೆಯನ್ನು ಪ್ರೋತ್ಸಾಹಿಸಿದ್ದರು. ವಿಧೇಯರೂ, ಶಾಂತಿಪ್ರಿಯರೂ, ಸಜ್ಜನರೂ ಆದ ಮಿಶನರಿಗಳು ಅದನ್ನು ಚಾಚೂ ತಪ್ಪದೆ ಪಾಲಿಸಿ, ಮಿಲಿಯಗಟ್ಟಲೆ ಆದಿವಾಸಿಗಳನ್ನು ಕೊಂದರು, ಅಲ್ಲಿ ನೆಲೆನಿಂತರು. ಈಗಿನ ಪೋಪರ ಮಾತನ್ನು ಕೇಳಿ ಸಂತೋಷ–ಸಮಾಧಾನ ಪಡಲು ಆದಿವಾಸಿಗಳೇ ಉಳಿದಿಲ್ಲ.

ಜೀವನದ ಒಂದು ದೊಡ್ಡ ವಿಸಂಗತಿಯೆಂದರೆ ಜೀವನದರ್ಶನವನ್ನು, ಸತ್ಯ ಸಾಕ್ಷಾತ್ಕಾರವನ್ನು ಕಾಣಿಸುವುದು ಜ್ಞಾನಿಗಳೋ, ಋಷಿಗಳೋ ಅಲ್ಲ. ಹೆಚ್ಚಿನ ಬಾರಿ ಅದನ್ನು ಮೂರ್ಖರೇ ಸುಲಭದಲ್ಲಿ ಮಾಡಿಬಿಡುತ್ತಾರೆ. ಲಕ್ಷ್ಮಣರಾಯರ ಒತ್ತಾಸೆಯಿಂದ ಪ್ರಭಾಕರ ಹುಟ್ಟಿದೂರಿನಲ್ಲಿಯೇ ಬದುಕು ಕಟ್ಟಿಕೊಂಡ. ಅವನೂ ಮುಂಬಯಿಗೆ ಹೋಗಿ ಲಕ್ಷ್ಮಣರಾಯರ ಮಕ್ಕಳೊಂದಿಗೆ 'ಸುಖವಾಗಿ' ಬದುಕಬಹುದಾಗಿತ್ತು. ಬಿಡಿಬಿಡಿಯಾಗಿ ವಲಸೆ ಹೋಗಿ ಅತಂತ್ರರಾಗುವ ಸ್ಥಿತಿಯನ್ನು ಲಕ್ಷ್ಮಣರಾಯರು ಬಲ್ಲರು. ಮರಳಿಮಣ್ಣಿಗೆ, ಇದ್ದರೂ ಚಿಂತೆ, ನಷ್ಟದಿಗ್ಗಜಗಳು, ಅಳಿದ ಮೇಲೆ, ಚಿಗುರಿದ ಕನಸು ಮುಂತಾದ ಕಾದಂಬರಿಯಲ್ಲಿ ಇಂತಹ ಸಾಂಸ್ಕೃತಿಕ ಅನಾಥರನ್ನು ಕಾರಂತರು ಚಿತ್ರಿಸಿದ್ದಾರೆ. ಹುಟ್ಟಿದ ನೆಲದಲ್ಲಿಯೇ ಅನಾಥರಾದ ಕೊರಗರ ದಾರುಣ ಬದುಕು ಅರ್ಥವಾದದ್ದು, ಅವರ ಡೋಲಿನ ರವ ಅರ್ಥವಾದದ್ದು ಪ್ರಭಾಕರನಿಗೆ ಮಾತ್ರ. 'ಚೋಮನ ದುಡಿ' ಇನ್ನೊಂದೇ ರೀತಿಯಲ್ಲಿ ಈ ಕಾದಂಬರಿಯಲ್ಲಿ ಧ್ವನಿಸುತ್ತದೆ. ಲಕ್ಷ್ಮಣರಾಯರು ತಾನು ಊರಲ್ಲಿ ಕಟ್ಟಿಸಿ, ಬದುಕಿದ ಮನೆಯನ್ನೇ ಅಂತಹ ಪ್ರಭಾಕರನಿಗೆ ಕೊಟ್ಟು 'ಹೊರಟು ಹೋದರು'. ಮೂಲನಿವಾಸಿಗಳಾದ ಕೊರಗರಿಗೆ ಇಲ್ಲಿ ಮೂರು ಮೆಟ್ಟು ಜಾಗವಾದರೂ ಬೇಕೆಂಬ ಪರಿಜ್ಞಾನ ಕೇರಳದ ಚರ್ಚ್‌ಗಳನ್ನು ತಂದು ನೂರಾರು ಸಾವಿರಾರು ಎಕರೆ ಅರಣ್ಯವನ್ನು ದಾನ ಮಾಡಿ ಚುನಾವಣಾ ಹುಂಡಿಯನ್ನು ತುಂಬಿಸಿಕೊಂಡ ನಮ್ಮ ರಾಜಕಾರಣಿಗಳಿಗೆ ಬರಲಿಲ್ಲ. ಕಾರಂತರು ಅದೇ ಊರು ಅದೇ ಮರ ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದು ನಮ್ಮ ಬುದ್ಧಿಜೀವಿಗಳಿಗಾಗಲೀ, ಆಳುವವರಿಗಾಗಲೀ ಕಾಣಲಿಲ್ಲ. ಸುಖವನ್ನರಸಿ ಅಮೇರಿಕಾಕ್ಕೆ ಹೋದ ಯುವಕರು ಆತಂಕಪಡುತ್ತಿದ್ದಾರೆ. ಟ್ರಂಪ್ ಮತ್ತು ಆತನ Ku Klux Klanನ ಸಹೋದರರು ಸಾಕ್ಷಾತ್ಕರಿಸಿದ

ಸತ್ಯ, ಜೀವನದರ್ಶನ ಜಗತ್ತಿಗೆ ಎಷ್ಟು ಚೆನ್ನಾಗಿ ಅರ್ಥವಾಯಿತು ನೋಡಿ! ಯಾರೋ ಹೊರಗಿನವನು, ಇದುವರೆಗೆ ವಟಪುರದವರು ನೋಡಿರದ ಓರ್ವ ವ್ಯಕ್ತಿ ಆಲದ ಮರವನ್ನು ಕಡಿದಾಗ ವಟಪುರದ ಯಾರಿಗೂ ಆ ಕೃತ್ಯವನ್ನು, ಅವನನ್ನು ವಿರೋಧಿಸುವ ಶಕ್ತಿ ಇರಲಿಲ್ಲ. ಕೊನೆಯ ಮೂಕಸಾಕ್ಷಿಯೂ, ಅಂತಸ್ಸಾಕ್ಷಿಯೂ ನಿರ್ನಾಮವಾಯಿತು.

---

1. ನಂತರದ ಅವರ ವರ್ತನೆ ಹೇಗೂ ಇದ್ದೀತು. ಆದರೆ ಅವರು ವೃತ್ತಿಯಲ್ಲಿ ಪ್ರಾಮಾಣಿಕರಾಗಿದ್ದರು ಎಂಬುದು ಸತ್ಯ ಮತ್ತು ಅವರ ಮಾಡಿದ ಭ್ರಷ್ಟಾಚಾರದ ಆರೋಪಗಳು ಸುಳ್ಳೇನೂ ಆಗಿರಲಿಲ್ಲ. ಅದನ್ನೇ ಆ ಮೊದಲು ಮುಚ್ಚಿದ ಲಕೋಟೆಯಲ್ಲಿ ವಕೀಲ ಶಾಂತಿಭೂಷಣ್ ಅವರು ಹೇಳಿದ್ದುಂಟು.

2. ಇಸವಿ 1940ರಿಂದ 1960ರ ನಡುವೆ ಕೇರಳದಲ್ಲಿ ಚರ್ಚ್‌ಗಳು ದೊಡ್ಡಮಟ್ಟದಲ್ಲಿ ಹಿಂಸಾತ್ಮಕವಾಗಿ ಭೂಅತಿಕ್ರಮಣಕ್ಕೆ ಮುಂದಾದವು. ಸಹ್ಯಾದ್ರಿಯ ಇಳಿಜಾರಿನಲ್ಲಿ ಮತ್ತು ತಪ್ಪಲಿನಲ್ಲಿ ಸರಕಾರಿ ಅರಣ್ಯವನ್ನು, ಆದಿವಾಸಿಗಳ ನೆಲವನ್ನು ಬಲಾತ್ಕಾರವಾಗಿ ತಮ್ಮ ವಶಕ್ಕೆ ತೆಗೆದುಕೊಂಡವು. ದೊಡ್ಡ ಸಂಖ್ಯೆಯಲ್ಲಿ ದಕ್ಷಿಣ ಕರಾವಳಿಯಿಂದ ಹಲವಾರು ಲಾಂಛನಗಳಡಿಯ ಕ್ರೈಸ್ತರು ಹೆದ್ದರೆಗಳಂತೆ ಸಾಗಿಬಂದು ಅರಣ್ಯದಲ್ಲಿ ಬೀಡುಬಿಟ್ಟರು. ಸಹಸ್ರಾರು ಸಂಖ್ಯೆಯಲ್ಲಿ ಆದಿವಾಸಿಗಳು ನಿರ್ವಸಿತರಾದರು; ಪ್ರತಿಭಟಿಸಿದ ಹಲವಾರು ಆದಿವಾಸಿಗಳ ಹತ್ಯೆ ನಡೆಯಿತು; ಸಹಸ್ರಾರು ಎಕರೆ ಅರಣ್ಯ ನಾಶವಾಯಿತು; ವನ್ಯಜೀವಿಗಳ ಮಾರಣಹೋಮ ನಡೆಯಿತು. ವಿಷಯದ ಗಾಂಭೀರ್ಯವನ್ನು ಮನಗಂಡ ಅಂದಿನ ನೆಹರೂ ಸರಕಾರ ಯು.ಎನ್. ದೇಬರ್ ಅವರನ್ನು ಏಕಸದಸ್ಯ ಆಯೋಗವನ್ನಾಗಿ ನೇಮಿಸಿತು. (ದೇಶದ ಇತರೆಡೆಯಲ್ಲಿನ ಅತಿಕ್ರಮಣ ಕೂಡಾ ಆಯೋಗದ ವ್ಯಾಪ್ತಿಯಲ್ಲಿದ್ದರೂ ಕೇರಳದ ಚರ್ಚ್ ಅತಿಕ್ರಮಣವೇ ಮುಖ್ಯ ವಿಷಯವಾಗಿತ್ತು.) ಇಸವಿ 1960ರಲ್ಲಿ ಅತಿಕ್ರಮಣಕಾರರು (ಆಯೋಗಗಳಿಗೆ, ನ್ಯಾಯಾಲಯಗಳಿಗೆ ಎಂತಹ ಭಯ, ದಾಕ್ಷಿಣ್ಯ ಮತ್ತು ಮುಜುಗರವೆಂದರೆ, ಅವರನ್ನೆಲ್ಲ ಚರ್ಚ್ ಪ್ರಾಯೋಜಿತ ಕ್ರೈಸ್ತ ಅತಿಕ್ರಮಣಕಾರರು ಎಂದು ನೇರವಾಗಿ ಹೇಳದೆ settlers ಎಂದೇ ಕರೆದವು!) ಆದಿವಾಸಿಗಳ ನೆಲ–ಅರಣ್ಯವನ್ನೆಲ್ಲ ಮರಳಿಸಬೇಕು ಎಂದು ಕೇರಳ ಸರ್ಕಾರಕ್ಕೆ ಆದೇಶ ನೀಡಿತು. ಕೇರಳ ಸರಕಾರ ಆ ಆದೇಶಕ್ಕೆ ಮೂರುಕಾಸಿನ ಗೌರವ ಕೊಡಲಿಲ್ಲ. ಅನಂತರ ಹಲವಾರು ಬಾರಿ ಸುಪ್ರೀಂ ಕೋರ್ಟ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವಂತೆ ಕೇರಳ ಸರಕಾರಕ್ಕೆ ತಾಕಿತು ಮಾಡಿತು. ಇಸವಿ 1988ರಲ್ಲಿ ಕೇರಳ ಸರಕಾರ ನೇರವಾಗಿ 'ಜಾರಿಗೊಳಿಸುವುದು ಸಾಧ್ಯವಿಲ್ಲ' ಎಂದುಬಿಟ್ಟಿತು. ಸುಪ್ರೀಂ ಕೋರ್ಟ್ ಸುಮ್ಮನಾಯಿತು. ಆದಿವಾಸಿಗಳಿಗೆ ಅರಣ್ಯಭೂಮಿಯನ್ನು ಮರಳಿಸುವುದಿರಲಿ, ಆಕ್ರಮಣ, ಒತ್ತುವರಿ ಯಾವ ಎಗ್ಗೂ ಇಲ್ಲದೆ ಅವ್ಯಾಹತವಾಗಿ ಸಾಗಿತು. ಕೇರಳದ ಕಾಡುಗಳು ಬರಿದಾದ ಮೇಲೆ ಕೇರಳದ ಚರ್ಚ್‌ಗಳು ಕರ್ನಾಟಕ, ತಮಿಳುನಾಡು, ಆಂಧ್ರ, ಪೂರ್ವಾಂಚಲದ ಕಾಡುಗಳನ್ನೂ ನುಂಗತೊಡಗಿದವು. ಸಣ್ಣಪುಟ್ಟ ಹಾಸ್ಯಾಸ್ಪದ ಸಂಗತಿಗಳಿಗೆಲ್ಲ 'ನ್ಯಾಯಾಂಗನಿಂದನೆ' ಎಂದು ಎಗರಾಡುವ ಕೋರ್ಟ್‌ಗಳು ಚರ್ಚ್‌ನ ಮುಂದೆ, ಚರ್ಚ್‌ನ ಏಜೆಂಟರಾಗಿ ಕೆಲಸ ಮಾಡುವ ಕೇರಳದ ಸರಕಾರ ಮತ್ತು ರಾಜಕೀಯ ಪಕ್ಷಗಳ ಮುಂದೆ ಮೌನವಾದವು. ಆದಿವಾಸಿಗಳ ಬಗ್ಗೆ ಮೊಸಳೆಕಣ್ಣೀರು ಸುರಿಸುವ ಎಡಪಕ್ಷಗಳು, ಬುದ್ಧಿಜೀವಿಗಳು, ಮಾಧ್ಯಮಗಳು ಕೇರಳದ ಚರ್ಚ್‌ಗಳ ಈ ಆಕ್ರಮಣದ ಬಗ್ಗೆ ಚಕಾರವೆತ್ತಿಲ್ಲ.)

3. ಎಡ್ಮಂಡ್ ಹಿಲೆರಿ ಸಂಪಾದಿಸಿದ ಪರಿಸರ ರಕ್ಷಣೆ ಕುರಿತಾದ ಪುಸ್ತಕದಲ್ಲಿ ಈ ಕುರಿತು ಸರ್ ಪೀಟರ್ ಸ್ಕಾಟ್ ಬರೆದ ಲೇಖನವಿದೆ. ಇತ್ತೀಚಿನ ವರ್ಷಗಳಲ್ಲಿ World Population Commission ಕೂಡಾ ಇದರ ಬಗ್ಗೆ ಮಾತನಾಡುವ ಧೈರ್ಯ ತೋರುತ್ತಿದೆ. ಎರಡು ವರ್ಷಗಳ ಹಿಂದಿನ ಅದರ ವರದಿ Internet ನಲ್ಲಿ ಸಿಗುತ್ತದೆ. ಆಸಕ್ತರು ಓದಬಹುದು.

4. ಆರುಂ ವೃತ್ತಿಗಳನಿವಂ/ಮೀರಿದರಲ್ಲರ್ ದ್ವಿಜನ್ಮರೀ ವೃತ್ತಿಗಳಿಂ/ಬೇರಾದರ್ ದ್ವಿಜರುಂತೇಂ/ ಬೇರುಂಟೇ ಮನುಷ್ಯ ಜಾತಿ ತಾನೊಂದೆ ವಲಂ// (ಆದಿಪುರಾಣ 15ನೇ ಆಶ್ವಾಸ) ಎಲ್ಲರೂ ತಮ್ಮತಮ್ಮ ಜಾತಿಯ ಮತಾಚಾರಗಳನ್ನು ಪಾಲಿಸಬೇಕು; ಬ್ರಾಹ್ಮಣನಾದವನು ತನ್ನ ಆಚಾರಗಳನ್ನು ಪಾಲಿಸದಿದ್ದರೆ ಅವನೆಂತಹ ಬ್ರಾಹ್ಮಣ; ಅವನು ಕೇವಲ ಮನುಷ್ಯ ಅಷ್ಟೇ ಎನ್ನುತ್ತಾನೆ ಪಂಪ!
5. ಆದರೆ ಈ ಮಾತನ್ನು ಹೇಳಿದ್ದು ಪಂಚತಂತ್ರದ ಒಂದು ನರಿ. ಇದನ್ನು ಉಪನಿಷತ್ ವಾಕ್ಯ, ವೇದವಾಕ್ಯ ಎನ್ನುವವರಿದ್ದಾರೆ!
6. ಉತ್ತರ ಅಮೇರಿಕಾದ ಡಕೋಟಾ ಪ್ರಾಂತದಲ್ಲಿ ಒಂದು ಅನಿಲಕೊಳವೆ ಆದಿವಾಸಿಗಳ ಪವಿತ್ರ ನೆಲವನ್ನು ಧ್ವಂಸಗೊಳಿಸಿ ಸಾಗುತ್ತದೆ. ಆದಿವಾಸಿಗಳು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅವರಿಗೆ ಅಂತಾರಾಷ್ಟ್ರೀಯ ಬೆಂಬಲ ದೊರೆಯುತ್ತಿದೆ. ಆ ಸಂದರ್ಭದಲ್ಲಿ ಇಂದಿನ ಪೋಪ್ ಫ್ರಾನ್ಸಿಸ್ ಹೇಳಿದ ಮಾತಿದು.

ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜು ಯು.ಜಿ.ಸಿ ಅನುದಾನದಲ್ಲಿ ಸುಬ್ರಹ್ಮಣ್ಯದಲ್ಲಿ ಏರ್ಪಡಿಸಿದ ಎರಡು ದಿನಗಳ ವಿಚಾರಸಂಕಿರಣದಲ್ಲಿ ದಿನಾಂಕ 4–3–2017ರಂದು ಮಂಡಿಸಿದ ಲೇಖನ.

ಕಾಲಪಕ್ಷಿಯ ದಾರಿ
ಕೊಂಚವೇ ದೂರ
ಪಕಳೆಯರಳುವಲ್ಲಿಂದ
ಪಕಳೆಯುರುಳುವವರೆಗೆ.

ಸುಧಾರಣಾವಾದಿ ಚೌಕಟ್ಟಿನಲ್ಲಿ ರೂಪುತಳೆದ ಮಾಸ್ತಿಯವರ ಹಿಂದೂ ಧರ್ಮ

ಡಾ. ಮಹೇಶ್ ಕುಮಾರ್ ಸಿ.ಎಸ್.
ರಮೇಶ್ ಈ.

ಸಾರಾಂಶ

ಮಾಸ್ತಿ ವೆಂಕಟೇಶ ಐಯ್ಯಂಗಾರ್ ಕನ್ನಡದ ಅಗ್ರಗಣ್ಯ ಸಾಹಿತಿಗಳಲ್ಲಿ ಪ್ರಮುಖರು. ಇವರು ಕೇವಲ ಸಾಹಿತಿಗಳು ಮಾತ್ರವಲ್ಲ, ತಮ್ಮ ಸಮಾಜ–ಸಂಸ್ಕೃತಿಯ ಸ್ವರೂಪ ಮತ್ತು ಅದು ಏರ್ಪಡುವ ಬದಲಾವಣೆಗಳನ್ನು ಕುರಿತು ಯೋಚಿಸಿ ಅದನ್ನು ದಾಖಲಿಸಿರುವ ಚಿಂತಕರೂ ಆಗಿದ್ದಾರೆ. ತಮ್ಮ ಸೃಜನೇತರ ಬರವಣಿಗೆಗಳಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಗಳ ಕುರಿತು ವಿಶೇಷವಾದ ಚಿಂತನೆಯನ್ನು ನಡೆಸಿದ್ದಾರೆ. ಈ ಸಂದರ್ಭಗಳಲ್ಲಿ ಮಾಸ್ತಿಯವರು ಭಾರತೀಯ ಸಂಪ್ರದಾಯದ ದಾರ್ಶನಿಕ ಚಿಂತನೆಗಳನ್ನೂ ಹಿಂದೂ ಧರ್ಮದ ಪರಿಕಲ್ಪನೆಯಡಿಯಲ್ಲಿಯೇ ಅಡಕಗೊಳಿಸುವ ಕೆಲಸವನ್ನು ಮಾಡಿದ್ದಾರೆ. ಈ ಪ್ರಯತ್ನದಲ್ಲಿ ಸನಾತನ/ಹಿಂದೂ ಧರ್ಮದ ನೈಜ ಸ್ವರೂಪವೇನು? ಕಾಲದ ಪ್ರವಾಹದಲ್ಲಿ ಅದು ಪಡೆದುಕೊಂಡ ರೂಪಗಳು, ಅದಕ್ಕೆ ಕಾರಣಗಳ ಕುರಿತು ತಮ್ಮದೇ ವಿಚಾರಗಳನ್ನು ಮಂಡಿಸಿ ಹಿಂದೂ ಧರ್ಮ ಎಂದರೆ 'ಇದು' ಎನ್ನುವಂತೆ ಚಿತ್ರಣವೊಂದನ್ನು ಕಟ್ಟಿಕೊಟ್ಟಿದ್ದಾರೆ. ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಸಂಶೋಧನಾ ಲೇಖನವು ಬದಲಾದ ಬೌದ್ಧಿಕ ಸನ್ನಿವೇಶದಲ್ಲಿ ಲಭ್ಯ ಸಾಕ್ಷ್ಯಗಳ ಆಧಾರದ ಮೇಲೆ ಮಾಸ್ತಿಯವರ ಹಿಂದೂ ಧರ್ಮದ ಪ್ರತಿನಿಧೀಕರಣದ ಪರಿಶೀಲನೆಯನ್ನು ಕೈಗೆತ್ತಿಕೊಂಡಿದೆ.

ಈ ಪರಿಶೀಲನೆಯಲ್ಲಿ ಮಾಸ್ತಿಯವರ ಚಿತ್ರಣದಲ್ಲಿ ಹಿಂದೂ ಧರ್ಮ ಮಾತ್ರವಲ್ಲ ಈ ಚಿತ್ರಣದ ರೂಪಣೆಗೆ ಅವರ ಮೇಲೆ ಪ್ರಭಾವ ಬೀರಿರುವ ಸುಧಾರಣಾವಾದಿಗಳ ಚಿಂತನೆಯ ಚೌಕಟ್ಟನ್ನು ಈ ಲೇಖನವು ಗುರುತಿಸಿದೆ. ಈ ಮೂಲಕ ಮಾಸ್ತಿಯವರ ಒಟ್ಟು ಸಾಹಿತ್ಯವನ್ನು ಹೊಸ ನೆಲೆಯಲ್ಲಿ ಪರಾಮರ್ಶಿಸಲು ಅನುವು ಮಾಡಿಕೊಡುತ್ತದೆ. ಅಷ್ಟು ಮಾತ್ರವಲ್ಲದೆ, ನವೋದಯ ಕಾಲಘಟ್ಟದ ಒಬ್ಬ ಪ್ರಮುಖ ಚಿಂತಕನ ಬೌದ್ಧಿಕ ಚೌಕಟ್ಟನ್ನು ಅರಿಯುವ ಕಾರ್ಯ ಆ ಕಾಲದ ಚಿಂತನೆಯನ್ನು ರೂಪಿಸಿರುವ ಗ್ರಹಿಕೆಗಳ ಚೌಕಟ್ಟುಗಳನ್ನು ಅರ್ಥಮಾಡಿಕೊಳ್ಳಲೂ ನೆರವಾಗುತ್ತದೆ. ಅಂತಿಮವಾಗಿ ಕನ್ನಡ ಬೌದ್ಧಿಕ ಪರಂಪರೆಯಲ್ಲಿ ಬಹುಮುಖ್ಯ ಕಾಲಘಟ್ಟವಾದ ನವೋದಯ ಪರಂಪರೆಯ ಒಟ್ಟು ಚಿಂತನಾಕ್ರಮವನ್ನು ತಿಳಿಯುವಲ್ಲಿ ಮಾಸ್ತಿಯವರ ಚಿಂತನೆಯು ಸಹಕರಿಸುತ್ತದೆ ಎಂದು ಈ ಲೇಖನ ವಾದಿಸುತ್ತದೆ.

*****

ಭಾರತದ ಸಂಸ್ಕೃತಿಯನ್ನು ಕುರಿತಾಗಿ ಸೈದ್ಧಾಂತಿಕ ಜ್ಞಾನವನ್ನು ಯೂರೋಪಿನ ಸಂಸ್ಕೃತಿಯೇ ರೂಪಿಸಿತು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ಜ್ಞಾನದ ರೂಪಣೆಯಲ್ಲಿ ಈ ಸಂಸ್ಕೃತಿಯನ್ನು ಯೂರೋಪಿನ ಸಂಸ್ಕೃತಿಯು ತನ್ನ ಅನುಭವದ ಚೌಕಟ್ಟಿನಲ್ಲಿಯೇ ರೂಪಿಸಿದೆ. ಪರಿಣಾಮ, ನಾವಿಂದು ಯಾವುದನ್ನು ನಮ್ಮ ಸಮಾಜವನ್ನು

ಕುರಿತ ಅಧಿಕೃತ ಜ್ಞಾನವೆಂದು ಭಾವಿಸಿದ್ದೇವೆಯೋ ಅದು ಈ ಸಮಾಜದ ನೈಜವಾದ ಚಿತ್ರಣವಲ್ಲ. ಬದಲಾಗಿ ಪಾಶ್ಚಿಮಾತ್ಯರ ಕನ್ನಡಕದಿಂದ ನಾವು ನಮ್ಮನ್ನು ನೋಡಿಕೊಂಡದ್ದಾಗಿದೆ. ಅಂದರೆ ನಮ್ಮ ಸಂಸ್ಕೃತಿಯಲ್ಲಿನ ನಮ್ಮ ಅನುಭವ ಮತ್ತು ಅದರ ತಿಳಿವಳಿಕೆಯ ನಡುವೆ ಕಂದರವಿದೆ ಎನ್ನುವುದು ಈ ತಿಳಿವಳಿಕೆಯ ಮೂಲ ಸಾರವಾಗಿದೆ. ಈ ತಿಳಿವಳಿಕೆ ನಮ್ಮ ಸಮಾಜ ಸಂಸ್ಕೃತಿಯ ಬಗೆಗೆ ಚಾಲ್ತಿಯಲ್ಲಿರುವ ನಿರೂಪಣೆಗಳನ್ನು ಪುನರ್ ಪರಿಶೀಲಿಸಲು ಒತ್ತಾಯಿಸುತ್ತದೆ.

ಈ ಮರುಚಿಂತನೆ ನಡೆಸುವುದು ಹೇಗೆ? ಇದಕ್ಕಿರುವ ಒಂದು ದಾರಿಯಂದರೆ, ನಮ್ಮ ಅನುಭವಗಳನ್ನು ನಾವು ಚಾಲ್ತಿಯಲ್ಲಿರುವ ನಿರೂಪಣೆಯೊಂದಿಗೆ ಮುಖಾಮುಖಿ ಯಾಗಿಸುವುದು. ಆ ಮೂಲಕ ನಿರೂಪಣೆಯ ಸಮಸ್ಯೆಯನ್ನು ಗುರುತಿಸಿ, ಅದಕ್ಕೆ ಪರ್ಯಾಯ ವಾಗಿ ನಮ್ಮ ಸಂಸ್ಕೃತಿಯ ಅನುಭಗಳನ್ನು ಅದರ ನೈಜತೆಯಲ್ಲಿಯೇ ವಿವರಿಸುವುದು. ವಿವರಿಸುವವನ ವಿವರಣೆಯಲ್ಲಿ ಅವನ ಸಂಸ್ಕೃತಿಯ ಅನುಭವವಿದೆ ಎಂದರೆ, ಅವನು ಅದನ್ನು ಪರಿಕಲ್ಪಿಸುವಾಗ ಆ ಪರಿಕಲ್ಪನೆಯಲ್ಲಿ ಆತನ ಸಂಸ್ಕೃತಿಯ ಪೂರ್ವಗ್ರಹೀತಗಳು ಇರುತ್ತವೆ ಎಂದರ್ಥ. ಈ ಪೂರ್ವಗ್ರಹಿಕೆಯನ್ನು ಹೊತ್ತ ವಿವರಣೆಯು ಪ್ರಸ್ತುತ ಸಂಸ್ಕೃತಿಯ ಅನುಭವಕ್ಕೆ ಹೊಂದಿಕೊಳ್ಳುತ್ತದೆಯೇ ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಈ ಮರು ಚಿಂತನೆ ಇಲ್ಲಿ ಈ ಸಾಲುಗಳನ್ನು ಸೂತ್ರೀಕರಿಸಿದಷ್ಟು ಸುಲಭವೇ? ಇಷ್ಟೂ ಕಾಲ ನಮ್ಮ ತಿಳಿವಳಿಕೆಯಾಗಿದ್ದದ್ದು ನಮ್ಮ ಅನುಭವವಲ್ಲ ಎಂದಾಗ ಆಗುವ ಪರಿಣಾಮವೇನು? ನಮ್ಮ ಸಂಸ್ಕೃತಿಯ ವಿದ್ಯಮಾನ ಪಾಶ್ಚಿಮಾತ್ಯ ಭಾಷೆಯಲ್ಲಿ ರೂಪಿತವಾಗಿ, ಅದು ದೇಸಿಯದ್ದಾದ ಯಾವುದೋ ಪರಿಭಾಷೆಗೆ ಅನುವಾದಿಸಿಕೊಂಡರೆ, ಮೂಲ ಭಾಷೆಯ ಪೂರ್ವಗ್ರಹಿಕೆಗಳು, ದೇಸಿ ಭಾಷೆಯ ಪೂರ್ವಗ್ರಹಿಕೆಗಳು, ವಿವರಿಸಲ್ಪಟ್ಟ ವಿದ್ಯಮಾನ ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧ ಇರುತ್ತದೆಯೇ? ಪಾಶ್ಚಿಮಾತ್ಯರು ಅವರ ಸಂಸ್ಕೃತಿಯ ಅನುಭದಲ್ಲಿ ನಮ್ಮ ಸಂಸ್ಕೃತಿಯನ್ನು ನಿರೂಪಿಸಿದರೆ, ಈ ನಿರೂಪಣೆಯನ್ನು ನಮ್ಮ ಸಂಸ್ಕೃತಿಯ ಜನ ಹೇಗೆ ಅರ್ಥ ಮಾಡಿಕೊಂಡರು? ಅದಕ್ಕೆ ಹೇಗೆ ಪ್ರತಿಕ್ರಿಯಿಸಿದರು? ಈ ಅರ್ಥಗ್ರಹಿಕೆ ಮತ್ತು ಪ್ರತಿಕ್ರಿಯೆಯನ್ನು ರೂಪಿಸುವಲ್ಲಿ ನಮ್ಮ ಸಂಸ್ಕೃತಿಯ ಅನುಭವದ ಪಾಲೆಷ್ಟು? ಇತ್ಯಾದಿ ಸವಾಲುಗಳು ನಮ್ಮ ಮುಂದೆ ಬರುತ್ತವೆ. ಈ ಸವಾಲನ್ನು ಎದುರಿಸಬೇಕಾದರೆ ಸವಾಲಿನಯ ಸ್ವರೂಪವನ್ನು ಮೂರ್ತರೂಪದಲ್ಲಿ ಚರ್ಚಿಸಬೇಕಾಗುತ್ತದೆ. ಆ ಮೂಲಕ ಸಮಸ್ಯೆಯ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಪ್ರಯತ್ನಕ್ಕೆ ಈ ಲೇಖನದಲ್ಲಿ ಕನ್ನಡದ ಅಗ್ರಗಣ್ಯ ಸಾಹಿತಿಗಳಲ್ಲಿ ಒಬ್ಬರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರು ಹಿಂದೂ ಧರ್ಮವನ್ನು ಪರಿಕಲ್ಪಿಸಿಕೊಂಡ ಸ್ವರೂಪವನ್ನು ಆಯ್ದುಕೊಳ್ಳಲಾಗಿದೆ. ಹಿಂದೂಯಿಸಂ ವಸಾಹತು ದೊರೆಗಳು ರೂಪಿಸಿದ ನಿರೂಪಣೆ, ಮಾಸ್ತಿ ದೇಸಿ ವಿದ್ವಾಂಸರು; ಇವರ ಅನುಭವ ಮತ್ತು ವಸಾಹತುಶಾಹಿ ನಿರೂಪಣೆ ಒಂದರಲ್ಲಿ ಮತ್ತೊಂದು ಹೇಗೆ ಸೇರಿಕೊಂಡಿವೆ? ಎನ್ನುವುದನ್ನು ಮುಂದೆ ಪರಿಶೀಲಿಸಲಾಗುವುದು.

ಪಶ್ಚಿಮದ ಸೂತ್ರೀಕರಣ

ಹಿಂದೂ ಧರ್ಮ ಅಥವಾ ಹಿಂದೂ ರಿಲಿಜನ್ ಎನ್ನುವುದು ಭಾರತದಲ್ಲಿದ್ದ ಹಲವು ಸಂಪ್ರದಾಯ, ಆಚರಣೆಗಳನ್ನು ಪಾಶ್ಚಿಮಾತ್ಯ ವಿದ್ವಾಂಸರು ರಿಲಿಜನ್ನಿನ ಚೌಕಟ್ಟಿನಲ್ಲಿ ಭಾವಿಸಿ ಸೃಷ್ಟಿಸಿದ ಪರಿಕಲ್ಪನೆ. ಅಂದರೆ ಯೂರೋಪಿನಲ್ಲಿ ಕ್ರಿಶ್ಚಿಯಾನಿಟಿ ಎನ್ನುವ ರಿಲಿಜನ್ ಇರುವಂತೆ,

ಭಾರತದಲ್ಲಿ ಹಿಂದೂಯಿಸಂ ಎನ್ನುವ ರಿಲಿಜನ್ನಿದೆ ಎನ್ನುವಂತಹ ವಿವರಣೆಯನ್ನು ಬೆಳೆಸಿದ್ದಾರೆ. ಈ ರಿಲಿಜನ್ ಎನ್ನುವ ಪರಿಭಾಷೆಗೆ ಧರ್ಮ ಎನ್ನುವ ದೇಶ ಭಾಷೆಯ ಪರಿಕಲ್ಪನೆಯನ್ನೇ ಸಮಾನಾಂತರವಾಗಿ ಬಳಸಲಾಗುತ್ತಿದೆ. ಆದರೆ ಹಿಂದೂ ರಿಲಿಜನ್ ಭಾರತೀಯ ಜನರ ಅನುಭವದ ವಾಸ್ತವವಲ್ಲ. ಆದರೆ ಭಾರತೀಯ ಸಮಾಜದ ಕುರಿತಾದ ವಿವರಣೆಗಳಲ್ಲಿ, ಸರ್ಕಾರಿ ನೀತಿಗಳಲ್ಲಿ, ಸಾಮಾಜಿಕ ಚಳವಳಿಗಳಲ್ಲಿ ಇಂದಿಗೂ ಭಾರತದಲ್ಲಿ ಹಿಂದೂಯಿಸಂ ಅಸ್ತಿತ್ವದಲ್ಲಿದೆ ಎಂದೇ ಭಾವಿಸಿಕೊಂಡು ವ್ಯವಹಾರ ಮಾಡಲಾಗುತ್ತಿದೆ. ಪಾಶ್ಚಿಮಾತ್ಯ ತಿಳಿವಳಿಕೆ ಅಥವಾ ವಸಹಾತುಪ್ರಜ್ಞೆ ಇಂದಿಗೂ ಭಾರತೀಯ ಮನಸ್ಸುಗಳಲ್ಲಿ ನಿರಂತವಾಗಿರುವುದಕ್ಕೆ ಸಾಕ್ಷಿಯಾಗಿದೆ. ಪಾಶ್ಚಿಮಾತ್ಯರಿಗೆ ಭಾರತದಲ್ಲಿ ಕ್ರಿಶ್ಚಿಯಾನಿಟಿ ಅಂತಹುದ್ದೇ ಲಕ್ಷಣ ಹೊಂದಿದ್ದ ರಿಲಿಜನ್ ಇಲ್ಲದಿದ್ದರೂ, ಬೇರೆಯದೇ ರೂಪದ ರಿಲಜನ್ ಇದೆ ಎನ್ನುವುದಲ್ಲಿ ಅನುಮಾನವಿರಲಿಲ್ಲ. ಅದನ್ನು ಹಿಂದೂ ರಿಲಿಜನ್ ಎಂದು ಗುರುತಿಸಿದರು ಮಾತ್ರವಲ್ಲ. ಅದರ ಕುರಿತಾಗಿ ಸಂಪುಟಗಟ್ಟಲೇ ವಿವರಣೆ, ವಿಶ್ಲೇಷಣೆ, ಟೀಕೆ, ಟಿಪ್ಪಣಿಗಳನ್ನು ಮಾಡಿದ್ದಾರೆ. ಒಟ್ಟಾರೆ, ಹಿಂದೂ ರಿಲಿಜನ್ ಭಾರತೀಯ ಸಂಸ್ಕೃತಿಯ ಅಡಿಪಾಯವಾಗಿ, ಜಾತಿ ವ್ಯವಸ್ಥೆಯ ನಿರ್ಮಾತೃವಾಗಿ, ಅನೇಕ ಅನಿಷ್ಠ ಪದ್ಧತಿಗಳಿಗೆ ಮೂಲವಾಗಿ, ಒಂದು ಕಾಲದ ಅತ್ಯುತ್ತಮ ಆಧ್ಯಾತ್ಮಿಕ ಶಿಖರಕ್ಕೆ ತಲುಪಿದ, ನಾಗರಿಕತೆಯ ತೊಟ್ಟಿಲಾಗಿ ವರ್ಣಿತವಾಗುತ್ತಲೇ ಇದೆ. ಒಂದು ಕಡೆ, ಎನ್‌ಲೈಟನ್‌ಮೆಂಟ್ ಚಿಂತಕರು, ಮತ ಪ್ರಚಾರಕರಿಂದ ಕಟುಟೀಕೆಗೆ ಒಳಗಾಗಿ, ಮತ್ತೊಂದು ಕಡೆ ಓರಿಯಂಟಲಿಸ್ಟ್ ರೊಮ್ಯಾಂಟಿಸ್ಟರಿಂದ ಬಹುವಾಗಿ ಹೊಗಳಿಸಿಕೊಂಡ ಸಂಗತಿಯಾಗಿ ಹಿಂದೂ ಧರ್ಮ ರೂಪಿತವಾಯಿತು. ರೊಮ್ಯಾಂಟಿಸ್ಟರು ಒಂದು ಕಾಲದಲ್ಲಿ ಹಿಂದೂ ಧರ್ಮವು ಅತ್ಯುತ್ತಮ ಶಿಖರ ತಲುಪಿದರೂ, ಪ್ರಸ್ತುತದಲ್ಲಿ, ಜನರ ಆಚರಣೆಯಲ್ಲಿ ಅದು ತನ್ನ ಮಹತ್ತನ್ನು ಉಳಿಸಿಕೊಂಡಿಲ್ಲ; ಮಾತ್ರವಲ್ಲದೇ, ಅದು ಕ್ರಿಶ್ಚಿಯಾನಿಟಿಗೆ ಹೋಲಿಸಿದರೆ ಕಡಿಮೆ ಮಟ್ಟದ್ದು ಎಂದೂ ಗುರುತಿಸಿದ್ದಾರೆ ಎನ್ನುವುದನ್ನು ಮರೆಯುವಂತಿಲ್ಲ.

ಭಾರತೀಯ ಬುದ್ಧಿಜೀವಿಗಳ ಪ್ರತಿಕ್ರಿಯೆ

ಈ ತಿಳಿವಳಿಕೆ ಆಧುನಿಕ ಶಿಕ್ಷಣ ಪಡೆದ ಭಾರತೀಯ ಬುದ್ಧಿಜೀವಿಗಳನ್ನು ರೂಪಿಸಿತು. ಇದುವೇ ಮುಂದೆ ಹಿಂದೂ ರಿಲಿಜನ್ನಿಗೆ ಎರಡು ಮುಖ್ಯವಾದ ರೀತಿಗಳಲ್ಲಿ ಪ್ರತಿಕ್ರಿಯೆಯನ್ನು ನೀಡುವ ಬೌದ್ಧಿಕ ವರ್ಗಗಳನ್ನು ರೂಪಿಸಿತು.

1. ಹಿಂದೂ ಧರ್ಮ ಅನಿಷ್ಠವಾದ ಒಂದು ರಿಲಿಜನ್ನಾಗಿದ್ದು, ಈ ರಿಲಿಜನ್ನಿನಿಂದ ಸ್ವತಂತ್ರವಾಗಿ ಬದುಕುವ ಆಧುನಿಕತೆ, ಸೆಕ್ಯುಲರ್ ಮೌಲ್ಯಗಳನ್ನು ಪಡೆಯವುದು ಸರಿ. ಇಲ್ಲವೇ ಬೇರೊಂದು ರಿಲಿಜನ್ನಿಗೆ ಪರಿವರ್ತನೆಯಾಗುವುದು (ಅದು ಬುದ್ಧಿಸಂಗೂ ಇರಬಹುದು, ಇಲ್ಲವೇ ಕ್ರಿಶ್ಚಿಯಾನಿಟಿಗೂ ಇರಬಹುದು) ಎನ್ನುವಂತಹದ್ದು.
2. ಮತ್ತೊಂದು, ಹಿಂದೂಯಿಸಂ ಮೂಲದಲ್ಲಿ ಅತ್ಯುತ್ತಮವಾದ ರಿಲಿಜನ್ನಾದರೂ, ಆಚಾರದಲ್ಲಿ ಅದು ಕೆಟ್ಟಿದೆ. ಇದನ್ನು ಸರಿಪಡಿಸಿ ಹಿಂದೂ ಧರ್ಮವನ್ನು ಪರಿಷ್ಕಕರಿಸಬೇಕು ಎನ್ನುವಂತಹದ್ದಾಗಿದೆ. ಆರ್ಯ ಸಮಾಜ ಮತ್ತು ಬ್ರಹ್ಮ ಸಮಾಜಗಳು ಇಂತಹ ಪ್ರತಿಕ್ರಿಯೆಗಳಾಗಿವೆ.

ಈ ಎರಡು ಪ್ರಕಾರದ ಚಿಂತನೆಗಳು ಪಾಶ್ಚಿಮಾತ್ಯರ ತಿಳಿವಳಿಕೆಯಿಂದ ರೂಪುತಳದವುಗಳೇ ಆಗಿವೆ. ಇವರು ಹಿಂದೂಯಿಸಂನ ಅಸ್ತಿತ್ವವನ್ನು ನಿರಾಕರಿಸಲಿಲ್ಲ. ಬದಲಾಗಿ ಅದನ್ನು ಒಪ್ಪಿ ಹಿಂದೂಯಿಸಂ ಅನ್ನು ನಿವಾರಿಸುವ ಇಲ್ಲವೇ ಪುನರ್‌ರೂಪಿಸುವ ಕಾರ್ಯಸೂಚಿಗಳನ್ನು

ಒಸೆಯತೊಡಗಿದರು. ಅಂಬೇಡ್ಕರ್ ಅಂಥವರು ಹಿಂದೂವಾಗಿ ಹುಟ್ಟಿದರೂ ತಾನು ಹಿಂದೂವಾಗಿ ಸಾಯುವುದಿಲ್ಲವೆಂದು ಬುದ್ಧ ಧರ್ಮಕ್ಕೆ ಮತಾಂತರವಾದರೆ, ನೆಹರು ಅಂಥವರು ಆಧುನಿಕ ದೇವಾಲಯಗಳೆಂದರೆ, ಅಣೆಕಟ್ಟುಗಳು ಎಂದು ಸೆಕ್ಯುಲರ್ ಭಾರತವನ್ನು ನಿರ್ಮಿಸುವ ಪಣ ತೊಟ್ಟರು. ಇಂತಹ ಪ್ರತಿಕ್ರಿಯೆಗೆ ಪ್ರತಿಯಾಗಿ ಭಾರತೀಯ ಸಂಸ್ಕೃತಿಗೆ ಪಾಶ್ಚಿಮಾತ್ಯ ಪ್ರಚಾರಕ, ಎನ್‌ಲೈಟನ್‌ಮೆಂಟ್ ಚಿಂತಕರ ಅಭಿಪ್ರಾಯಗಳಿಗೆ ಪ್ರತಿಯಾಗಿ ಬಂದ ಪಾಶ್ಚಿಮಾತ್ಯರ ಮತ್ತೊಂದು ಬಳಗ ರೊಮ್ಯಂಟಿಸ್ಟರ ಚಿಂತನೆಯನ್ನು ಆಧರಿಸಿ ಸುಧಾರಣವಾದಿಗಳು ಹಿಂದೂ ರಿಲಿಜನ್ ಅನ್ನು ಪುನರ್‌ರಚಿಸುವ ಕಾರ್ಯಕ್ಕೆ ಬದ್ಧರಾದರು. ಅದಕ್ಕೆ ಕ್ರಿಶ್ಚಿಯಾನಿಟಿಯನ್ನೇ ಮಾದರಿಯಾಗಿ ಸ್ವೀಕರಿಸಿದರು. ಕ್ರಿಶ್ಚಿಯಾನಿಟಿಯ ಬೈಬಲ್‌ನಂತೆ ವೇದವೊಂದೇ ಭಾರತೀಯರ ಆತ್ಯಂತಿಕ ಪಠ್ಯವೆಂದು ರಾಜಾರಾಂ ಮೋಹನ್‌ರಾಯ್ ಪ್ರತಿಪಾದಿಸಿದರೆ, ಇದೇ ಹಾದಿಯಲ್ಲಿ ದಯಾನಂದ ಸರಸ್ವತಿಯವರು ಸಹ ಮುಂದುವರೆದು ವೇದಗಳು ಮಾತ್ರ ಅಸಲಿ, ಉಳಿದ ಪುರಾಣ ಶಾಸ್ತ್ರಗಳು ನಕಲಿ ಎಂದು ಕರೆದು ವೇದಗಳಿಗೆ ಹಿಂತಿರುಗಿ ಎಂದು ಕರೆ ನೀಡಿದರು.

ಮಾಸ್ತಿಯವ ಹಿಂದೂಯಿಸಂನ ಚಿಂತನೆ, ರೊಮ್ಯಾಂಟಿಸ್ಟರಿಂದ ಪ್ರಭಾವಿತರಾಗಿ ಹಿಂದೂಯಿಸಂ ಅನ್ನು ಪರಿಷ್ಕರಿಸಬಯಸಿದ ಪರಿಷ್ಕರಣವಾದಿಗಳ ಚೌಕಟ್ಟಿನಲ್ಲಿ ರೂಪು ತಳೆದ ಚಿಂತನೆಯಾಗಿದೆ. ಇದನ್ನು ಅವರ ಮಾತುಗಳೇ ಸಾಕ್ಷೀಕರಿಸುತ್ತವೆ:

ಸನಾತನ ಧರ್ಮ ಮಾನವ ಧರ್ಮವಾಗಿಯೇ ಆರಂಭವಾಯಿತು. ಇದು ಎಲ್ಲಾ ದೇವರಿಗೆ ಮಾಡುವ ನಮಸ್ಕಾರಗಳೂ ಕೇಶವನಿಗೆ ಸೇರುತ್ತದೆ ಎಂದು ಹೇಳುತ್ತದೆ; ಭಗವಂತನನ್ನು ಹಲವು ಮತಗಳು ಹಲವು ಹೆಸರಿನಿಂದ ಕರೆಯುವ ತ್ರೈ ಲೋಕ್ಯನಾಥನು ಎಂದು ವರ್ಣಿಸುತ್ತದೆ. ಕೇಶವನೇನು, ಶಿವನೇನು ಎಂದೂ, ಇಬ್ಬರಲ್ಲಿ ಭೇದವಿಲ್ಲವೆಂದೂ ಬೋಧಿಸುತ್ತದೆ. ಹೀಗೆ ವಿಶ್ವಧರ್ಮವಾಗಬೇಕೆಂದು ಹೊರಟ ಸಮಾನತೆಯ ಮಧ್ಯೆ ಎಲ್ಲಿಯೋ ಮುರಟಿಕೊಂಡಿತು ನಿಜ.. (ಮಾಸ್ತಿ ವೆಂಕಟೇಶ ಅಯ್ಯಂಗಾರ್, ಧರ್ಮರಕ್ಷಣೆ)

ಹೀಗೇ ಮುಂದು ವರೆಯುತ್ತಾ, ಹೇಗೆ ಅದು ಮುರಟಿಹೋಯಿತು ಎನ್ನುವುದನ್ನು ಮುಂದಿನ ಸಾಲುಗಳಲ್ಲಿ ಸಷ್ಟಪಡಿಸುತ್ತಾರೆ:

ನಮ್ಮ ಧರ್ಮ ಐದು ಸಾವಿರ ವರ್ಷಗಳಿಗೂ ಹೆಚ್ಚಿನ ಕಾಲದಿಂದ ಬೆಳೆದು ಬಂದಿರುವ ಧರ್ಮ. ಇಷ್ಟು ದೀರ್ಘಕಾಲ ನಮ್ಮ ದೇಶದಲ್ಲಿ ಜೀವನದಲ್ಲಿ ಬಂದುಹೋದ ಇತಿಹಾಸ ಸಂಗತಿಗಳ ಪ್ರಭಾವದಿಂದ ಇದು ಕಾಲಕ್ಕೆ ತಕ್ಕಂತೆ ಮಾರ್ಪಟ್ಟು ಬೆಳೆಯುತ್ತಾ ಬಂದಿದೆ. ಸ್ಥಿತಿ ಬೇರೆಯಾದಂತೆ ಇದರ ವಿವರಗಳು ಬೇರೆಯಾದವು. ಎಷ್ಟೋ ಬಾರಿ ಇಂತಹ ಮಾರ್ಪಾಟು ಆಗಿ ವೇದದ ಆರಂಭದ ಸನಾತನ ಧರ್ಮ ಇಂದಿನ ನಮ್ಮ ಹಿಂದೂ ಧರ್ಮವಾಗಿದೆ. ಅಂದಂದು ಆದ ಮಾರ್ಪಾಟು ಅಂದಿನ ಜ್ಞಾಣ ಜನರಿಗೆ ಅವಶ್ಯಕವೆಂದು ಒಳ್ಳೆಯದು ಎಂದು ಕಂಡ ಅಷ್ಟರಿಂದಲೇ ಎಲ್ಲಾ ಕಾಲಕ್ಕು ಒಗ್ಗಬಹುದು ಎಂದು ನಿರೀಕ್ಷಿಸುವಂತಿಲ್ಲ. ಹೀಗಾಗಿ ಸನಾತನ ಧರ್ಮ ವೇದಗಳ ದಿನದ ತನ್ನ ತಿಳಿಯಾದ ರೂಪದಿಂದ ಇಂದಿನ ಬಗ್ಗಡದ ರೂಪಕ್ಕೆ ಬಂದಿದೆ. ಹಿಮಗಿರಿಯಿಂದ ಗಂಗೋತ್ರಿಯಲ್ಲಿ ಹೊರಕ್ಕೆ ಬರುವ ನೀರು ಹಿಮಕರಗಿ ಜಲ ಆದ ಪರಿಶುದ್ಧವಾದ ತೀಳಿ ನೀರು. ವಾರಣಾಸಿಗೆ ಬರುವಲ್ಲಿಗೆ ದಾರಿಯಲ್ಲಿ ಎಷ್ಟೋ ತೆರನ ನೀರು ಬಂದು ಅದರಲ್ಲಿ ಸೇರಿ ಗಂಗೆಯ ಹೊನಲು ಲಕ್ಷಣ ಬಹಳ ಬೇರೆ ಆಗಿರುತ್ತದೆ. ಮುಂದಿನ ಹರವಿನಲ್ಲಿ ಪಟ್ಟಣಗಳ ಕೊಳಚೆ ನೀರೆಷ್ಟೋ ಈ ಪ್ರವಾಹದಲ್ಲಿ ಸ್ಥಾನ ಪಡೆದು ಗಂಗೆ ಕಲಕತ್ತೆಗೆ ಬರುವ ವೇಳೆಗೆ ಗಂಗೋತ್ರಿಯ ತಿಳಿನೀರಿನಿಂದ ಮತ್ತಷ್ಟು

ಬೇರೆಯಾದ ಒಂದು ರೂಪವನ್ನು ಮುಟ್ಟಿರುತ್ತದೆ. ಎಲ್ಲ ಧರ್ಮಗಳು ಈ ವಿಷಯವನ್ನು ಹೋಲುತ್ತವೆ. ಹಿಂದೂ ಧರ್ಮ ಹೀಗೆಯೇ ಆಗಿದೆ. (171–172)

ತಿಳಿಯಾದ ನೀರು ಬಗ್ಗಡವಾದದ್ದು, ಆಚರಣೆಯಿಂದಲೇ ಮಾತ್ರ ಧರ್ಮದಿಂದಲ್ಲ. ಆದ್ದರಿಂದ ಆಚರಣೆಯನ್ನು ನೋಡಿ ಧರ್ಮವನ್ನು ಹೀಗಳೆಯುವುದು ಸರಿಯಲ್ಲ ಎನ್ನುತ್ತಾರೆ ಮಾಸ್ತಿ. ಹಿಂದೂ ಧರ್ಮದಲ್ಲಿ ಅನೇಕ ಕೆಟ್ಟ ಪದ್ಧತಿಗಳಿವೆ, ಅಸ್ಪೃಶ್ಯತೆ ಇದೆ ಎಂದು ವಾದಿಸುತ್ತ ಮುಂದಿನ ಸಾಲುಗಳನ್ನು ಬರೆಯುತ್ತಾರೆ:

ಹಿಂದೂ ಧರ್ಮದಲ್ಲಿ ಒಂದು ದೊಡ್ಡ ಪಂಗಡವನ್ನು ಅಸ್ಪೃಶ್ಯರೆಂದು ಬಹು ಕೆಟ್ಟ ರೀತಿಯಲ್ಲಿ ನಡೆಸಿಕೊಂಡಿರುವುದು ದಿಟ. ಇದು ಧರ್ಮದಲ್ಲಿಯ ಒಂದು ಕುಂದು: ಜಾತಿಯೆಂಬ ಭಾವನೆಯ ಒಂದು ಅತಿರೇಕ. ಮಠಾಧಿಪತಿಗಳು, ಪೀಠಾಧಿಪತಿಗಳು, ಸ್ವಾಮಿಗಳು, ಗುರುಗಳು ಎಲ್ಲಾರು ತಮ್ಮ ಸ್ಥಾನಕ್ಕೆ ತಕ್ಕಂತೆ ನಡೆಯುತ್ತಿಲ್ಲ. ಬಾಬಾಗಳು, ಸಾಧುಗಳು, ಸಂನ್ಯಾಸಿಗಳು ಜನರ ಮೌಢ್ಯವನ್ನು ಪೋಷಿಸಿ ಪ್ರಯೋಜನ ಪಡೆಯುತ್ತಿದ್ದಾರೆ ಅದಿಷ್ಟೂ ಒಪ್ಪಿಗೆಯ ಮಾತು. ಒಪ್ಪದ ಮಾತು.. ನಮ್ಮ ಆಚಾರದಲ್ಲಿ ಕಂಡಿರುವ ಕುಂದನ್ನು ನಮ್ಮ ಧರ್ಮದ ಕುಂದು ಎಂದಿರುವುದು (13)

ಈ ಆಚಾರದಲ್ಲಿ ಇರುವ ಕುಂದನ್ನು ಹೇಗೆ ನಿವಾರಿಸಬೇಕು ಎಂದರೆ, ಮಾಸ್ತಿಯವರ ಪ್ರಕಾರ:

ನನ್ನ ಮತ್ತು ನನ್ನಂಥವರ ವಿಜ್ಞಾಪನೆ, ಆಚಾರದಲ್ಲಿ ತಪ್ಪಿದ್ದೇವೆ ಎಂಬ ಕಾರಣದಿಂದ ಅದರ ತಳಹದಿಯಾದ ಧರ್ಮವನ್ನು ತೊರೆಯುವುದು ಜಾಣತನವಲ್ಲ ಎನ್ನುವುದು. ಸಾವಿರಾರು ವರ್ಷದ ಜೀವನದಲ್ಲಿ ಆಚಾರದಲ್ಲಿ ಸಾವಿರ ತಪ್ಪುಗಳು ಮೊಳೆತವು. ಮೆರೆದವು; ಬೆಳೆದವು; ಉಳಿದವು; ಅಳಿದವು. ನಮ್ಮ ಧರ್ಮ ಸನಾತನ ಧರ್ಮ. ಅದು ಸದಾ ಬೆಳೆಯುತ್ತಿರುವ ಧರ್ಮ ಬೆಳೆಯುತ್ತಿದೆ. ಇಗಲೂ ಬೆಳೆಯುತ್ತಿದೆ. ಮುಂದೂ ಬೆಳೆಯಬಲ್ಲದು. ಅದನ್ನು ಬೆಳೆಸುವ ಹೊಣೆ ಅದರ ವಲಯದಲ್ಲಿ ಜನ್ಮ ತಳೆದಿರುವ ಜನರದು. ನನ್ನ ಮಿತ್ರರು, ನಾನು, ಎಲ್ಲ ಇಂಥ ಜನ. ಈ ಹೊಣೆಯನ್ನು ನಾವು ಒಪ್ಪಿಕೊಳ್ಳಬೇಕು. ಇದನ್ನು ನಿರ್ವಹಿಸಲು ಯತ್ನ ಮಾಡಬೇಕು ಸನಾತನ ಧರ್ಮದ ಹೆಸರನ್ನು ಹೇಳುವ ಮನುಷ್ಯ ದಿಟದಲ್ಲಿ ವಿಚಾರವಂತನಾದರೆ ತನ್ನ ವಿಚಾರವನ್ನು ಆ ಧರ್ಮದಲ್ಲಿ ಸ್ಥಾಪಿಸಲು ಯತ್ನ ಮಾಡಬೇಕು. ಆಚಾರದಲ್ಲಿ ಬಂದಿರುವ ದೋಷಗಳನ್ನು ಬೇಸಾಯಗಾರ ಕಳೆಯನ್ನು ಕಿತ್ತು ಎಸೆದು ಪೈರಾದ ಬೆಳೆಯನ್ನು ಬೆಳೆಯುವಂತೆ ಯೋಗ್ಯವಾದ ಆಚಾರವನ್ನು ಬೆಳೆಸಬೇಕು. (14)

ಈ ನಿಟ್ಟಿನಲ್ಲಿ ಮಾಸ್ತಿಯವರು ಕಳೆಯಾಗಿ ಗುರುತಿಸುತ್ತಿರುವುದು, ಶಿವ ಮತ್ತು ವಿಷ್ಣುಗಳಲ್ಲಿ ಯಾರು ದೊಡ್ಡವರು ಎನ್ನುವ ವಿವಾದ, ಅರ್ಥಹೀನ ಆಚರಣೆಗಳು, ಕಥೆ ಕಾವ್ಯಗಳಲ್ಲಿ ಹೊಸದಾಗಿ ಸೇರಿರುವ ಪ್ರಕ್ಷೇಪಗಳು, ತಮಗೆ ಬೇಕಾದಂತೆ ಅರ್ಥವನ್ನು ತಿರುಚುವುದು, ತಮ್ಮ ಜಾತಿಗಳನ್ನು ಮೇಲು ಎಂದು ವಾದಿಸುವುದು, ಭೇದ ಭಾವ ಮಾಡುವುದು ಇತ್ಯಾದಿಗಳನ್ನು.

ಇವುಗಳನ್ನು ನಿವಾರಿಸಿ ಎಲ್ಲಾ ಜಾತಿ, ಪಂಗಡ, ಪಂಥಗಳ ಜನರು ಒಟ್ಟಿಗೆ, ಸೇರಿ ತಾವು ಹಿಂದೂ ಸಮಾಜದ ಭಾಗವೆನ್ನುವಂತೆ ಬಾಳಬೇಕಾದ ಆಗತ್ಯವನ್ನು ಒತ್ತಿ ಹೇಳುತ್ತಾರೆ. ಸುಧಾರಣಾವಾದಿಗಳಂತೆ, ಮೂರ್ತಿಪೂಜೆಯನ್ನು ತಳ್ಳಿ ಹಾಕುವುದಿಲ್ಲ. ಕ್ಷೇತ್ರದರ್ಶನಗಳನ್ನು ತಳ್ಳಿ ಹಾಕುವುದಿಲ್ಲ. ಬದಲಾಗಿ ಯಾವುದನ್ನು ಅತಿ ಮಾಡದೇ ತಮ್ಮೆಲ್ಲಾ ಪೂಜೆ ನಮಸ್ಕಾರಗಳು

ಒಂದೇ ಶಕ್ತಿಗೆ, ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತೇವೆ ಎಂದು ಮನದಟ್ಟು ಮಾಡಿಕೊಳ್ಳಬೇಕು ಎನ್ನುತ್ತಾರೆ. ಈ ನಿಟ್ಟಿನಲ್ಲಿ ಮಾಸ್ತಿ, ಸ್ವಾಮಿ ವಿವೇಕಾನಂದರ ವಿಚಾರ, ಬ್ರಹ್ಮಸಮಾಜ ಮತ್ತು ಆರ್ಯಸಮಾಜದ ವಿಚಾರಗಳನ್ನು ಮೇಳೈಸಿಕೊಂಡು ಹಿಂದೂ ಸಮಾಜವನ್ನು ಸುಧಾರಿಸಲು ಕರೆ ಕೊಡುತ್ತಾರೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತಮ್ಮ ಚಿಂತನೆ ರೂಪಿಸುತ್ತಿರುವುದು ಭಾರತೀಯ ಸಮಾಜ ಸಂಸ್ಕೃತಿಗಳನ್ನು ಕುರಿತು ಪ್ರಗತಿಪರ ಸೆಕ್ಯುಲರ್ ಬುದ್ಧಿಜೀವಿಗಳು ನಡೆಸುತ್ತಿರುವ ಟೀಕೆಗಳಿಗೆ ಪ್ರತಿಯಾಗಿ, ತಾವು ಬೆಳೆದ ಸಮಾಜ ಸಂಸ್ಕೃತಿಗಳಲ್ಲಿ ಅನೈತಿಕತೆ ತುಂಬಿದೆ ಎನ್ನುವ ಅಂಶವು ಅವರಿಗೆ ಒಪ್ಪಿತವಾಗುತ್ತಿಲ್ಲ. ಆದ್ದರಿಂದಲೇ ಕೇವಲ ಆಚಾರದಲ್ಲಿರುವ ಅಂಶಗಳನ್ನು ಟೀಕಿಸುವುದು ಸರಿಯಲ್ಲ. ಬದಲಾಗಿ ಈ ಸಂಸ್ಕೃತಿಯ ಉನ್ನತ ಅಂಶಗಳನ್ನು ಪರಿಗಣಿಸುತ್ತಿಲ್ಲ ಎನ್ನುವುದು ಮಾಸ್ತಿಯವರ ಅಭಿಪ್ರಾಯ.

ಇಲ್ಲಿ ನಾವು ಗಮನಿಸಬೇಕಾದ ಅಂಶ ಎಂದರೆ, ಮಾಸ್ತಿಯು ಪಾಶ್ಚಿಮಾತ್ಯರು ರೂಪಿಸಿದ ಹಿಂದೂ ಧರ್ಮದ ಚೌಕಟ್ಟನ್ನೇ ಬಳಸಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದಾರೆ. ಆದಾಗ್ಯೂ ಪಾಶ್ಚಿಮಾತ್ಯ ರಿಲಿಜನ್ನಿನ ಗ್ರಹಿಕೆಯು ಅವರಿಗೆ ದಕ್ಕಿದಂತೆ ಕಾಣುತ್ತಿಲ್ಲ. ಎಂದರೆ, ಪಾಶ್ಚಿಮಾತ್ಯರು ತಮ್ಮ ರಿಲಿಜನ್ನಿಗೆ ನೀಡುವ ಅರ್ಥ ಅಥವಾ ಕ್ರಿಶ್ಚಿಯನ್ ಸಂಪ್ರದಾಯ ಅವು ತಮ್ಮನ್ನು ತಾವು ಹೇಗೆ ಅರ್ಥ ಮಾಡಿಕೊಳ್ಳುತ್ತವೆ ಎನ್ನುವುದನ್ನು ಮುಖ್ಯವಾಗಿ ಪರಿಗಣಿಸಿಲ್ಲ. ಬದಲಾಗಿ, ರಿಲಿಜನ್ ಅನ್ನುವ ಧರ್ಮದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಾ ಬರುತ್ತಾರೆ. ಉದಾಹರಣೆಗೆ: ಮಾಸ್ತಿಯವರ ಪ್ರಕಾರ ಧರ್ಮ ಎಂದರೆ ಸಮುದಾಯಗಳ ನಡತೆ ರೂಪಿಸುವ ಭಾಗಗಳನ್ನು ಸೂಚಿಸುವ ಸಮುಚ್ಚಯ. ಈ ಅರ್ಥದಲ್ಲಿ ಮಾಸ್ತಿಯವರು ಧರ್ಮವನ್ನು ಸಂಸ್ಕಾರಗಳು ಎನ್ನುವ ಅರ್ಥದಲ್ಲಿ ಬಳಸುತ್ತಿರುವುದು ಕಾಣಿಸುತ್ತದೆ. ಆದ್ದರಿಂದಲೇ ಅವರು ಎಲ್ಲ ಧರ್ಮಗಳ ಸಾರವೂ ಒಂದೇ ಎನ್ನುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲ ರಿಲಿಜನ್ನಿನ ಗುರುಗಳು ಒಟ್ಟಿಗೆ ಸೇರಿ ಒಂದು ಸಮನ್ವಯವಾದ ಧರ್ಮವನ್ನು ಸ್ಥಾಪಿಸಬೇಕು ಎನ್ನುತ್ತಾರೆ. ಆದರೆ, ಕ್ರಿಶ್ಚಿಯನ್ ಮತ್ತು ಇಸ್ಲಾಂ ರಿಲಿಜನ್‌ಗಳು ತಮ್ಮ ರಿಲಿಜನ್‌ಗಳು ಗಾಡ್ ಅಥವಾ ಅಲ್ಲಾನಿಂದ ಬಳುವಳಿಯಾಗಿ ಬಂದದ್ದರಿಂದ ಅದನ್ನು ಮನುಷ್ಯರು ಕುಳಿತು ಬಗೆಹರಿಸಿಕೊಳ್ಳದ ವಿಚಾರವಾಗಿ ನೋಡುತ್ತಾರೆ. ಇದು ಭಾರತೀಯ ಸಂಪ್ರದಾಯಕ್ಕೆ ಸೇರಿದ ರಿಲಿಜನ್ನನ್ನು ತನ್ನ ಸಂಪ್ರದಾಯದ ಕಣ್ಣಿನಿಂದ ನೋಡಿದ ದೃಷ್ಟಿಕೋನಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಹೀಗೆ ಭಾರತೀಯ ಸಂಪ್ರದಾಯಗಳನ್ನು ಕ್ರಿಶ್ಚಿಯನ್ ರಿಲಿಜನ್ನಿನ ಚೌಕಟ್ಟಿನಲ್ಲಿ ಪರಿಭಾವಿಸುತ್ತಿದ್ದರೆ, ಭಾರತೀಯ ಸಂಪ್ರದಾಯದ ಜನರು ರಿಲಿಜನ್‌ಗಳನ್ನು ತಮ್ಮ ಸಂಪ್ರದಾಯದ ಹಿನ್ನೆಲೆಯಲ್ಲಿ ಭಾವಿಸುತ್ತಿರುವುದು ಕಾಣುತ್ತದೆ. ಈನಿಟ್ಟಿನಲ್ಲಿ ನಮ್ಮ ಪೂರ್ವಜರನ್ನು ಕುರಿತು ನಡೆಸುತ್ತಿರುವ ಅಧ್ಯಯನಗಳು ಅವರು ಪಾಶ್ಚಿಮಾತ್ಯ ಪರಿಕಲ್ಪನೆಗಳ ಹಿನ್ನೆಯಲ್ಲೆಯಲ್ಲಿ ಹೇಗೆ ವಿವರಿಸುತ್ತಿದ್ದಾರೆ ಎನ್ನುವುದನ್ನು ಪರಿಶೀಲಿಸುವುದರಿಂದ ಆರಂಭವಾಗುತ್ತದೆ.

ಉನ್ನತ ಶಿಕ್ಷಣದ ಧ್ಯೇಯವು ರಾಜಕೀಯ ಐಡಿಯಾಲಜಿಗಳ ಸಮರ್ಥನೆಯೇ?

ಡಾ. ಪ್ರವೀಣ ಟಿ.ಎಲ್.
ಉಪನ್ಯಾಸಕರು, ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ

ಪೀಠಿಕೆ

ಶಿಕ್ಷಣ ಕ್ಷೇತ್ರದ ಮೇಲೆ ರಾಜಕೀಯ ಪ್ರಭಾವದ ಕುರಿತ ಚರ್ಚೆಗಳು ಆಗಾಗ ನಡೆಯುತ್ತಿರುತ್ತವೆ. ಹಲವರು ಅದನ್ನು ಬೆಂಬಲಿಸಿದರೆ, ಕೆಲವರು ಅದನ್ನು ವಿರೋಧಿಸುವುದೂ ಉಂಟು. ಆದರೆ ಇತ್ತೀಚೆಗೆ ನಡೆದ ಕೆಲವು ಘಟನೆಗಳು ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿವೆ. ಕಾಲೇಜು, ವಿವಿಗಳಲ್ಲಿ ವಿದ್ಯಾರ್ಥಿ ಹೋರಾಟಗಳು ಹೆಚ್ಚುತ್ತಿದ್ದು, ಆ ಹೋರಾಟಗಳ ಸ್ವರೂಪವನ್ನು ಗ್ರಹಿಸಬೇಕಿದೆ. ಅವುಗಳು ಉನ್ನತ ಶಿಕ್ಷಣದ ದ್ಯೇಯೋದ್ದೇಶಗಳಿಗೆ ಪೂರಕವಾಗಿವೆಯೇ? ಅಥವಾ ರಾಜಕೀಯ ಪಕ್ಷಗಳ ಐಡಿಯಾಲಜಿಗಳನ್ನು ಸಮರ್ಥಿಸುವ ಕೆಲಸದಲ್ಲಿ ಮಗ್ನವಾಗಿದೆಯೋ? ಎಂಬ ಪ್ರಶ್ನೆಗಳು ಏಳುತ್ತವೆ. ಪ್ರಸ್ತುತ ಬರಹವು ಈ ಪ್ರಶ್ನೆಗಳನ್ನು ಬಿಡಿಸುವ ಯತ್ನ ನಡೆಸುತ್ತದೆ.

ವಿ.ವಿ.ಗಳಲ್ಲಿನ ಹೋರಾಟಗಳು ಮತ್ತು ಶಿಕ್ಷಣದ ಅರ್ಥ

ಭಾರತೀಯ ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಕುರಿತು ಹಲವು ಪ್ರಬಂಧಗಳೇ ಮಂಡನೆಯಾಗಿವೆ. ಆದರೆ ಇತ್ತೀಚಿನ ಕೆಲವು ಘಟನೆಗಳು ನಮ್ಮನ್ನು ಹೊಸ ಸಮಸ್ಯೆಯತ್ತ ಗಮನಹರಿಸುವಂತೆ ಮಾಡಿದೆ. ಅಂತಹ ಘಟನೆಗಳೆಂದರೆ; ರೋಹಿತ್ ವೇಮುಲಾ ಎಂಬ ಸಂಶೋಧನಾ ವಿದ್ಯಾರ್ಥಿಯ ಆತ್ಮಹತ್ಯೆಯ ಸುತ್ತ ನಡೆದ ಪ್ರಹಸನ; ಜೆ. ಎನ್. ಯು ನಲ್ಲಿ ವಿದ್ಯಾರ್ಥಿ ಪ್ರತಿಭಟನೆಯ ಹೆಸರಲ್ಲಿ ಭಾರತ ವಿರೋಧಿ ಘೋಷಣೆ. ನಂತರ ಕನ್ನಯ್ಯನೆಂಬ ವಿದ್ಯಾರ್ಥಿ ನಾಯಕನ ಉದಯ–ಬಂಧನ. ಇವರ ಪರವಾಗಿ ದೇಶದ ಹಲವಾರು ವಿವಿಗಳಲ್ಲಿ ಹೋರಾಟ. ಬೇರೆ ದೇಶದ ಕೆಲವು ಪಂಡಿತರು ಸಹ ಇವರನ್ನು ಬೆಂಬಲಿಸಿ ಸಹಿಮಾಡಿದ ಪತ್ರಗಳು ರವಾನೆಯಾದವು. ಆ ಪತ್ರಗಳ ತಿರುಳು ವಿ.ವಿ.ಗಳಲ್ಲಿ ವಿದ್ಯಾರ್ಥಿ ಹೋರಾಟಕ್ಕೆ ಅವಕಾಶಗಳಿರಬೇಕು. ಹತ್ತಿಕ್ಕಿದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯಹರಣವೆಂದಾಗುತ್ತದೆ. ಹಾಗೆಯೇ ದೆಹಲಿ ವಿವಿಯ ಗುರ್ಮೆಹೆರ್ ಕೌರ್ ನೀಡಿದ ತನ್ನ ತಂದೆಯನ್ನು ಕೊಂದಿರುವುದು ಪಾಕಿಸ್ತಾನವಲ್ಲ, ಯುದ್ಧ' ಎಂಬ ಹೇಳಿಕೆ ಪರ–ವಿರುದ್ಧದ ಹೋರಾಟಗಳು; ಈ ಮದ್ಯೆ ಅಷ್ಟೇನೂ ಸುದ್ದಿಯಾಗದ (ಮಾಡದ !) ಮತ್ತೊಂದು ಘಟನೆಯೆಂದರೆ ಶ್ರಿಂಗೇರಿ ಕಾಲೇಜಿನ ಎಬಿವಿಪಿ ವಿದ್ಯಾರ್ಥಿ ಅಭಿಷೇಕ್ ಆತ್ಮಹತ್ಯೆ.

ಈ ಎಲ್ಲಾ ಘಟನೆಗಳಲ್ಲಿಯೂ ಸಹ ವಿದ್ಯಾರ್ಥಿ ಸಂಘಟನೆಯ ಭಾಗವಾಗಿ, ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಅದರಲ್ಲಿ ಕೆಲವರಿಗೆ ಆತ್ಮಹತ್ಯೆ ಭಾಗ್ಯವಾದರೆ, ಇನ್ನು ಕೆಲವರಿಗೆ ಸ್ವಾತಂತ್ರ್ಯ ಹೋರಾಟಗಾರರ ಪಟ್ಟದ ಸೌಭಾಗ್ಯ. ಆದರೆ ಇಲ್ಲಿ ಗಮನಿಸಬೇಕಾದ

ವಿಚಾರವೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿಯ ಆಕ್ಟಿವಿಸಂ ಅವಶ್ಯಕವೇ? ಇದರ ಪರಿಣಾಮ ಗಳೇನು? ಕಾಲೇಜುಗಳು ಮತ್ತು ವಿವಿಗಳು ಹೋರಾಟದ ಅಡ್ಡಗಳಾಗಬೇಕೆ? ಹಲವರು ಇದಕ್ಕೆ ಪೂರಕವಾಗಿ ಉತ್ತರಿಸುತ್ತಾರೆ. ಈ ಉಲ್ಲೇಖ ಅದನ್ನು ಪುಷ್ಟೀಕರಿಸುತ್ತದೆ.

ನಮ್ಮ ದೇಶದ ಮತ್ತು ವಿಶ್ವದ ಇತಿಹಾಸದ ಪುಟಗಳನ್ನು ತಿರುಗಿಸಿದಾಗ, ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಇತರ ರಂಗಗಳಲ್ಲಿ ಛಾಪನ್ನು ಮೂಡಿಸಿರುವ ಅನೇಕರು ತಮ್ಮ ವಿದ್ಯಾರ್ಥಿ ಜೀವನದಲ್ಲೇ ರಾಜಕೀಯದ ಪ್ರಭಾವಕ್ಕೆ ಒಳಗಾದ ಅನೇಕ ನಿದರ್ಶನಗಳು ದೊರೆಯುತ್ತವೆ. ಪುರೋಗಾಮಿ ಚಿಂತನೆಗಳಿಗೆ ಸ್ಪಂದಿಸುತ್ತ, ಕ್ರಿಯಾಶೀಲರಾಗಿ, ನಂತರ ಸಮಷ್ಟಿಯ ಹಿತದಲ್ಲಿ ಅನುಪಮ ಕೊಡುಗೆಗಳನ್ನು ನೀಡಿದ ಅನೇಕ ಮಹನೀಯರು ಆಗಿಹೋಗಿದ್ದಾರೆ. ಪ್ರಸ್ತುತ ಅಂತಹ ಅನೇಕರು ನಮ್ಮ ನಡುವೆ ಇದ್ದಾರೆ. ಅಂತಹವರನ್ನು ರೂಪಿಸುವುದರಲ್ಲಿ ವಿದ್ಯಾರ್ಥಿ ಚಳವಳಿಗಳ ಪಾತ್ರ ಮಹತ್ತ್ವದ್ದು(ಮ.ಶ್ರೀ.ಮುರುಳಿಕೃಷ್ಣ–2013).

ವಿದ್ಯಾರ್ಥಿಗಳು ಕಲಿಕೆಯ(ಸಿದ್ಧಾಂತದ) ಭಾಗವಾಗುವುದರ ಜೊತೆಜೊತೆಗೆ ರಾಜಕೀಯ ಚಳವಳಿಗಳ ಭಾಗವೂ ಆಗುವುದು ಇಂದಿನ ತುರ್ತು. ಆಗ ಮಾತ್ರ ಮಹಾನ್ ರಾಜಕೀಯ ಧುರೀಣರನ್ನು ಹೊಂದಲು ಸಾಧ್ಯ ಎಂಬುದು ಅವರ ನಿಲುವು. ಈ ಅಂಶವನ್ನು ಮೇಲ್ನೋಟಕ್ಕೆ ಒಪ್ಪಬಹುದಾದರೂ ಸಹಾ, ಇಲ್ಲಿ ಅರ್ಥಮಾಡಿಕೊಳ್ಳಬೇಕಾಗ ಮತ್ತೊಂದು ಆಯಾಮವೂ ಇದೆ. ಅದನ್ನು ಈ ಲೇಖನವು ಚರ್ಚಿಸಲು ಪ್ರಯತ್ನಿಸುತ್ತದೆ. ಇಂದು ವಿದ್ಯಾರ್ಥಿಗಳು ನಿಜವಾಗಿಯೂ ಸಿದ್ಧಾಂತದ/ ಕಲಿಕೆಯ ಭಾಗವಾಗುತ್ತಿದ್ದಾರೆಯೇ? ಎಂಬುದನ್ನು ಸರಿಯಾಗಿ ಗ್ರಹಿಸುವ ಅಗತ್ಯತೆ ಇದೆ. ಅದಕ್ಕಿಂತ ಮುಂಚೆ ಶಿಕ್ಷಣವೆಂದರೆ ಏನು ಎಂಬುದರ ಕಡೆಗೆ ಸ್ವಲ್ಪ ಗಮನಹರಿಸುವುದಾದರೆ,

ಶಿಕ್ಷಣವೆಂದರೆ ನಮ್ಮ ಸುತ್ತಲಿನ ಪ್ರಪಂಚದ ಕುರಿತ ತಿಳುವಳಿಕೆಯನ್ನು ಸದಾ ಪರಿಷ್ಕರಿಸುತ್ತಾ, ನಮ್ಮ ತಪ್ಪು ತಿಳುವಳಿಕೆಗಳನ್ನು ಹಾಗೂ ಅದನ್ನಾಧರಿಸಿದ ಪರಿಹಾರಗಳನ್ನು ಮರುಚಿಂತನೆಗೆ/ ಆಲೋಚನೆಗೆ ಒಳಪಡಿಸುವುದೇ ಆಗಿರುತ್ತದೆ. ಆ ಮೂಲಕ ಸಮಾಜದ ಕುರಿತ ತಪ್ಪು ನಿರ್ಣಯಗಳಿಂದ ಕಳಚಿಕೊಳ್ಳುವುದು ಶಿಕ್ಷಣದ ಗುರಿ. ಸಮಾಜದ ಕುರಿತು ಹಾಗೂ ನಮ್ಮ ಸುತ್ತಮುತ್ತಲಿನ ಪ್ರಪಂಚದ ಕುರಿತು ರೂಪುಗೊಳ್ಳುವ ಹೊಸ ಹೊಸ ತಿಳುವಳಿಕೆಯೇ ಸಿದ್ಧಾಂತಗಳು. ಆದರೆ ವಿದ್ಯಾರ್ಥಿ ಸಂಘಟನೆಗಳು ಇಂತಹ ಸಿದ್ಧಾಂತಗಳಿಂಧ ಹುಟ್ಟಿದವೇ? ಖಂಡಿತ ಇಲ್ಲ. ಅವುಗಳು ಐಡಿಯಾಲಜಿ ಪ್ರೇರಿತ ಹೊರಾಟಗಳೇ ಆಗಿರುತ್ತವೆ. ಐಡಿಯಾಲಜಿಯನ್ನು ಕನ್ನಡದಲ್ಲಿ ಸಿದ್ಧಾಂತ ಎಂದು ತಪ್ಪಾಗಿ ಅನುವಾದಿಸಲಾಗುತ್ತದೆ. ಅದೇ ಪದವನ್ನು ಥಿಯರಿಗೂ ಬಳಸಲಾಗುತ್ತದೆ. ಥಿಯರಿ ಮತ್ತು ಐಡಿಯಾಲಜಿಗಳ ನಡುವೆ ಅಗಾಧ ವ್ಯತ್ಯಾಸಗಳಿವೆ. ಆ ವ್ಯತ್ಯಾಸವನ್ನು ಅರ್ಥಮಾಡಿಕೊಂಡರೆ, ಈ ಐಡಿಯಾಲಜಿ ಪ್ರಣೀತ ಸಂಘಟನೆಗಳು ಮತ್ತು ಹೋರಾಟಗಳು ಕಾಲೇಜು–ವಿಶ್ವವಿದ್ಯಾನಿಲಯಗಳಿಗೆ ಅವಶ್ಯಕವೋ ಇಲ್ಲವೋ ಎಂಬುದಕ್ಕೆ ಉತ್ತರ ಸಿಗುತ್ತದೆ.

ಸಿದ್ಧಾಂತಗಳು ಮತ್ತು ಐಡಿಯಾಲಜಿಗಳು

ಸಮಾಜದ ಕುರಿತ ನಮ್ಮ ತಿಳುವಳಿಕೆ ಹೆಚ್ಚಾಗಬೇಕೆಂದಾದರೆ, ಸಿದ್ಧಾಂತಗಳು ಸೃಷ್ಟಿಯಾಗಬೇಕು ಹಾಗೂ ಪರಿಷ್ಕರಣೆಗೆ ಒಳಪಡಬೇಕಾಗುತ್ತದೆ. ಯಾವುದೇ ಸಿದ್ಧಾಂತವು ತನ್ನ ವಿವರಣೆಯೇ ಅಂತಿಮ ಸತ್ಯ ಎಂಬ ಪ್ರತಿಪಾದನೆಯನ್ನು ಮಾಡುವುದಿಲ್ಲ. ಸೈದ್ಧಾಂತಿಕ

ವಿವರಣೆಯು ಫ್ಯಾಕ್ಟ್‌ಗಳನ್ನು ಆಧರಿಸಿರುತ್ತದೆ. ಸಿದ್ಧಾಂತ ಆಧರಿಸಿದ ಫ್ಯಾಕ್ಟ್‌ಗಳು ಬದಲಾದರೆ, ಸಿದ್ಧಾಂತಗಳು ತಮ್ಮ ವಿವರಣೆಯನ್ನು ಪರಿಷ್ಕರಿಸಬೇಕಾಗುತ್ತದೆ ಇಲ್ಲವೇ ಸಿದ್ಧಾಂತವೇ ದೋಷಯುತವಾದುದು ಎಂದು ಸಾಬೀತಾಗುತ್ತದೆ. ಹಾಗೆಯೇ ಈ ಸಿದ್ಧಾಂತಗಳಿಗೆ ಫ್ಯಾಕ್ಟ್‌ಗಳು ಅವಲೋಕನಗಳೇ ಆಧಾರವಾಗಿದ್ದು, ಸ್ವತಂತ್ರ ವಾಗಿರುತ್ತವೆ. ಅವುಗಳಿಗೆ ಯಾವುದೇ ವೈರಿ ಬಣಗಳ ಅಸ್ಥಿತ್ವ ಅನಿವಾರ್ಯವಲ್ಲ. ಆದರೆ ಐಡಿಯಾಲಜಿಗಳ ಸ್ವರೂಪ ಸಂಪೂರ್ಣ ಭಿನ್ನ.

ಐಡಿಯಾಲಜಿಗಳು ತನ್ನ ವಿವರಣೆಯೇ ಅಂತಿಮ ಸತ್ಯ ಎಂದು ಪ್ರತಿಪಾದಿಸುತ್ತವೆ. ಫ್ಯಾಕ್ಟ್‌ಗಳನ್ನು ಆಧರಿಸುವ ಬದಲು ಒಂದಿಷ್ಟು ನಂಬಿಕೆಗಳನ್ನು ಆಧರಿಸುವ ವಿವರಣೆಯಾಗಿರುತ್ತದೆ. ಈ ನಂಬಿಕೆಗಳಿಗೆ ಪೂರಕವಾಗಿರುವ ಘಟನೆಗಳು ಹೆಚ್ಚು ಪ್ರಿಯವಾಗಿರುತ್ತವೆ. ನಂಬಿಕೆಗೆ ವಿರುದ್ಧವಾಗಿರುವುದನ್ನು ದ್ವೇಷಿಸುವುದೊಂದೇ ಮಾರ್ಗ. ಹಾಗಾಗಿ ವೈರಿಬಣಗಳೇ ಇದರ ಅಸ್ತಿತ್ವದ ಪೂರ್ವ ನಿಬಂಧನೆಯಂತಿದೆ.

ವಿದ್ಯಾರ್ಥಿಗಳು ಸಿದ್ಧಾಂತಗಳ ಭಾಗವಾಗುವ ಬದಲು ಇಂತಹ ಐಡಿಯಾಲಜಿಗಳ ಭಾಗವಾದರೆ, ಜ್ಞಾನದ ಅಭಿವೃದ್ಧಿಗಿಂತ ಕಿತ್ತಾಟಗಳೇ ಹೆಚ್ಚಾಗುವ ಸಾಧ್ಯತೆ ಇದೆ. ಸಿದ್ಧಾಂತವಾದರೆ ನಮ್ಮ ಜ್ಞಾನವನ್ನು ಪರಿಷ್ಕರಿಸುತ್ತಾ, ಸುತ್ತಲಿನ ಪ್ರಪಂಚವನ್ನು ಸರಿಯಾಗಿ ಗ್ರಹಿಸುವ ಮಾರ್ಗಗಳನ್ನು ಒದಗಿಸುತ್ತದೆ. ಇದು ನಿಜವಾದ ಶಿಕ್ಷಣದ ಸಾರ್ಥಕತೆ ಕೂಡ. ಆದರೆ ವಿದ್ಯಾರ್ಥಿಗಳು ಐಡಿಯಾಲಜಿ ಪ್ರೇರಿತ ಚಳವಳಿಗಳ ಭಾಗವಾಗಿದ್ದು, ತನ್ನ ನಂಬಿಕೆಯೇ ಸತ್ಯ ಎಂಬ ಹಟಕ್ಕೆ ಬೀಳುತ್ತಾರೆ. ಅಷ್ಟೇ ಅಲ್ಲದೇ ಮತ್ತೊಂದು ಐಡಿಯಾಲಜಿಯನ್ನು ನಂಬುವವರನ್ನು ವೈರಿಗಳೆಂದು ನೋಡದೇ ವಿಧಿಯಿಲ್ಲ. ಹೀಗೆ ನಂಬಿಕೆಯಲ್ಲಿ ಆರಂಭವಾಗಿ ವೈರತ್ವ ಜಗಳ, ಸಂಘರ್ಷದಂತಹ ಮಾರ್ಗದಲ್ಲಿ ಚಲಿಸಿ, ಹತಾಶೆಯಲ್ಲೋ, ಆತ್ಮಹತ್ಯೆಯಲ್ಲೋ ಅವರ ಜೀವನ ಕೊನೆಯಾಗುತ್ತದೆ.

ಇಷ್ಟಕ್ಕೇ ಸೀಮಿತವಾಗುವುದಿಲ್ಲ. ಈ ಐಡಿಯಾಲಜಿಗಳು ಹೊಸಸಿದ್ಧಾಂತಗಳ ಉಗಮಕ್ಕೆ ಕೂಡ ಮಾರಕವಾಗಿ ಪರಿಣಮಿಸುತ್ತವೆ. ಸಮಾಜವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಅರ್ಥೈಸಿಕೊಂಡು ಅದನ್ನೇ ಅಂತಿಮ ಸತ್ಯ ಎಂಬ ಧೋರಣೆಯು ಸಮಾಜದ ಕುರಿತ ಹೊಸಚಿಂತನೆಗಳು ಹುಟ್ಟುವುದನ್ನು ಹತ್ತಿಕ್ಕಲು ಪ್ರಯತ್ನಿಸುತ್ತವೆ. ಹೊಸ ಜ್ಞಾನವನ್ನು ಸೃಷ್ಟಿಸಬೇಕಾದವರೆ, ಅದನ್ನು ತಡೆಯಲು ಮುಂದಾಗುವುದು ದುರಂತ. ಹೀಗಿರುವಾಗ ಶಿಕ್ಷಣ ಕ್ಷೇತ್ರಕ್ಕೆ ಸೆಕ್ಯುಲರ್ ಅಥವಾ ಹಿಂದುತ್ವ ಅಥವಾ ಮಾರ್ಕ್ಸಿಸ್ಟ್ ಐಡಿಯಾಲಜಿ ಪ್ರೇರಿತ ಸಂಘಟನೆಗಳು ಅವಶ್ಯಕವೇ? ಈ ಆಕ್ಟಿವಿಸಂ ಶಿಕ್ಷಣದಲ್ಲಿ ವೈಜ್ಞಾನಿಕ ಜ್ಞಾನವನ್ನು ಬೆಳೆಸುವ ಬದಲು ಅದನ್ನು ಹತ್ತಿಕ್ಕಲು ಪ್ರಯತ್ನಿಸುತ್ತದೆ.

ಇದಕ್ಕೆ ಇನ್ನೊಂದು ಆಯಾಮವೂ ಇದೆ. ಈ ಐಡಿಯಾಲಜಿಯನ್ನೇ ಆಧಾರವಾಗಿ ರಾಜಕೀಯ ಪಕ್ಷಗಳು ಅಸ್ಥಿತ್ವದಲ್ಲಿರುತ್ತವೆ. ಸಂಘಟನೆಯ ಮೂಲಕ ಕಾಲೇಜು–ವಿವಿಗಳೊಳಗೆ ರಾಜಕೀಯದ ಹಸ್ತಕ್ಷೇಪ ಶುರುವಾಗುತ್ತದೆ. ರಾಜಕೀಯದ ಹಸ್ತಕ್ಷೇಪವೂ ಇರುವುದರಿಂದ ಅಧ್ಯಯನ–ಸಂಶೋಧನೆಗಳು ರಾಜಕೀಯ ಪಕ್ಷಗಳ ಐಡಿಯಾಲಜಿಗಳನ್ನು ಬಲಪಡಿಸುವ ಕೆಲಸದಲ್ಲಿ ನಿರತವಾಗುವುದು ಅನಿವಾರ್ಯವಾಗಿ ಬಿಡುತ್ತದೆ. ಪಕ್ಷಗಳು ಸಮಾಜದ ಕುರಿತ ನಿರ್ದಿಷ್ಟ ಕಾಲಘಟ್ಟದ ತಿಳುವಳಿಕೆಯ ಬುನಾದಿ ಮೇಲೆ ನಿಂತಿದ್ದು, ಸಮಾಜದ ಕುರಿತ ತಿಳುವಳಿಕೆಯಲ್ಲಿ ಏರುಪೇರಾದರೆ, ಪಕ್ಷಗಳ ಅಸ್ತಿತ್ವಕ್ಕೆ ಧಕ್ಕೆ. ಹಾಗೂ ಅಂತಹ ತಿಳುವಳಿಕೆಯ ಮೇಲೆ ನಿಂತಿರುವ ಹೋರಾಟಗಳಿಗೂ ಅಪಾಯ ಕಟ್ಟಿಟ್ಟ ಬುತ್ತಿ. ಹಾಗಾಗಿ ಸಮಾಜದ

ಕುರಿತ ಹೊಸ ಸಿದ್ಧಾಂತಗಳನ್ನು ರೂಪಿಸುವ ಸಂಶೋಧನೆಗಳನ್ನು ಬೆಂಬಲಿಸುವ ಬದಲಿಗೆ ಮೊಟಕುಗೊಳಿಸಲು ಶತಾಯ ಗತಾಯ ಪ್ರಯತ್ನಿಸುತ್ತವೆ. ಅಂದರೆ ಶಿಕ್ಷಣ ಕ್ಷೇತ್ರವನ್ನು ಸರ್ಕಾರಗಳು, ರಾಜಕೀಯ ಪಕ್ಷಗಳು, ಈ ಹೋರಾಟಗಳು ತಮ್ಮ ಅಡ್ಡಗಳನ್ನಾಗಿ ಮಾಡಿಕೊಂಡು, ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತವೆ. ಅದರ ಫಲಶೃತಿಯೇ ಮೇಲಿನ ಕೆಲ ಅಹಿತಕರ ಘಟನೆಗಳು.

ಹಾಗಾಗಿ ಹೊಸ ಹೊಸ ಅಧ್ಯಯನ–ಸಂಶೋಧನೆಗಳ ಮೂಲಕ ಗೆದ್ದಲು ಹಿಡಿದಿರುವ ಶಿಕ್ಷಣ ಕ್ಷೇತ್ರವನ್ನು ಸುಧಾರಿಸುವ ಸವಾಲು ನಮ್ಮ ಮುಂದಿದೆ. ಆದರೆ, ಹಾಗೆ ಮಾಡಲು ಪ್ರೋತ್ಸಾಹಿಸಬೇಕಾದ ಸರ್ಕಾರಗಳೇ ಅವುಗಳ ವಿರುದ್ಧ ಸಮರ ಸಾರಿರುವುದು, ಹಾಗೂ ತಮ್ಮ ಐಡಿಯಾಲಜಿಗಳಿಗೆ ಪೂರಕವಾದ ಚಳವಳಿಗಳನ್ನು, ಹೋರಾಟಗಳನ್ನು ಕಾಲೇಜು–ವಿವಿಯೊಳಗೆ ಮಾಡುವಂತೆ ಪ್ರೋತ್ಸಾಹಿಸುತ್ತಿರುವುದು ವಿಪರ್ಯಾಸ. ಅಲ್ಲಿಯ ವಾತಾವರಣವನ್ನು ಅಹಿತಕರಗೊಳಿಸುವ ಜೊತೆಗೆ ನಮ್ಮ ತಿಳುವಳಿಕೆಯನ್ನು 100–200 ವರ್ಷಗಳಷ್ಟು ಹಿಂದೆ ಉಳಿಯುವಂತೆ ಮಾಡುತ್ತವೆ. ಖಂಡಿತವಾಗಿಯೂ ಇದು ಭಾರತೀಯ ಶಿಕ್ಷಣದ ಅವನತಿಯಲ್ಲದೇ ಬೇರೆನೂ ಅಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಮಾಡುವುದೆಂದರೆ, ಕಾಂಗ್ರೇಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಸೆಕ್ಯುಲರ್ ಐಡಿಯಾಲಜಿಯನ್ನು ಪಠ್ಯದಲ್ಲಿ ತುರುಕುವುದಾಗಲೀ, ಬಿ.ಜೆ.ಪಿ. ಅಧಿಕಾರ ಹಿಡಿದರೆ ಹಿಂದುತ್ವ ಐಡಿಯಾಲಜಿಯನ್ನ ಪಠ್ಯವನ್ನಾಗಿಸುವುದಾಗಲೀ ಅಲ್ಲ. ಬದಲಿಗೆ ಈ ಐಡಿಯಾಲಜಿಗಳು ಶಿಕ್ಷಣ ಕ್ಷೇತ್ರವನ್ನು ಪ್ರಭಾವಿಸದ ಹಾಗೆ ನೋಡಿಕೊಳ್ಳುವುದು ಹಾಗೂ ಈ ಐಡಿಯಾಲಜಿಗಳನ್ನು ಪ್ರಶ್ನಿಸುವ, ಅದಕ್ಕಿಂತ ಉತ್ತಮ ಸಿದ್ಧಾಂತಗಳನ್ನು ರೂಪಿಸುವ ಮುಕ್ತವಾತಾವರಣವನ್ನು ಕಲ್ಪಿಸುವುದು. ಆ ಮೂಲಕ ವಿದ್ಯಾರ್ಥಿಗಳು ಸಿದ್ಧಾಂತಗಳ ಭಾಗವಾಗಬೇಕೆ ಹೊರತು ಐಡಿಯಾಲಜಿಗಳ ಭಾಗವಾಗುವುದಲ್ಲ. ಐಡಿಯಾಲಜಿಗಳ ಭಾಗವಾಗಿ ಹೋರಾಟದಲ್ಲಿ ತೊಡಗಿಸಿಕೊಂಡರೆ ಅಧ್ಯಯನ ಮತ್ತು ಸಂಶೋಧನಾ ಕ್ಷೇತ್ರದ ಮೂಲ ಉದ್ದೇಶಕ್ಕೆ ವಿರುದ್ಧವಾದಂತೆ. ಜ್ಞಾನದ ಬೆಳವಣಿಗೆಯೇ ಈ ಕ್ಷೇತ್ರದ ಮೂಲ ಉದ್ದೇಶ ಎಂಬುದನ್ನು ಮರೆಯಬಾರದು.

ಕಡೆಯದಾಗಿ, ಶಿಕ್ಷಣ ಕ್ಷೇತ್ರದ ಸುಧಾರಣೆಯ ಅಗತ್ಯತೆ ನಮ್ಮ ಮುಂದಿರುವ ಸವಾಲು. ಆದರೆ ಯಾವ ರೀತಿಯ ಸುಧಾರಣೆ ಎಂದಾಗ ತಡಬಡಾಯಿಸುತ್ತೇವೆ. ಹೊಸ ಹೊಸ ಯಂತ್ರಗಳನ್ನು, ತಂತ್ರಗಾರಿಕೆಗಳನ್ನು ಅಳವಡಿಸುವುದೇ ಶಿಕ್ಷಣದಲ್ಲಿ ತರುವ ಬಹುದೊಡ್ಡ ಬದಲಾವಣೆ ಎಂದು ಹಲವರು ಭಾವಿಸಿದಂತಿದೆ. ಆದರೆ ನಮ್ಮ ಸಮಾಜವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಸಿದ್ಧಾಂತಗಳ ರಚನೆ ಹಾಗೂ ಆ ಹಿನ್ನೆಲೆಯಲ್ಲಿ ಈ ಹಿಂದೆ ರಚನೆಯಾಗಿರುವ ತಿಳುವಳಿಕೆಯಲ್ಲಿನ ಪರಿಷ್ಕರಣೆಗೆ ಅವಕಾಶ ಮಾಡಿಕೊಡುವುದು. ಅದಾಗ ಬೇಕಾದರೆ ರಾಜಕೀಯ ಪಕ್ಷಗಳು ಹಾಗೂ ಅಂತಹ ಪಕ್ಷಗಳಿಂದ ರೂಪುಗೊಂಡ ಸರ್ಕಾರಗಳು ವಿವಿಗಳನ್ನು ಪ್ರವೇಶಿಸದೇ ಇರುವುದು, ಹಸ್ತಕ್ಷೇಪ ಮಾಡದೇ ಇರುವುದು ಅಗತ್ಯ. ಆದರೆ ಇಂದಿನ ದಿನಗಳಲ್ಲಿ ವಿವಿಯ ಆವರಣಗಳು ರಾಜಕೀಯ ಅಖಾಡಗಳಾಗಿದ್ದು, ಜಾತಿ, ಧರ್ಮಗಳ ಹೆಸರಿನಲ್ಲಿ, ಪಕ್ಷಗಳ ಐಡಿಯಾಲಜಿಗಳ ಹಿನ್ನೆಲೆಯಲ್ಲಿ ಇನ್ನಿಲ್ಲದ ತಂತ್ರಗಾರಿಕೆಯನ್ನು ರೂಪಿಸಲಾಗುತ್ತಿದೆ.

ಆಧಾರ ಕೃತಿಗಳು

1. ಹೆಗಡೆ, ರಾಜಾರಾಮ್ ಮತ್ತು ಎ. ಷಣ್ಮುಖ. 2015. ವಚನಗಳ ಅಧ್ಯಯನದಲ್ಲಿ ಆಧುನಿಕರ ಪೂರ್ವಗ್ರಹಗಳು ಮತ್ತು ಅವುಗಳಾಚೆಗೆ. ಶಿರಸಿ: ನಿಲುಮೆ ಪ್ರಕಾಶನ.
2. ಆರ್. ಇಂದಿರಾ. ಏಪ್ರಿಲ್–1–2013. ಉನ್ನತ ಶಿಕ್ಷಣದ ಉನ್ನತೀಕರಣ–ಸಾಧ್ಯತೆಗಳು, ಬಾಧಕಗಳು. ಪ್ರಜಾವಾಣಿ–ಕನ್ನಡ ದಿನಪತ್ರಿಕೆ. ಪು. ಸಂ.–6
3. ಮ.ಶ್ರೀ. ಮುರುಳಿಕೃಷ್ಣ. 23. ಮಾರ್ಚ್.2013. ವಿ.ವಿಗಳು ಬರೀ ಕಲಿಕಾ ಕೇಂದ್ರಗಳೇ? ಸಂಗತ, ಪ್ರಜಾವಾಣಿ–ಕನ್ನಡ ದಿನಪತ್ರಿಕೆ. ಪು. ಸಂ–6.
4. ಷಣ್ಮುಖ.ಎ. 2012. ಪಕ್ಷಗಳಿಗೆ ಐಡಿಯಾಲಜಿಗಳ ಅಜೆಂಡಾಗಳರಬೇಕಲ್ಲವೇ?. ವಿಜಯವಾಣಿ, ಕನ್ನಡದಿನ ಪತ್ರಿಕೆ. ಡಿಸೆಂಬರ್ 18, ಪು. ಸಂ.– 6
5. ಅಶ್ವಿನ್ ಕುಮಾರ್, ಎ. ಪಿ. 2016 ಐಡಿಯಾಲಜಿ ಮತ್ತು ಶಿಕ್ಷಣ. ಪ್ರಜಾವಾಣಿ ಕನ್ನಡ ದಿನಪತ್ರಿಕೆ. 05, ಡಿಸೆಂಬರ್, ಪು. ಸ–6
6. ಸದಾನಂದ. ಜೆ.ಎಸ್. 2015. ಗೆಳೆಯರಾದ ಫಣಿರಾಜ್‌ರವರಿಗೆ. ವಚನ ಸಂವಾದ–ಪ್ರಜಾವಾಣಿ ಸಂಪಾದಿತ.

ಹಳೆಯ ಬಂಗಲೆಯೊಂದು
ಅದಕೆ ಬಾಗಿಲು ಎರಡು
ಒಳಬರಲು ಒಂದು
ಹೊರಡಲಿನ್ನೊಂದು

ಕನ್ನಡ ಗಾದೆಗಳ ಬಗ್ಗೆ

ಡಾ. ಬಿ.ವಿ. ಮಹೀದಾಸ
ನಿವೃತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗಾದೆಗಳ ಅಧ್ಯಯನಕ್ಕೆ ಸಾಂಸ್ಕೃತಿಕ, ಕಾಗ್ನಿಟಿವ್ ಸಿದ್ಧಾಂತದ ಹಿನ್ನೆಲೆ ಪೂರಕವಾಗುತ್ತವೆ. ಗಾದೆಗಳ ಅಧ್ಯಯನವು ಈಚೆಗೆ ತುಂಬ ಪ್ರಾಮುಖ್ಯ ಪಡೆದುಕೊಳ್ಳುತ್ತಿರುವ ಕ್ಷೇತ್ರ. ಇಲ್ಲಿ ಕನ್ನಡ ಗಾದೆಗಳ ಒಂದು ಸಣ್ಣಮಟ್ಟದ ಅಧ್ಯಯನ ಮತ್ತು ಇಂಗ್ಲಿಷ್ ಗಾದೆಗಳೊಂದಿಗೆ ಕನ್ನಡ ಗಾದೆಗಳ ತುಲನ–ಇವುಗಳನ್ನು ನೀಡಲು ಪ್ರಯತ್ನಿಸಿದ್ದೇನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಭಾರತೀಯ ಪರಂಪರೆಯಲ್ಲಿ ವೇದಕ್ಕೆ ಬಹುಮಹತ್ತ್ವವಿದೆ. ವೇದಗಳು ಪ್ರಪಂಚದ ಪ್ರಾಚೀನತಮ ಸಾಹಿತ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ; ಅವು ಪ್ರಭು ಸಂಮಿತೆಯಿಂದ ಜೀವನ ಮೌಲ್ಯಗಳನ್ನು ಬೋಧಿಸುವುವು ಮತ್ತು ಆದ್ದರಿಂದ ಆದೇಶ ಸ್ವರೂಪದಲ್ಲಿರುವುವು; ಅವು ಬೌದ್ಧಿಕವಾಗಿ ವಿಕಸಿತ ಮನಸ್ಸುಗಳಿಂದ ಬಂದ ವಿವರಣೆಗಳಾದುದರಿಂದ ಸುಳ್ಳಾಗಿರುವುದಿಲ್ಲ; ಅವು ಶಾಬ್ದಿಕವಾಗಿ ಕೂಡ ವ್ಯತ್ಯಾಸವಾಗದೆ ತಲೆಮಾರಿನಿಂದ ತಲೆಮಾರಿಗೆ ಉಳಿದು ಬಂದವಾಗಿದ್ದು ಸಾಂಸ್ಕೃತಿಕ ಮಹತ್ತ್ವದವಾಗಿವೆ; ಹಲವು ವೇದ ಮಂತ್ರಗಳು ಅತಿ ಸಂಕ್ಷಿಪ್ತವಾಗಿದ್ದು ಸೂತ್ರಸ್ವರೂಪದವಾಗಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿನಲ್ಲಿ ಗಾದೆಗಳೂ ಈ ಎಲ್ಲ ಗುಣಲಕ್ಷಣಗಳಿಂದ ನಿರ್ವಚಿತವಾಗಿವೆ ಎಂಬ ಧ್ವನಿ ಇದೆ. ಗಾದೆಗಳು ಅತಿಸಂಕ್ಷಿಪ್ತಮ ಹೇಳಿಕೆಗಳ ರೂಪದಲ್ಲಿದ್ದು ದಿನಚರಿಯ ಸ್ಪಷ್ಟ ಸನ್ನಿವೇಶದೊಡನೆ ಸಮನ್ವಯ ಸಾಧಿಸುತ್ತವೆ. ವೇದಗಳಂತೆಯೇ ಗಾದೆಗಳು ತಲತಲಾಂತರದಿಂದ ಇಂದಿಗೆ ವರ್ಗಾವಣೆಗೊಂಡಿರುವುವು ಮತ್ತು ಸಾಂಸ್ಕೃತಿಕ ಮಹತ್ತ್ವದವು – ಭಾಷಾ ವ್ಯತ್ಯಾಸಗಳಿಗೆ ಪಕ್ಕಾಗಿ ಶಾಬ್ದಿಕವಾಗಿ ಬದಲಾಗಿರಬಹುದಾದರೂ. ಪ್ರಪಂಚದ ಯಾವುದೇ ಭಾಷೆಯ ಗಾದೆಗೂ ಈ ಮಾತು ಅನ್ವಯಿಸುತ್ತದೆ ಎಂಬುದು ಆಶ್ಚರ್ಯವಾದರೂ ನಿಜ. ಗಾದೆಗಳು ಒಂದು ಭಾಷಾ ಸಮುದಾಯದವರಿಗೆ ಅಸ್ಮಿತೆಯನ್ನು ಒದಗಿಸುತ್ತವೆ. ಗಾದೆಗಳು ಸಾಮಾನ್ಯವಾಗಿ ನಿಜವಾದುವಾದರೂ ಯಾವಾಗಲೂ ಆಗಬೇಕೆಂದಿಲ್ಲ; ಅವು ಸಾಮಾನ್ಯವಾಗಿ ಸೂತ್ರಸ್ವರೂಪದವು ಆದರೆ ಯಾವಾಗಳೂ ಅಲ್ಲ(Mieder).

ಹೀಗೆಯೇ ಸಾರ್ವತ್ರಿಕವಾಗಿ ಅನ್ವಯವಾಗುವ ಇತರ ಕೆಲವಂಶಗಳೂ ಇವೆ ಗಾದೆಗಳು ವ್ಯಕ್ತಿಯೊಬ್ಬನ ಅನುಭವಾಭಿವ್ಯಕ್ತಿ ಮಾತ್ರವಲ್ಲ. ಒಂದು ಜನಸಮುದಾಯದ ಬಾಳಿನ ತಿರುಳಾಗಿ ಮಾರ್ಪಟ್ಟಿವೆ. ಅವುಗಳನ್ನು ಸಮುದಾಯದ ಅನುಭವಾಧಾರಿತ ಜಾಣ್ನುಡಿಗಳು ಎನ್ನಬಹುದು. ಅವು ಸಂದರ್ಭಾನುಸಾರ ವ್ಯಕ್ತಿಯ ಗುಣಾವಗುಣಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. (ಈ ಗುಣವನ್ನು ಅರ್ಥಸಂದಿಗ್ಧತೆ ಎಂದು ಕೆಲವೊಮ್ಮೆ ಕರೆಯುವುದಿದೆ). ಹೀಗಿರುವುದರಿಂದ ಗಾದೆಗಳು ಸಂಸ್ಕೃತಿ ನಿರ್ದಿಷ್ಟ ಎಂದು ಹೇಳುತ್ತಾರೆ. ಅವುಗಳನ್ನು ಮೌಲ್ಯಗಳ ಮತ್ತು ನಡೆದುಕೊಂಡು ಬಂದ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಒಂದು ಸಂಸ್ಕೃತಿಯಲ್ಲಿರುವ ಗಾದೆಯೊಂದು

ಅಕ್ಷರಶಃ ಇನ್ನೊಂದರಲ್ಲಿರುವುದು ಅಪುರೂಪ. ಆದರೆ ಅದರ ಸಮಾನಾರ್ಥದ ಗಾದೆ ಅಥವ ಗಾದೆಗಳು ಅನೇಕ ವೇಳೆ ಇರುತ್ತವೆ. "ಇಂತಹವು ಒಂದೇ ರೀತಿಯ ಮಾನಸಿಕ ಚಿತ್ರಗಳನ್ನೊಳಗೊಂಡಿದ್ದು ಸಾಂಸ್ಕೃತಿಕ ನಂಬಿಕೆಗಳ ವಿಭಿನ್ನತೆಯನ್ನು ತೋರಿಸುತ್ತವೆ; ಆದ್ದರಿಂದ ಮನುಷ್ಯ ತನ್ನ ಅನುಭವಗಳನ್ನು ಸಂಸ್ಕರಿಸಿ ಪ್ರಪಂಚವನ್ನು ಪರಿಕಲ್ಪಿಸಿಕೊಳ್ಳುವ ರೀತಿಯನ್ನು ವಿಶ್ಲೇಷಿಸಲು ಒಂದು ಉತ್ತಮ ಸಂಪನ್ಮೂಲವಾಗಿದೆ"(ಮೊರೆನೊ, ಪು1). ಗಾದೆಗಳು ಒಂದು ಸಂಸ್ಕೃತಿಯ ಜಾನಪದ ಜಾಣತನವನ್ನು ಪ್ರತಿನಿಧಿಸುವ ರೂಪಕಾಧಾರಿತ ಹೇಳಿಕೆಗಳು (ಕೊವೆಕ್ಸಸ್ 128) ಎಂಬ ಅಭಿಪ್ರಾಯವಿದೆ. ಅವುಗಳನ್ನುಪರಿಕಲ್ಪನೆಗಳ ಸಂಮ್ಮಿಳಿತಗಳು ಎಂಬ ರೂಪಕ-ಭೇದವನ್ನಾಗಿ ಪರಿಗಣಿಸುವುದು ಅರ್ಥೈಸಲು ಹೆಚ್ಚು ಪ್ರಯೋಜನಕಾರಿ ಎಂಬುದು ಇನ್ನೋಂದು ಅಭಿಪ್ರಾಯ (ಯೋಂಗ್ಸಿಯಾಂಗ್, ಫಾಕ್ಕೋನಿಯರ್‌ಮತ್ತು ಟರ್ನರ್). ಸಮ್ಮೇಳಗಳು ಎಂದು ಪರಿಗಣಿಸಿದರೆ ಸಾಕು, ರೂಪಕ ಪ್ರಭೇದವೋ ಅಲ್ಲವೋ ಎಂಬುದನ್ನು ಚರ್ಚಿಸಬೇಕಾಗಿಲ್ಲ ಎಂಬ ಅಭಿಪ್ರಾಯವೂ ಉಂಟು (ಸಲ್ಲಿವನ್ ಮತ್ತು ಸ್ವೀಟ್ಸ್ಟರ್). ಇವೆಲ್ಲ ಬೇರೆ ಬೇರೆ ಸಮಾಜಗಳಲ್ಲಿ ಗಾದೆಗಳ ಬಗ್ಗೆ ಇರುವ ಆಸಕ್ತಿಯನ್ನೂ ವಿಸ್ತಾರವಾದ ಚರ್ಚಾ ಸಾಹಿತ್ಯವನ್ನೂ ಅಭಿಪ್ರಾಯ ಬೇದಗಳನ್ನೂ ತೋರಿಸುತ್ತವೆ. ಹೀಗೆ ಗಾದೆಗಳು ಸಾರ್ವತ್ರಿಕ ಪ್ರಸ್ತುತೆ ಇರುವಂತಹವು. ಅವುಗಳ ವಿಶ್ಲೇಷಣೆ ಸಾಮಾನ್ಯವಾಗಿ ಮೂರು ದಾರಿಗಳಲ್ಲಿ ಸಾಗಿದೆ. ಈ ಪ್ರಬಂಧದಲ್ಲಿ ಈ ಮೂರನ್ನೂ (ಅಂದರೆ ಸಾಂಸ್ಕೃತಿಕ ಹಿನ್ನೆಲೆ, ರೂಪಕಗಳ ಕಾಗ್ನಿಟಿವ್ ಸಿದ್ಧಾಂತ ಮತ್ತು ಸಮ್ಮೇಳ ಅಥವ ಬ್ಲೆಂಡ್ ಸದ್ಧಾಂತ) ಇಲ್ಲಿ ಪರಸ್ಪರ ಪೂರಕಗಳನ್ನಾಗಿ ಬಳಸಿಕೊಳ್ಳಲಾಗಿದೆ. ಗಾದೆಗಳಲ್ಲಿ ಕೆಲವು ಸರಳ ಹೇಳಿಕೆಗಳು: ಉದಾ. ಮನಸ್ಸಿದ್ದರೆ ಮಾರ್ಗ. ಚಿಂತೆ ಇಲ್ಲದವನಿಗೆ ಸಂತೇಲೂ ನಿದ್ದೆ ಇತ್ಯಾದಿ. ಇವು ತಮ್ಮಷ್ಟಕ್ಕೇ ಅರ್ಥವಾಗುವಂತಹವು ಮತ್ತು ಯಾವುದೇ ವಿಶ್ಲೇಷಣೆಯ ಅಗತ್ಯವಿರುವುದಿಲ್ಲ. ಒಂದು ರೀತಿಯಲ್ಲಿ ಸಾರ್ವತ್ರಿಕ ಸತ್ಯಗಳನ್ನು ತಿಳಿಸುವ ಹೇಳಿಕೆಗಳಿವು.

ಗಾದೆಗಳಲ್ಲಿ ಪ್ರಾಣಿಗಳು ಮತ್ತು ಸಸ್ಯಗಳು ದೊಡ್ಡ ಪಾತ್ರವಹಿಸುತ್ತವೆ. ಮನುಷ್ಯರೇ ಪಾತ್ರಗಳಾಗಿರುವ ಗಾದೆಗಳೂ ಅನೇಕವಿವೆ. ಪ್ರಾಣಿಗಳು ಕೇಂದ್ರ ಪ್ರಜ್ಞೆಯಂತಿರುವುವೂ ಇವೆ. ಉದಾಹರಣೆಗೆ ನಾಯಿಗೆ ಹೇಳಿದರೆ ತನ್ನ ಬಾಲಕ್ಕೆ ಹೇಳ್ತಂತೆ ಎಂಬಂತಹ ಗಾದೆ-ಮಾತಿನಲ್ಲಿ ನಾಯಿಗೇ ನಾಯಕನ ಸ್ಥಾನ; ಇದು ನಾಯಿಯ ಒಂದು ಗುಣವನ್ನು ಕುರಿತಂತೆ ಕಂಡರೂ ನಿಜವಾಗಿ ಅದು ಮನುಷ್ಯ ವ್ಯವಹಾರಕ್ಕೇ ಸಂಬಂಧಿಸಿದ್ದು ಮತ್ತು ಇದು ಆ ಗಾದೆ ಪ್ರಯೋಗವಾಗುವ ಸಂದರ್ಭದಿಂದ ಸ್ಪಷ್ಟವಾಗುತ್ತದೆ. ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಎಂಬ ಗಾದೆಯಲ್ಲಿ ಪ್ರಾಣಿ ಸಸ್ಯಗಳೆರಡೂ ಪಾತ್ರವಹಿಸಿವೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂಬಲ್ಲಿ ಸಸ್ಯದ್ದೇ ಕಾರುಭಾರ. ಕುಣಿಯಲಾರದವ ನೆಲ ಡೊಂಕು ಎಂದ ಎಂಬ ಗಾದೆ-ಮಾತಿನಲ್ಲಿ ಮನುಷ್ಯನದೇ ಪ್ರಧಾನ ಪಾತ್ರ.

ರಿಚರ್ಡ್ ಹಾನೆಕ್ ಇವರ ಪ್ರಕಾರ Proverbs force people to synthesise at a high level in a totality of abstract medium (Honeck, p131). ಅಂದರೆ ಒಂದು ವಿಷಯವನ್ನು ಇನ್ನಾವುದರ ಜೊತೆಗೋ ಸಮನ್ವಯಿಸಿ ಅತ್ಯುನ್ನತ ಮಟ್ಟದಲ್ಲಿ ವಿಚಾರ ಮಂಥನ ಮಾಡುವಂತೆ ಗಾದೆಗಳು ಜನರನ್ನು ಒತ್ತಾಯಿಸುತ್ತವೆ. ಆದ್ದರಿಂದಲೇ ಗಾದೆಗಳು ಸಾಮಾಜಿಕವಾಗಿ ಪ್ರಸ್ತುತವಾಗಿರುವುವಷ್ಟೇ ಅಲ್ಲ, ಅವು ಸಮುದಾಯದ ಬೌದ್ಧಿಕ ಬೆಳವಣಿಗೆಗೂ ಕಾರಣವಾಗುತ್ತವೆ.

ಗಾದೆಗಳ ಕಾರ್ಯವು ಮುಖ್ಯವಾಗಿ ನಾಲ್ಕು: 1. ಅದು ಇನ್ನೊಬ್ಬರ ನಡವಳಿಕೆಯನ್ನು

ಟೀಕಿಸಬಹುದು 2. ಅದು ಇನ್ನೊಬ್ಬರಿಗೆ ಒಂದು ಸಂದೇಶವನ್ನು ನೀಡಬಹುದು 3. ವಾಸ್ತವವನ್ನು ನಿರೂಪಿಸಿ ಸಂದರ್ಭದ ನಡವಳಿಕೆಯ ಅನಿವಾರ್ಯತೆಯನ್ನು ಸೂಚಿಸಬಹುದು. 4. ಸ್ವನಿಯಂತ್ರಣದ ಆವಶ್ಯಕತೆಯನ್ನು ತಿಳಿಸಬಹುದು. ಗಾದೆಗಳ ಈ ಕಾರ್ಯವನ್ನು ವಿಶದೀಕರಿಸಲು ಮೇಲಿನ ಉದಾಹರಣೆಗಳೇ ಸಾಕಾಗುತ್ತವೆ. ಇತರ ಕೆಲವು ಉದಾಹರಣೆಗಳನ್ನೂ ನೋಡಬಹುದು: ಬಾಯೆಲ್ಲ ವೇದಾಂತ ಕೈಯೆಲ್ಲ ರಾದ್ಧಾಂತ (ಅಥವ ಹೇಳುವುದು ವೇದ ಹಾಕುವುದು ಗಾಳ) ಎಂಬಲ್ಲಿ ಸಮಾಜಕ್ಕೆ ಹೇಗೆ ಪ್ರಾಮಾಣಿಕವಾಗಿ ಸೇವೆಸಲ್ಲಿಸಬೇಕೆಂಬುದರ ಬಗ್ಗೆಯೇ ಯಾವಾಗಲೂ ಭಾಷಣ ಬಿಗಿಯುತ್ತಾ ಒಂದಲ್ಲೊಂದು ರೀತಿಯಲ್ಲಿ ತನ್ನ ತಿಜೋರಿಯನ್ನೇ ತುಬಿಸಿಕೊಳ್ಳುವ ಅಥವ ಸ್ವಾರ್ಥವನ್ನೇ ಸಾಧಿಸುವವರ ಬಗ್ಗೆ ಟೀಕೆ ಇದೆ; ನಾಯಿಯು ನಮ್ಮನ್ನು ಕಚ್ಚಿದರೆ ನಾಯಿಯನ್ನು ಕಚ್ಚಲಾಗುವುದೇ? ಎಂಬ ಗಾದೆಯಲ್ಲಿ ನಿಂದೆಗೆ ಪ್ರತಿನಿಂದೆ ಪರಿಹಾರವಲ್ಲವೆಂಬ ಸಂದೇಶವಿದೆ; ಬೆಲ್ಲವಿದ್ದಲ್ಲಿ ನೊಣಗಳ ಸಂತೆ ಎಂಬ ಗಾದೆ ವಾಸ್ತವವನ್ನು ತಿಳಿಸುತ್ತಾ ವ್ಯಕ್ತಿಯಲ್ಲಿರುವ ಸದ್ಗುಣಗಳನ್ನು ತೋರ್ಪಡಿಸುವಲ್ಲಿ ವಿವೇಚನೆ ಇಟ್ಟುಕೊಳ್ಳಬೇಕೆಂಬುದನ್ನು ಸೂಚಿಸುತ್ತದೆ; ಆಳಾಗಬಲ್ಲವ ಅರಸಾಗಬಲ್ಲ ಎಂಬ ಮಾತಿನಲ್ಲಿ ವೈಭವ–ಅಧಿಕಾರ–ಸಾಮರ್ಥ್ಯಗಳಿದ್ದಾಗ ಅಹಂಕಾರದಿಂದ ವರ್ತಿಸಿ ಇತರರನ್ನು ಶೋಷಿಸದೆ ತನ್ನನ್ನು ತಾನು ನಿಯಂತ್ರಿಸಿಕೊಂಡು ಸರಳತೆಯಿಂದ ಎಲ್ಲರೊಡನಿರಬೇಕೆಂಬ ಸೂಚನೆ ಇದೆ.

ಹಲವು ರೂಪಕಗಳು ಸಹಜವಾಗಿಯೇ ಗಾದೆಗಳಲ್ಲಿ ಬಳಕೆಯಾಗುತ್ತವೆ. ಕಾಗ್ನಿಟಿವ್ ಸಿದ್ಧಾಂತದ ಪ್ರಕಾರ ಇವುಗಳನ್ನು ವಿಶ್ಲೇಷಿಸಿವುದು ಗಾದೆಗಳನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲು ಬಹು ಸಹಾಯಕ. ಕಾಗ್ನಿಟಿವ್ ಸಿದ್ಧಾಂತದ ಪ್ರಕಾರ ರೂಪಕಗಳು ಕವಿಸೃಷ್ಟಿಗೋ ಕಾವ್ಯಗಳನ್ನು ಸುಂದರಗೊಳಿಸುವುದಕ್ಕೋ ಸೀಮಿತಗಳಲ್ಲ. ಅವು ಸಾಮಾನ್ಯ ಜನಮಾನಸದಲ್ಲಿ ನಿಬಿಡವಾಗಿರುವಂತಹವು. ಮನುಷ್ಯ ಈ ಪ್ರಪಂಚವನ್ನು ಗ್ರಹಿಸಲು ರೂಪಿಸಿಕೊಂಡ ಒಂದು ಉಪಕರಣವೇ ರೂಪಕ. ಉದಾಹರಣೆಗೆ ರಾಮಕೃಷ್ಣರನ್ನು ಸಂಧಿಸಿದ ನಂತರ ನರೇಂದ್ರನ ಜೀವನದ ದಿಕ್ಕೇ ಬದಲಾಯಿತು ಎಂಬ ವಾಕ್ಯವನ್ನು ಅರ್ಥಮಾಡಿಕೊಳ್ಳುವಾಗ ವಿಶೇಷ ಪ್ರಯತ್ನವಿಲ್ಲದೆ ಜೀವನವನ್ನು ಒಂದು ಪ್ರಯಾಣವನ್ನಾಗಿ ನಾವು ಪರಿಕಲ್ಪಿಸಿಕೊಳ್ಳುತ್ತೇವೆ. ಜೀವನ ಎಂಬುದು ಒಂದು ಅಮೂರ್ತ ಪರಿಕಲ್ಪನೆಯಾಗಿದ್ದು ಅದಕ್ಕೆ ದಿಕ್ಕು ಎಂಬುದು ಅರ್ಥವಾಗದ ಮಾತು. ಆದರೆ ನಮ್ಮ ಮನಸ್ಸುಗಳಲ್ಲೆಲ್ಲ ಜೀವನವು ಒಂದು ಪ್ರಯಾಣ ಎಂಬ ರೂಪಕ ಇರುವುದರಿಂದ ಇದು ಕೂಡಲೇ ಅರ್ಥವಾಗುತ್ತದೆ. ಪ್ರಯಾಣಕ್ಕೆ ಮುಂದೆ, ಹಿಂದೆ, ದಿಕ್ಕು ಬದಲಾವಣೆ ಎಲ್ಲವೂ ಇವೆ. ಆಡುವುದಕ್ಕಾಗಿ ನನ್ನಲ್ಲಿ ಸಮಯವಿಲ್ಲ ಎಂದಾಗಲೂ ಅಷ್ಟೆ. ಸಮಯವನ್ನು ನಾವು ನಮ್ಮಲ್ಲಿ ಇಟ್ಟುಕೊಂಡಿರುವ ಒಂದು ವಸ್ತುವನ್ನಾಗಿ ಕಲ್ಪಿಸಿ ಹೇಳುತ್ತಿದ್ದೇವೆ. ಅವನಿಗೆ ಸಿಟ್ಟೇರಿತು ಎನ್ನುವಾಗ ಥರ್ಮಾ ಮೀಟರಿನಂತಹ ಧಾರಕದಲ್ಲಿ ಒಂದು ದ್ರವವಾಗಿ ಸಿಟ್ಟು ಇದ್ದು ಏನೋ ಘರ್ಷಣೆಯ ಕಾರಣ ಅದು ಮೇಲೇರಿತು ಎಂಬಂತೆ ತಿಳಿಯುತ್ತೇವೆ. ನರಿ ಉಪಾಯಗಾರ ಎನ್ನುವಾಗ ಉಪಾಯ ಮಾಡುವ ಮಾನವ ಗುಣವನ್ನು ನರಿಗೆ(ಪ್ರಾಣಿಗೆ) ಆರೋಪಿಸುತ್ತೇವೆ. ಅಂದರೆ ಇಲ್ಲೆಲ್ಲ ಒಂದು ವಿಷಯವನ್ನು ಅಥವ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಇನ್ನೊಂದರ ಮೊರೆ ಹೋಗುತ್ತಿದ್ದೇವೆ. ಹೀಗೆ ಒಂದು ಪರಿಕಲ್ಪನೆ, ಭಾವನೆ ಅಥವ ಘಟನೆಗಳನ್ನು ಇನ್ನೊಂದರ ಸಹಾಯದಿಂದ ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಒಂದನ್ನು ಇನ್ನೊಂದು ಎಂದು ಅಭೇದಾತ್ಮಕವಾಗಿ ಅಂದುಕೊಳ್ಳುತ್ತೇವೆ. ಇದೇ ರೂಪಕ.

ನಮ್ಮ ಬದುಕಿನ ರೀತಿಯನ್ನು ನಾವು ಅರ್ಥ ಮಾಡಿಕೊಳ್ಳುವಾಗ ಅಥವ ಇನ್ನೊಬ್ಬರಿಗೆ ಹೇಳುವಾಗ ನಾವು ಒಂದನ್ನು ಇನ್ನೊಂದಾಗಿ ರೂಪಕಗೊಳಿಸುತ್ತೇವೆ. ಮೇಲಿನವೆಲ್ಲ ಉದಾ: ನಾವು ಜೀವನವನ್ನು ಪ್ರಯಾಣವಾಗಿ ರೂಪಕಗೊಳಿಸುತ್ತೇವೆ; ಸಮಯವನ್ನು ವಸ್ತುವನ್ನಾಗಿ ರೂಪಕಗೊಳಿಸುತ್ತೇವೆ; ಭಾವನೆಯನ್ನು (ಉದಾಹರಣೆಗೆ ಸಿಟ್ಟನ್ನು) ಧಾರಕದಲ್ಲಿರುವ ದ್ರವ ಅಥವ ಅನಿಲವನ್ನಾಗಿ ರೂಪಕಗೊಳಿಸುತ್ತೇವೆ. ಜೀವನ, ಸಮಯ, ಸಿಟ್ಟು, ನರಿಯ ಗುಣಸ್ವಭಾವ– ಇಂತಹವುಗಳು ಅಮೂರ್ತ ಸ್ವರೂಪದವಾಗಿದ್ದು ಅವುಗಳನ್ನು ಅರ್ಥಮಾಡಿಕೊಳ್ಳಲು ಹೀಗೆ ರೂಪಕಗೊಳಿಸುವುದು ಅಗತ್ಯವಾಗುತ್ತದೆ. (ಹೆಚ್ಚಿನ ವಿವರಗಳನ್ನು ರೂಪಕಗಳ ಸುತ್ತ ಎಂಬ ನನ್ನ ಪ್ರಬಂಧದಲ್ಲಿ ಕಾಣಬಹುದು). ಇವುಗಳಲ್ಲಿ ಕೆಲವು ಸಾರ್ವತ್ರಿಕವಾಗಿ ಪ್ರತಿ ವ್ಯಕ್ತಿಯ ಮನಸ್ಸಿನಲ್ಲಿ, ಇನ್ನು ಕೆಲವು ಒಂದು ಸಮುದಾಯದ ಎಲ್ಲ ವ್ಯಕ್ತಿಗಳ ಮನಃಪಟಲದಲ್ಲಿ ಒಂದೇ ರೀತಿಯಾಗಿ ರೂಪಕಗೊಂಡಿರುವುದು ಆಶ್ಚರ್ಯವೇ ಸರಿ.

ಗಾದೆಗಳೂ ರೂಪಕಗಳೇ ಎಂಬುದು ಒಂದು ಅಭಿಪ್ರಾಯವಷ್ಟೆ. ಗಾದೆಯು ಹಲವು ವಿಶಿಷ್ಟ ಸನ್ನಿವೇಶಗಳಿಗೆ ಅನ್ವಯವಾಗಬಲ್ಲ ಒಂದು ಸಾಮಾನ್ಯ ಅಥವ ಸಾರ್ವತ್ರಿಕ ಹೇಳಿಕೆ. ಆದ್ದರಿಂದ ಒಂದು ಗಾದೆಯ ಮೂಲಕ ನಾವೇನನ್ನು ಅರ್ಥಮಾಡಿಕೊಳ್ಳಬೇಕಿದೆ ಎಂಬುದು ತತಣ, ಅಂದರೆ ಗಾದೆಯ ಹೇಳಿಕೆಯಲ್ಲಿಯೇ, ಸ್ಪಷ್ಟವಿರುವುದಿಲ್ಲ. ಆದರೆ ಅದನ್ನು ಜನರು ಪ್ರಯೋಗಿಸುವ ಸನ್ನಿವೇಶ ನಾವು ಅರ್ಥಮಾಡಿಕೊಳ್ಳಬೇಕಾದ ಘಟನೆಯನ್ನು ಸ್ಪಷ್ಟಗೊಳಿಸುತ್ತದೆ. ಮತ್ತು ಗಾದೆಯು ಸಂದರ್ಭಾನುಸಾರ ಸ್ಪಷ್ಟವಾಗುತ್ತದೆ. ಹನಿಹನಿಗೂಡಿದರೆ ಹಳ್ಳ ತೆನೆತೆನೆ ಕೂಡಿದರೆ ಬಳ್ಳ ಎಂಬ ಗಾದೆ ಇದೆ. ನಾವು ಈ ಗಾದೆಯನ್ನು ನಿರ್ದಿಷ್ಟ ಸನ್ನಿವೇಶದಲ್ಲಿ ಪ್ರಯೋಗಿಸುತ್ತೇವೆ ಮತ್ತು ಪ್ರಯೋಗಿಸಿದ ಸಂದರ್ಭ ಈ ಗಾದೆಯಿಂದ ನಾವು ಹೇಳ ಬೇಕಾದುದನ್ನು ಸ್ಪಷ್ಟಗೊಳಿಸುತ್ತದೆ. ಹಾಗೆಂದು ಇದೊಂದು ಅರ್ಥಹೀನ ವಾಕ್ಯವೇನಲ್ಲ. ಅದಕ್ಕೆ ತನ್ನದೇ ಆದ ಅರ್ಥವೂ ಇದೆ. ಇಂತಹ ಅರ್ಥ ಸಂಸ್ಕೃತಿಯ ಹಿನ್ನೆಲೆಯಿಂದ ಬರುತ್ತದೆ. ಈ ವಾಕ್ಯದಲ್ಲಿ ಎರಡು ಭಾಗಗಳಿವೆ. ಹನಿಹನಿ ಕೂಡಿದರೆ ಹಳ್ಳ ಎಂಬುದು ಪೂರ್ವಾರ್ಧ, ಮೊದಲ ಭಾಗ. ಎರಡನೆಯ ಭಾಗ (ಅಂದರೆ ಉತ್ತರಾರ್ಧ) ಪೂರ್ವಾರ್ಧದಲ್ಲಿ ನಿರೂಪಿತ ವಾಸ್ತವದ ದೃಢೀಕರಣ; ಅದರಿಂದ ತೆಗೆದ ಅನುಮಾನವಾಗಿಯೂ(inference) ಅದನ್ನು ಪರಿಭಾವಿಸಬಹುದಾಗಿದೆ. ಹೀಗೆ ಗಾದೆಗೆ ತನ್ನಷ್ಟಕ್ಕೆ ತಾನೆ ಒಂದು ಅರ್ಥವಿದೆ ಮತ್ತು ಅದು ಸ್ಪಷ್ಟವಾಗಿಯೇ ಇದೆ. ಹೇಗೆ ಮಳೆಗಾಲದಲ್ಲಿ ಬೇರೆಬೇರೆ ಕಡೆಗಳಿಂದ ಹರಿದುಬಂದ ನೀರೆಲ್ಲ ಸೇರಿ ಒಂದು ಹಳ್ಳವಾಗುತ್ತದೆಯೋ ಹಾಗೆಯೇ ಕೆಲವೇ ಕಾಳುಗಳಿರುವ ಹಲವು ತೆನೆಗಳು ಸೇರಿ ಬಳ್ಳ(ಧಾನ್ಯವನ್ನು ಅಳೆಯಲು ಬಳಸುವ ದೊಡ್ಡ ಧಾರಕ ಅಥವ ಪಾತ್ರೆ) ತುಂಬುತ್ತದೆ ಎಂಬುದು ಸ್ಪಷ್ಟವಿರುವ ಅರ್ಥ. ಒಬ್ಬ ಸಣ್ಣ ವಯಸ್ಸಿನ ವ್ಯಕ್ತಿ ತನ್ನಲ್ಲಿರುವ ಧನವನ್ನು ಅಲ್ಪಅಲ್ಪವಾಗಿ ಅನಗತ್ಯವಾಗಿ ವ್ಯಯಿಸುತ್ತಿದ್ದಾನೆನ್ನಿ; ಆಗ ಒಬ್ಬ ಹಿರಿಯ ವ್ಯಕ್ತಿ ಬುದ್ಧಿಮಾತಾಗಿ ಈ ಗಾದೆಯನ್ನು ಹೇಳಬಹುದು. ಅಂದರೆ ನಾವು ಇಲ್ಲಿ ಎರಡನೆಯದಾಗಿ ಪ್ರಸ್ತಾವಿಸಿರುವ ಘಟನೆಯನ್ನು ಪ್ರಸ್ತುತ ಗಾದೆಯ ಮೂಲಕ ಅರ್ಥಮಾಡಿಕೊಳ್ಳುತ್ತೇವೆ. ಸಣ್ಣಸಣ್ಣ ಮೊತ್ತಗಳಲ್ಲಿ ವ್ಯಯಿಸುವ ಧನ ಅರ್ಥಮಾಡಿಕೊಳ್ಳ ಬೇಕಾದ ಲಕ್ಷ್ಯ. ಇದೊಂದು ಮಾನವ ವ್ಯವಹಾರ. ಇದನ್ನು ಅರ್ಥ ಮಾಡಿಕೊಳ್ಳಲು ನಾವು ಬಳಸುವುದು ಹನಿಹನಿ ಕೂಡಿ ಹಳ್ಳವಾಗುತ್ತದೆಂಬ ಮತ್ತು ತೆನೆತೆನೆ ಕೂಡಿ ಬಳ್ಳವಾಗುತ್ತದೆಂಬ ವಾಸ್ತವವನ್ನು. ಗಾದೆಯಲ್ಲಿ ನಿರೂಪಿತ ಮೂಲ ಘಟನೆಯಲ್ಲಿ ಸಣ್ಣ ಹನಿಗಳು, ಸಣ್ಣ ತೆನೆಗಳು, ಹಳ್ಳ ಮತ್ತು ಬಳ್ಳ ಇವೆ. ಗಾದೆ ಪ್ರಯೋಗವಾಗುವ ವಾಸ್ತವ ಘಟನೆಯಲ್ಲಿ ಇರುವ ಧನದ ಅಲ್ಪ ವ್ಯಯಗಳೊಂದಿಗೆ

ಹನಿ ಮತ್ತು ತೆನೆಗಳು ನಕ್ಷೀಕೃತವಾಗುತ್ತವೆ; ಹಳ್ಳ ಮತ್ತು ಬಳ್ಳಗಳು ದೊಡ್ಡ ಮೊತ್ತದ ಹಣದ ಚೀಲದೊಂದಿಗೆ ನಕ್ಷೀಕೃತವಾಗುತ್ತವೆ (ರೂಪಕಗಳಲ್ಲಿ ಕಂಡುಬರುವ ನಕ್ಷೆಗಳ ಬಗ್ಗೆ ರೂಪಕಗಳ ಸುತ್ತ ಎಂಬ ನನ್ನ ಪ್ರಬಂಧವನ್ನು ನೋಡಬಹುದು). ಸಣ್ಣಸಣ್ಣ ಮೊತ್ತಗಳನ್ನು ನಾವು ಎಗ್ಗಿಲ್ಲದೆ ಖರ್ಚು ಮಾಡುವುದನ್ನು ಬಿಟ್ಟು ಸಂಕಲಿಸಿದರೆ ಒಂದು ದಿನ ಅದು ದೊಡ್ಡ ಮೊತ್ತವಾಗುತ್ತದೆ, ಆಗ ಅದನ್ನು ಸತ್ಕಾರ್ಯಕ್ಕಾಗಿ ಬಳಸಬಹುದು; ಮತ್ತು ಹಣ ಸಿಕ್ಕಿದಂತೆಲ್ಲ ಖರ್ಚು ಮಾಡದೆ ಉಳಿಸುತ್ತಾ ಹೋಗಬೇಕು ಎಂಬುದು ಇದರ ಅಭಿಪ್ರಾಯವಾಗಿ ಮೂಡುತ್ತದೆ. ಹೀಗೆ ಗಾದೆ ಸನ್ನಿವೇಶದಲ್ಲಿ ಅರ್ಥವಾಗುತ್ತದೆ.

ಇಲ್ಲೆಲ್ಲ ಗಾದೆಯು ಒಂದು ಮೂಲ ಪರಿಧಿಯಂತೆ ವರ್ತಿಸುತ್ತದೆ ಮತ್ತು ಅದು ಪ್ರಯೋಗವಾಗುವ ಸಂದರ್ಭದ ಮನಷ್ಯ ನಡವಳಿಕೆ ಲಕ್ಷ್ಯ ಪರಿಧಿಯಾಗಿ ಅರ್ಥವಾಗುತ್ತದೆ. ಆದ್ದರಿಂದಲೇ ವಿಭಿನ್ನ ಸಂದರ್ಭಗಳಲ್ಲಿ ಗಾದೆಗಳು ವಿಭಿನ್ನವಾಗಿ ಅರ್ಥವಾಗುತ್ತವೆ. ಪ್ರಥಮ ಚುಂಬನಮ್ ದಂತಭಗ್ನಮ್ ಎಂಬ ಇನ್ನೊಂದು ಉದಾಹರಣೆಯನ್ನು ನೋಡಬಹುದು. ಇದು ವ್ಯಕ್ತಿಯೊಬ್ಬನು ಭಾವನಾತ್ಮಕವಾಗಿ ನೋವಿನ ಅನುಭವವನ್ನು ಹೇಳಿಕೊಳ್ಳಲು ಮತ್ತು ಆದ್ದರಿಂದ ಸಣ್ಣಮಟ್ಟದ ಭಾವನಾತ್ಮಕ ಸಂದರ್ಭಗಳಲ್ಲಿ ಭಾಗವಹಿಸಲು ಹೆದರುತ್ತಿರುವುದನ್ನು ಸೂಚಿಸಲು ಬಳಸಬಹುದು. ಅಥವ ಒಬ್ಬ ವ್ಯಕ್ತಿಯು ಪ್ರಾರಂಭಿಸಿದ ಉದ್ಯಮ ಇತ್ಯಾದಿಗಳಲ್ಲಿ ಪ್ರಾರಂಭದಲ್ಲಿಯೇ ವಿಫಲನಾದುದನ್ನು ಟೀಕಿಸಲು ಬಳಸಬಹುದು.

ಪ್ರತಿಯೊಂದು ಗಾದೆಯ ಹಿಂದೆ ಒಂದು ವಿಸ್ತೃತ ಕಥೆಯೇ ಇರುತ್ತದೆ ಎನ್ನಬಹುದು. ಅಥವ ಗಾದೆಯ ಹಿನ್ನೆಲೆಯಾಗಿ ಒಂದು ಕಥೆಯನ್ನು ಕಲ್ಪಿಸುವುದು ಅದರ ಅರ್ಥವನ್ನು ಸ್ಪಷ್ಟಪಡಿಸಲು ಒಂದು ಸಾಧನವೇ ಸರಿ. (ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗ ಗಾದೆಗಳನ್ನು ವಿಸ್ತರಿಸಿ ಬರೆಯುವುದು ಒಂದು ಪರಿಕ್ಷಾ ಪ್ರಶ್ನೆಯಾಗಿರುತ್ತಿತ್ತು). ಉದಾಹರಣೆಗೆ: ಊಟ ಆಯ್ತೇನೋ ಗುಂಡ ಎಂದರೆ ಮುಂಡಾಸು ಮುವತ್ತು ಮೊಳ ಅಂದ ಎಂಬುದೊಂದು ಗಾದೆ. ಈ ಗಾದೆಯ ಹಿನ್ನೆಲೆಯನ್ನು ಹೀಗೆ ಕಲ್ಪಿಸಿಕೊಳ್ಳಬಹುದು. ಒಬ್ಬ ಏನೂ ಕೆಲಸವಿಲ್ಲದ, ಕೆಲಸಕ್ಕೆ ಒಗ್ಗದ ಹುಡುಗ; ಅವನೊಮ್ಮೆ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ; ಕೆಲಸದಲ್ಲಿ ನಿರತನಾಗಿದ್ದ ಒಬ್ಬ ಹಿರಿಯ ಪರಿಚಿತ ಇವನನ್ನು ನೋಡಿದ; ಮಾತನಾಡಿಸೋಣವೆಂದು ಊಟವಾಯ್ತೇನೋ ಗುಂಡ ಎಂದು ಕೇಳಿದ; ಗುಂಡ ಆಯ್ತು ಅಥವ ಇಲ್ಲ ಎಂದು ಉತ್ತರಿಸುವುದಿಲ್ಲ; ಬದಲಾಗಿ ಉದ್ದವಾಗಿದ್ದ ಹಿರಿಯನ ಮುಂಡಾಸನ್ನು ನೋಡಿ 'ಮುಂಡಾಸು ಮುವತ್ತು ಮೊಳ' ಎಂದು ಉಡಾಫೆ ಹೊಡೆದು ನಡೆದೇ ಬಿಟ್ಟ. ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಹೇಳದ, ಯಾವಾಗಲೂ ಸುತ್ತು ಬಳಸಿಯೇ ಮಾತನಾಡುವ, ಒಂದು ಮಾತಿಗೆ ಹಲವು ಮಾತುಗಳಿಂದ ಅಸಂಬದ್ಧವಾಗಿ ಪ್ರತಿಕ್ರಿಯಿಸುವ ಸಂದರ್ಭಗಳಲ್ಲಿ ಈ ಗಾದೆ ಬಳಕೆಯಾಗುತ್ತದೆ. ಹೀಗೆ ಗಾದೆಗಳಿಗೆ ಕಥಾ ಹಿನ್ನೆಲೆ ಕಲ್ಪಿಸ ಬಹುದು.

ಗಾದೆಗಳಲ್ಲಿ ರೂಪಕಗೊಳಿಸುವ ಪ್ರಕ್ರಿಯೆ ಹಲವು ರೀತಿಯಲ್ಲಿ ನಡೆಯುತ್ತದೆ. ಸಾರ್ವತ್ರಿಕವಾಗಿ ಅನ್ವಯವಾಗುವಂತಹ ಹೇಳಿಕೆಗಳ ರೂಪವಾಗಿ ಅವು ಇದ್ದು ಎಷ್ಟೋ ನಿರ್ದಿಷ್ಟ ಸಂದರ್ಭಗಳಲ್ಲಿ ಅವುಗಳನ್ನು ಬಳಕೆ ಮಾಡಲು ಸಾಧ್ಯವಾಗುತ್ತದೆ. ಅಂದರೆ ಒಂದು ಸಾರ್ವತ್ರಿಕ ಸತ್ಯದಂತಿರುವ ಹೇಳಿಕೆಯನ್ನು ಅದು ಈ ನಿರ್ದಿಷ್ಟ ಸಂದರ್ಭಕ್ಕಾಗಿಯೇ ಮಾಡಿದ್ದು ಎಂಬಂತೆ ಬಳಸುವುದು. ಅಂತಹವನ್ನು ಸಾರ್ವತ್ರಿಕವು ನಿರ್ದಿಷ್ಟ ಎಂಬ ರೂಪಕ ಎಂದು ಪರಿಗಣಿಸಬಹುದು. (ಇಂತಹವನ್ನು ರೂಪಕಗಳೆಂದು ಪರಿಗಣಿಸಬೇಕಾಗಿಲ್ಲ ಎಂಬ ವಾದವೂ ಇದೆ). ಮನುಷ್ಯನನ್ನು ಪ್ರಾಣಿಯನ್ನಾಗಿ ರೂಪಕಗೊಳಿಸುವುದು, ಸಸ್ಯವನ್ನಾಗಿ

ರೂಪಕಗೊಳಿಸುವುದು ಇಂಹವು ಗಾದೆಗಳಲ್ಲಿ ಸಹಜ. ನಾಯಿ ಬೊಗಳಿದರೆ ದೇವ ಲೋಕ ಹಾಳಾಗದು ಎಂಬ ಗಾದೆ ಇದೆ. ಬೀದಿ ನಾಯಿಗೆ ಒಳ್ಳೆಯವರು ಕೆಟ್ಟವರು ಎಂಬುದರ, ಅಥವ ಇವರು ಒಳ್ಳೆಯ ಕಾರ್ಯ ಮಾಡಿದ್ದಾರೆ ಇನ್ನೊಬ್ಬರು ಕೆಟ್ಟ ಕಾರ್ಯ ಮಾಡಿದ್ದಾರೆ ಅಥವ ಮಾಡುತ್ತಾರೆ ಎಂಬುದರ ಪರಿಗಣನೆ ಇರುವುದಿಲ್ಲ. ತನಗೆ ಏನೋ ಅಪಾಯವಿದೆ ಎಂದು ದಾರಿಹೋಕರನ್ನು ನೋಡಿ ಬೊಗಳುತ್ತಿರುತ್ತದೆ. ಇದರಿಂದ ದಾರಿಗರಿಗೆ ಕೇಳುವ ಕಿರಿಕಿರಿ ಉಂಟಾದರೂ ಯಾರೇನೂ ಹೆದರಿ ಓಡುವುದಿಲ್ಲ. ಅವರೇನೂ ಕಳ್ಳರಲ್ಲವಲ್ಲ! ನಾಯಿಯ ಬೊಗಳುವಿಕೆಯೇ ಒಬ್ಬನನ್ನು ಕಳ್ಳನನ್ನಾಗಿಯೋ ಕೆಟ್ಟವನನ್ನಾಗಿಯೋ ಮಾಡುವುದಿಲ್ಲ. ಇದನ್ನು ಸಾರ್ವತ್ರಿಕವಾಗಿ ಅನ್ವಯವಾಗುವ ಒಂದು ಹೇಳಿಕೆಯಂತೆ ಗಾದೆ ನಿರೂಪಿಸುತ್ತದೆ. ಒಬ್ಬ ಸಜ್ಜನ ವಿದ್ವಾಂಸರನ್ನು ಅವನಿಗೆ ಸಿಗುವ ಗೌರವವನ್ನು ನೋಡಿ ಒಬ್ಬ ಕಾಳ ಸಂತೆಕೋರ ಅಸೂಯೆಯಿಂದ ನಿಂದಿಸಿದರೆ ನೋಡುಗರು ಈ ಗಾದೆಯನ್ನು ಹೇಳ ಬಹುದು. ಅಥವ ತನ್ನನ್ನು ಎದುರೆದುರೇ ವಿನಾಕಾರಣ ನಿಂದಿಸುತ್ತಿದ್ದರೆ ನಿಂದಕನಿಗೆ ತಾನು(ಓರ್ವ ಸಜ್ಜನ) ಈ ಮಾತನ್ನು ಬುದ್ಧಿಮಾತಾಗಿಯೂ ಹೇಳ ಬಹುದು. ಗಾದೆಯಲ್ಲಿ ನಾಯಿ ಎಂಬ ಮಾತಿದ್ದರೂ ಇದು ನಿಜವಾಗಿ ಮನುಷ್ಯನಿಗೆ ಅನ್ವಯವಾಗುವಂತಹದು ಇಲ್ಲಿ ನಾಯಿಯ ನಿಷ್ಠಾ ನಡವಳಿಕೆ ಅನುಲಕ್ಷಿಸಿಲ್ಲ; ನಾಯಿಯ ಹೀನ ಸ್ವಭಾವಗಳು ಅನುಲಕ್ಷಿತವಾಗಿವೆ. ಅನಾವಶ್ಯಕವಾಗಿ ನಿಂದಿಸುವುದು ಕೆಲವರ ಹೀನ ಸ್ವಭಾವವಾಗಿದ್ದು ಅದರಿಂದ ಶ್ರೇಷ್ಠ ಸ್ವಭಾವದ ಮನುಷ್ಯನಿಗೇನೂ ಕುಂದಾಗುವುದಿಲ್ಲ ಎಂಬುದೇ ಇಲ್ಲಿರುವ ಧ್ವನಿ. ಅನೇಕ ಗಾದೆಗಳಲ್ಲಿ ಹೀಗೆ ಮನುಷ್ಯನ ಸ್ಥಾನದಲ್ಲಿ ಪ್ರಾಣಿಯೊಂದನ್ನು ಬಳಸುವುದಿದೆ. ಅಂದರೆ ಮನುಷ್ಯನನ್ನು ಪ್ರಾಣಿಯನ್ನಾಗಿ ರೂಪಕಗೊಳಿಸಿ ಗಾದೆಗಳಲ್ಲಿ ಪ್ರಯೋಗಿಸುವುದು ಸಾಮಾನ್ಯ. ಹೀಗೆ ಮನುಷ್ಯನ ಗುಣಗಳನ್ನು ಪ್ರಾಣಿಗಳಿಗೆ ಆರೋಪಿಸುವ ಮೂಲಕ ಅಥವ ಪ್ರಾಣಿಗುಣವನ್ನು ಮನುಷ್ಯನಿಗೆ ಆರೋಪಿಸುವ ಮೂಲಕ ರೂಪಕಗೊಳಿಸುವ ಈ ಪ್ರಕ್ರಿಯೆಗೆ ಅಸ್ತಿತ್ವದ ಮಹಾಸರಪಳಿ ರೂಪಕವೆಂದು ಕರೆಯುವರು.

ಪರಿಕಲ್ಪನಾತ್ಮಕ ರೂಪಕಗಳೂ ಗಾದೆಗಳಲ್ಲಿ ಪ್ರಯೋಗವಾಗುತ್ತವೆ. ಮಾಡಿದವನ ಪಾಪ ಆಡಿದವನ ಬಾಯಲ್ಲಿ ಎಂಬ ಗಾದೆಯನ್ನು ತೆಗೆದುಕೊಳ್ಳಿ. ಸಾರ್ವತ್ರಿಕವು ನಿರ್ದಿಷ್ಟ ಎಂಬ ತತ್ವವು ಬೇರೆಲ್ಲ ಗಾದೆಗಳಂತೆ ಇದಕ್ಕೂ ಅನ್ವಯವೇ. ಅಲ್ಲದೆ ಪಾಪವನ್ನು ಒಂದು ಭಕ್ಷ್ಯದಂತೆ ಇಲ್ಲಿ ಬಳಸಿರುವುದು ಇನ್ನೊಂದು ವೈಶಿಷ್ಟ್ಯ ('ಮಾಡುವುದು' 'ಬಾಯಲ್ಲಿ'). ಪಾಪವೆಂಬ ಅಮೂರ್ತ ಪರಿಕಲ್ಪನೆಯನ್ನು ಇಲ್ಲಿ ಭಕ್ಷ್ಯವೆಂಬಂತೆ ರೂಪಕಗೊಳಿಸಲಾಗಿದೆ. ಬಾಳೊಂದು ಪಯಣ, ನೋಟವು ಸ್ಪರ್ಶ ತಿಳಿಯುವುದು ನೋಟ ಇಂತಹ ಪರಿಕಲ್ಪನಾತ್ಮಕ ರೂಪಕಗಳೂ ಗಾದೆಗಳಲ್ಲಿ ಬಳಕೆಯಾಗುತ್ತವೆ. ಬೆಕ್ಕು ಕಣ್ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ವಾ? ಎಂಬ ಗಾದೆಯಲ್ಲಿ ತಿಳಿಯುವುದು ನೋಟ ಎಂಬ ರೂಪಕ ಬಳಕೆಯಾಗಿದೆ. ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ಲ–ಈ ಗಾದೆಯಲ್ಲಿ ಏರುವುದು ಪ್ರಗತಿ, ಇಳಿಯುವುದು ವಿಗತಿ ಎಂಬ ರೂಪಕವಿದೆ. ಇದು ಜೀವನಕ್ಕೆ ಸಂಬಂಧಿಸಿದ್ದು ಬಾಳೊಂದು ಪಯಣವೆಂಬ ರೂಪಕದ ಭಾಗವಾಗಿದೆ. ಪಯಣದಲ್ಲಿ (ಜೀವನದಲ್ಲಿ) ಏರುವುದು ಪ್ರಗತಿ ಮತ್ತು ಇಳಿಯುವುದು ತದ್ವಿರುದ್ಧ.

ಗಾದೆಗಳನ್ನು ಅರ್ಥೈಸುವುದರಲ್ಲಿ ಈಚೆಗೆ ಬಳಕೆಗೆ ಬರುತ್ತಿರುವ ವಿಧಾನವೆಂದರೆ ಸಮ್ಮಿಳಿತಗಳ ಸಿದ್ಧಾಂತ(Theory of Blends). ಇದನ್ನು ರೂಪಕ ಸಿದ್ಧಾಂತದ ಇನ್ನೊಂದು ಮಗ್ಗಲು ಎನ್ನಬಹುದು. ಇದರ ಪ್ರಕಾರ ಗಾದೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯು

ಮೂರು ಹಂತಗಳನ್ನು ಒಳಗೊಂಡಿರುತ್ತದೆ. ಅವು ಯಾವುವೆಂದರೆ: ಸಂಯೋಜನೆ, ಸಂಪೂರ್ಣನೆ ಮತ್ತು ವಿಸ್ತರಣೆ. ಆಳಾಗ ಬಲ್ಲವ ಅರಸಾಗಬಲ್ಲ ಎಂಬ ಗಾದೆಯನ್ನು ಪರಿಗಣಿಸೋಣ. ಆಳು ಅರಸ ಎಂಬ ಎರಡು ಅಂಶಗಳಿಲ್ಲಿವೆ. ಆಳು ಎಂದೊಡನೆ ಮನಸ್ಸಿನಲ್ಲಿ ಮೂಡುವ ಚಿತ್ರಗಳು ಸೇವೆ ಮಾಡುವವನು, ಆದೇಶಗಳನ್ನು ಪಡೆಯುವವನು, ಇನ್ನೊಬ್ಬರನ್ನು ವಿರೋಧಿಸದವನು, ಬಡತನವನ್ನು ಸಹಿಸುವವನು ಇತ್ಯಾದಿ. ಇವೆಲ್ಲ ಮನಸ್ಸಿನ ಒಂದು ಭಾಗದಲ್ಲಿ ಸಂಗ್ರಹವಾಗಿವೆ ಎಂದು ಭಾವಿಸ ಬಹುದು. ಮತ್ತು ಆಳು ಎಂದೊಡನೆ ಮನಸ್ಸಿನ ಈ ಭಾಗವು ಕ್ರಿಯಾಶೀಲವಾಆಗುತ್ತದೆ. ಇದನ್ನು ಸಮ್ಮಿಳಿತಗಳ ಸಿದ್ಧಾಂತದಲ್ಲಿ ಒಂದು ಮಾನಸಿಕ ಅವಕಾಶ ಎಂದು ಕರೆಯುತ್ತಾರೆ. ಹೀಗೆಯೇ ಅರಸ ಎಂಬುದರ ಮಾನಸಿಕ ಅವಕಾಶ ಇನ್ನೊಂದಿದೆ. ಈ ಮಾನಸಿಕ ಅವಕಾಶದಲ್ಲಿ ಸೇವೆ ಮಾಡಿಸಿಕೊಳ್ಳುವವ, ಆದೇಶಗಳನ್ನು ನೀಡುವವ, ತನ್ನ ನಿರ್ಣಯಗಳನ್ನು ತಾನೇ ಮಾಡುವವ, ವೈಭವದಲ್ಲಿ ಜೀವಿಸುವವ ಇಂತಹವೆಲ್ಲ ಇವೆ. ಅರಸು ಎಂದೊಡನೆ ಈ ಮಾನಸಿಕ ಅವಕಾಶವು ಕ್ರಿಯಾಶೀಲವಾಗುತ್ತದೆ. ಆಳಾಗ ಬಲ್ಲವ ಅರಸಾಗ ಬಲ್ಲ ಎಂಬ ಇಡೀ ವಾಕ್ಯವನ್ನು ಉಚ್ಚರಿಸಿದೊಡನೆ ಈ ಎರಡರ ಅಂಶಗಳನ್ನು ಸೇರಿಸಿದ ಸಂಯೋಜನೆಯೊಂದು ಸಿದ್ಧವಾಗುತ್ತದೆ. ಇದನ್ನೂ ಸಂಯೋಜನೆಯ ಹಂತ ಎಂದು ಕರೆಯುತ್ತಾರೆ. ಈ ಸಂಯೋಜನೆಯಿಂದ ಸಾರ್ವತ್ರಿಕ ಮಾನಸಿಕ–ಅವಕಾಶವೊಂದನ್ನು ನಾವು ಸಿದ್ಧಮಾಡಿ ಕೊಳ್ಳುತ್ತೇವೆ. ಈ ಸಾರ್ವತ್ರಿಕ ಅವಕಾಶದಲ್ಲಿ ಆಳು: ಸೇವೆ ಮಾಡುವವನು, ಆದೇಶಗಳನ್ನು ಪಡೆಯುವವನು, ಇನ್ನೊಬ್ಬರನ್ನು ವಿರೋಧಿಸದವನು, ಬಡತನವನ್ನು ಸಹಿಸುವವನು, ಅರಸು: ಸೇವೆ ಮಾಡಿಸಿಕೊಳ್ಳುವವ, ಆದೇಶಗಳನ್ನು ನೀಡುವವ, ತನ್ನ ನಿರ್ಣಯಗಳನ್ನು ತಾನೇ ಮಾಡುವವ, ವೈಭವದಲ್ಲಿ ಜೀವಿಸುವವ ಈ ಎಲ್ಲ ಅಂಶಗಳೂ ಇರುತ್ತವೆ ಮತ್ತು ವಾಕ್ಯವನ್ನು ಕೇಳಿದೊಡನೆ ಈ ಸಾರ್ವತ್ರಿಕ ಅವಕಾಶವು ಕ್ರಿಯಾಶೀಲವಾಗುತ್ತದೆ. ಇದು ಎರಡನೆಯ ಹಂತ. ಮೊದಲೇ ಲಭ್ಯವಿರುವ ಅವಕಾಶಗಳ ಸಂಯೋಜಿತ ಸ್ವರೂಪ ಇಲ್ಲಿ ಸಿದ್ಧವಾಗುತ್ತದೆ. ಇದನ್ನು ಸಂಪೂರ್ಣನೆ ಎನ್ನಬಹುದು. ಸೇವೆ ಮಾಡುವುದು, ಇನ್ನೊಬ್ಬರನ್ನು ಒಪ್ಪುವುದು, ಆಡಂಬರವಿಲ್ಲದ ಸರಳತನ, ಒಟ್ಟು ಹಿತಕ್ಕನುಗುಣವಾಗಿ ತನ್ನದೇ ನಿರ್ಣಯ ತೆಗೆದುಕೊಳ್ಳುವವನು, ಇಂತಹ ಅಂಶಗಳನ್ನೊಳಗೊಂಡ ಸಮ್ಮಿಳಿತ ಸಿದ್ಧವಾಗುತ್ತದೆ. ಎರಡು ಪ್ರಾಥಮಿಕ ಮಾನಸಿಕ ಅವಕಾಶಗಳ ಸಂಯೋಜನೆಯಿಂದ (ಅಂದರೆ ಸಂಪೂರ್ಣನೆಯ ಹಂತದಿಂದ) ಸಮ್ಮೀಳಿತವು ಹೇಗೆ ಉಂಟಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಈ ರೀತಿಯ ಸಂಮಿಳಿತದಿಂದಾಗಿ ನಿರ್ದಿಷ್ಟ ಸಂದರ್ಭದಲ್ಲಿ ಗಾದೆಯು ತತಣ ಅರ್ಥವಾಗುತ್ತದೆ. ಈ ಮೂರು ಹಂತಗಳಲ್ಲಿ ಸಮ್ಮಿಳಿತ ಉಂಟಾಗುವ ಪ್ರಕ್ರಿಯೆಯನ್ನ ವಿದ್ವಾಂಸರೊಬ್ಬರು ಹೀಗೆ ವಿವರಿಸಿದ್ದಾರೆ: 1) by composition of the elements from the input spaces, 2) by completion, following a pre-existing structure available to the speaker, and 3) by further elaboration of the structure. This projection uses relations of identity, analogy, similarity, causality, change, time, intention, space, role, part and whole, or representation. If the proverb brings together two or more objects, it is easy to imagine that each of the objects could belong to a different input space (Jibir-Daura p8). ಕೈಕೆಸರಾದರೆ ಬಾಯಿಮೊಸರು ಎಂಬ ಗಾದೆಯನ್ನು ತೆಗೆದುಕೊಳ್ಳೋಣ. ಇಲ್ಲಿ 'ಕೆಸರು' ಮತ್ತು 'ಮೊಸರು' ಎಂಬ ಎರಡು ಕ್ಷೇತ್ರಗಳಿವೆ. ಕೆಸರು

ಕೈಗಳನ್ನು ಕೊಳೆ ಮಾಡುವಂತಹುದು; ಮಲೆನಾಡು ಪ್ರದೇಶದಲ್ಲಿ ಕೃಷಿ ಕೆಲಸ ಮಾಡುವಾಗ ಅನಿವಾರ್ಯ; ಕೆಲಸವನ್ನೊಳಗೊಂಡಿರುವುದರಿಂದ ಶ್ರಮ ಇಲ್ಲಿ ನಿಹಿತ. ಮೊಸರು ಉತ್ತಮ ಪೋಷಕಗುಣಗಳುಳ್ಳುದು; ತಿನ್ನುವಾಗ ರುಚಿ ನೀಡುವಂತಹುದು; ಸದನುಕೂಲ ತರುವಂತಹುದು. ಶ್ರಮ, ಕೈ ಕೊಳೆ, ಕೃಷಿ ಇವುಗಳೊಂದಿಗೆ ಪೋಷಕಾಂಶ, ರುಚಿ ಮತ್ತು ಅನುಕೂಲಗಳು ಸಮನ್ವಯಗೊಂಡು ಸಮ್ಮಿಳಿತ ಉಂಟಾಗುತ್ತದೆ. ಇದು ಒಂದು ರೀತಿಯ ಕಸಿ ಕಟ್ಟುವಿಕೆ ಇದ್ದಂತೆ. ಇಲ್ಲಿರುವ ಅಂಶಗಳಲ್ಲಿ ಕಾಣಬರದ ಹೊಸದೇ ಅರ್ಥವನ್ನು (ಕಸಿ ಮಾವಿನ ಹಣ್ಣು ಬೇರೆಯೇ ರುಚಿ ನೀಡುವಂತೆ) ಈ ಸಮ್ಮಿಳಿತ ಹೊರಡಿಸುತ್ತದೆ. ಕಷ್ಟ ಪಟ್ಟು ದುಡಿದರೆ ಸುಖದಾಯಕ ಪ್ರತಿಫಲ ಸಿಗುವುದೆಂಬುದು ಇಲ್ಲಿ ಧ್ವನಿತವಾಗುವ ಅಂಶ. ಗಾದೆಗಳನ್ನು ಅರ್ಥಮಾಡಿಕೊಳ್ಳಲು ಇಲ್ಲಿ ಹೇಳಿರುವ ಯಾವುದೇ ಒಂದಂಶ ಪೂರ್ಣ ಪರಿಣಾಮಕಾರಿ ಎನ್ನಲು ಬರುವುದಿಲ್ಲ. ಇವೆಲ್ಲವನ್ನು ಸಮ್ಮಿಳಿಸಿಕೊಂಡು ವಿಶ್ಲೇಷಿಸಿದಾಗ ಗಾದೆಯ ಅರ್ಥ ಮನಂಬುಗುತ್ತದೆ.

ಇತರ ಭಾಷೆಗಳಲ್ಲಿ ಬಹುಸಂಖ್ಯೆಯ ಗಾದೆಗಳು ಪ್ರಾಣಿಗಳನ್ನೊಳಗೊಂಡ ರೂಪಕ ಗಳನ್ನು ಬಳಸುತ್ತವೆ ಎಂಬ ಅಭಿಪ್ರಾಯವಿದೆ(Hien, p.2). ಕನ್ನಡದಲ್ಲಿ ಪರಿಸ್ಥಿತಿ ಬೇರೆ ಇರುವಂತೆ ಕಾಣುತ್ತದೆ. ಕನ್ನಡದಲ್ಲೊಂದು ಗಾದೆಗಳ ಸಂಗ್ರಹವನ್ನು ಉಳ್ಳಾಲ ನರಸಿಂಗರಾವ್ ಇವರು ಹತ್ತೊಂಬತ್ತನೆಯ ಶತಮಾನದಲ್ಲಿ ಸಂಕಲಿಸಿ ಹೊರತಂದರು. ಈ ಪ್ರಥಮ ಗಾದೆಗಳ ಸಂಗ್ರಹದಲ್ಲಿ ಒಟ್ಟು 60% ಗಾದೆಗಳಿದ್ದು ಇದರಲ್ಲಿ ಸಸ್ಯಗಳಿಗೆ ಸಂಬಂಧಿಸಿದ 30 ಗಾದೆಗಳು, ಪ್ರಾಣಿಗಳ ಪಾತ್ರವಿರುವ 80 ಗಾದೆಗಳು, ದೇವರ ಪಾತ್ರವಿರುವ 7 ಗಾದೆಗಳು ಮತ್ತು ಮನುಷ್ಯನದೇ ಪ್ರಧಾನ ಪಾತ್ರವಿರುವ 303 ಗಾದೆಗಳು ಇವೆ. ಹೀಗೆ ನಮ್ಮ ಭಾಷೆಯ ಗಾದೆಗಳಲ್ಲಿ ಮನುಷ್ಯರೇ ಪ್ರಧಾನ ಪಾತ್ರಗಳಿರುವಂತೆ ತೋರುತ್ತದೆ. ಅನಂತರದ ಸ್ಥಾನ ಪ್ರಾಣಿಸಂಬಂಧಿ ಗಾದೆಗಳಿಗೆ ಮತ್ತು ಅನಂತರ ಸಸ್ಯದವುಗಳಿಗೆ. ಎಲ್ಲ ಗಾದೆಗಳು ಸಾಮಾನ್ಯವಾಗಿ ಸಂಭಾಷಣೆಗಳಲ್ಲಿ ಉಪಯೋಗಕ್ಕೆ ಬರುವಂತಹವು. ಇವು ಜೊತೆಗಾರನ ಅಭಿಪ್ರಾಯಗಳನ್ನು ನಯವಾಗಿ ವಿರೋಧಿಸಲು, ಅವನನ್ನು ವಿಮರ್ಶಿಲು ಅಥವ ಅವನು ಸಣ್ಣವನಾಗಿದ್ದರೆ ಅವನನ್ನು ತಿದ್ದಲು ಉಪಯುಕ್ತವಾಗುತ್ತವೆ. ಹೀಗೆ ಸಾಂಸ್ಕೃತಿಕವಾಗಿಯೂ ಗಾದೆಗಳು ಮುಖ್ಯವಾಗುತ್ತವೆ.

ಇಲ್ಲಿ ಕೆಲವು ಅಪುರೂಪದ ಸಸ್ಯ ಸಂಬಂಧೀ ಗಾದೆಗಳನ್ನು ವಿಶ್ಲೇಷಣೆಗೆ ತೆಗೆದು ಕೊಂಡಿದ್ದೇನೆ. ಇಲ್ಲಿ ಬಳಕೆಯಾಗಿರುವ ವಸ್ತುಗಳಾದ 'ಅಕ್ಕಿ', 'ಅಡಿಕೆ', 'ಆನೆ' ಇಂತಹವೆಲ್ಲ ಭಾರತೀಯ ಪರಂಪರೆಯಲ್ಲಿ ಮತ್ತು ಕರುನಾಡ ಸಂಸ್ಕೃತಿಯಲ್ಲಿ ತಮ್ಮದೇ ಪ್ರಾಮುಖ್ಯವನ್ನು ಹೊಂದಿವೆ. ಹಾಗಾಗಿಯೇ ಈ ಗಾದೆಗಳ ಸಂಗ್ರಾಹಕರು (ಉಳ್ಳಾಲ ನರಸಿಂಗರಾಯರು) ನೀಡಿರುವ ಇಂಗ್ಲಿಷಿನ ಸಮಾನ ಗಾದೆಗಳಲ್ಲಿ ಈ ಪದಗಳಿಲ್ಲ; ಬದಲಾಗಿ ಬೇರೆಯೇ ಪದಗಳು ಕಾಣಿಸಿಕೊಳ್ಳುತ್ತವೆ. ಇಲ್ಲಿ ಇಂತಹ ಕೆಲವು ಗಾದೆಗಳನ್ನು ಆಯ್ದು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ಇವುಗಳಿಗಾಗಿ ತೆಗೆದ ನಿರ್ಣಯಗಳನ್ನ ಪ್ರಾತಿನಿಧಿಕ ಸ್ವರೂಪದವೆಂದು ಸ್ವೀಕರಿಸಬಹುದಾಗಿದೆ. ಇವು ಕನ್ನಡ ಮತ್ತು ಇಂಗ್ಲಿಷ್ ಗಾದೆಗಳ ವಿಭಿನ್ನತೆಯನ್ನು ತೋರಿಸುತ್ತವೆ. ಮೊದಲನೆಯದಾಗಿ

1 ಅಕ್ಕಿ ಎಂದರೆ ಪ್ರಾಣ ನೆಂಟರೆಂದರೆ ಜೀವ

[ಸ್ನೇಹಕ್ಕೆ ಸ್ನೇಹ, ಮೀನಿನ ಬುಟ್ಟಿಗೆ ಕೈಹಾಕಬೇಡ]

I love you well but touch not my pocket

ನೆಂಟರು ಮನೆಗೆ ಬರುತ್ತಿರಬೇಕು ಅವರ ಒಡನಾಟದಲ್ಲಿ ಸಂತೋಷ ಪಡಬಹುದು ಎಂಬುದು ಸಾಮಾನ್ಯವಾಗಿ ಎಲ್ಲರ ಆಸೆ. ಆದರೆ ಅವರನ್ನು ಉಪಚರಿಸಲು ಬೇಕಾದ ಸಂಪನ್ಮೂಲಗಳಿಲ್ಲದೆ ಇದ್ದರೆ ಮುಜುಗರಕ್ಕೀಡಾಗಬೇಕಾಗುತ್ತದೆ. ಹಿಂದೆ ಅಜ್ಜಿಯರು ಮಕ್ಕಳನ್ನು ಆಡಿಸುತ್ತಿದ್ದ ಒಂದು ಆಟ ಇದೇ ಭಾವನೆಗಳನ್ನು ವ್ಯಕ್ತ ಪಡಿಸುವುದಿತ್ತು.ಅಜ್ಜಿ ಪ್ರಶ್ನಿಸುತ್ತಾಳೆ ನೆಂಟರು ಬಂದರೆ ಜೀವ ಹೆಂಗಾಗತ್ತೆ? ಕೈಯನ್ನು ಕಿವುಚಿದಂತೆ ಅಭಿನಯಿಸುತ್ತಾ ಮಗು ಹೇಳ ಬೇಕು: ಹಿಂಗ್ಹಿಂಗಾಗತ್ತೆ. ಅಜ್ಜಿ: ಗಂಟಿಳಿಸಿದರು. ಮಗು ಎದೆಯ ಮೇಲೆ ಕೈಯಿಟ್ಟುಕೊಂಡು 'ಅಬ್ಬಾ'. ಊಟ ಆಯ್ತುಂತೆ: 'ಒಹೋ' ಹೋಗಿಬರ್ತಾರಂತೆ: 'ಸಂತೋಷ'. ಹೀಗೆ ಬಡತನದಲ್ಲಿರುವವರ ಮನೆಗೆ ನೆಂಟರು ಬಂದಾಗಿನ ಬವಣೆ ಮತ್ತು ಸಂತೋಷ ಹಾಗೂ ಅವರು ಹೊರಟು ನಿಂತಾಗ ಆಗುವ ಸಮಾಧಾನ ಇವೆಲ್ಲವೂ ಇಲ್ಲಿ ವ್ಯಕ್ತವಾಗಿವೆ. ಈ ಗಾದೆಯೂ ಅದೇ ಭಾವಗಳನ್ನು ಹೇಳುವಂತಹದು. ಇಲ್ಲಿ ಅಕ್ಕಿಯ ಪರಿಧಿಯಲ್ಲಿ ಜೀವನಾವಶ್ಕ ವಸ್ತುವಿನ ಪರಿಮಿತ ಲಭ್ಯತೆ, ಖರ್ಚು ಭರಿಸಲು ಕಷ್ಟಸಾಧ್ಯವಾಗಿರುವುದು, ಇರುವ ಸಂಪನ್ಮೂಲಗಳು ಪರಿಮಿತ ಕಾಲದವರೆಗೆ ಮಾತ್ರ ತಾಳಿಕೊಳ್ಳಲು ಶಕ್ಯವಿರುವುದು ಇತ್ಯಾದಿ ಇವೆ. ನೆಂಟರ ಪರಿಧಿಯಲ್ಲಿ ಪ್ರೀತಿವಾತ್ಸಲ್ಯ, ಜೊತೆಗೂಡಿ ಇರುವುದರಿಂದ ಲಭಿಸುವ ಸಂತೋಷ, ರಕ್ತ ಸಂಬಂಧಿಗಳನ್ನು ಬಿಟ್ಟಿರಲಾರದ ಕರ್ತವ್ಯ ಪ್ರಜ್ಞೆ ಇವು ಇವೆ. ಈ ಎರಡೂ ಪರಿಧಿಗಳು ನಮ್ಮ ಮನಸ್ಸಿನಲ್ಲಿ ಒಮ್ಮೆಗೇ ಕ್ರಿಯಾಶೀಲವಾಗುವುದರಿಂದ ಅವು ಸಮ್ಮಿಳಿತಗೊಳ್ಳುವು ಅನಿವಾರ್ಯವಾಗುತ್ತದೆ. ಒಂದು ಉತ್ತಮ ಸಂಮೇಳ ರೂಪುಗೊಳ್ಳುವುದೇ ನಮಗೆ ಗಾದೆಯನ್ನು ಅರ್ಥೈಸಲು ಮತ್ತು ಬಳಸಲು ಪರಚೋದಿಸುವ ಅಂಶ. ಇಂತಹ ಸಂಮೇಳವು ಸಾಧ್ಯವಾಗದಿದ್ದರೆ ಗಾದೆಯನ್ನು ಅರ್ಥೈಸುವಲ್ಲಿ ನಾವು ವಿಫಲರಾಗುತ್ತೇವೆ (ಟರ್ನರ್, ಪು5). ವೆರಡೂ ಪರಿಧಿಗಳು ಸಮ್ಮಿಳಿತಗೊಂಡ ಪರಿಧಿಯಲ್ಲಿ (ಇಲ್ಲಿ ಸಾರ್ವತ್ರಿಕ ಪರಿಧಿಯ ನಿರ್ವಚನವನ್ನು ಪ್ರತ್ಯೇಕವಾಗಿ ಹೇಳಿಲ್ಲ) ಪ್ರೀತಿ ವಾತ್ಸಲ್ಯ, ಕೂಡು ಸಂತೋಷ, ಕರ್ತವ್ಯ ಪ್ರಜ್ಞೆ, ಸಂಪನ್ಮೂಲ ಕೊರತೆ, ಸಹಿಸುವ ಕಷ್ಟ ಇವೆಲ್ಲವೂ ಇವೆ. ಈ ಸಮ್ಮಿಳಿತ ಪರಿಧಿಯು ನಿರ್ದಿಷ್ಟ ಸಂದರ್ಭವನ್ನು ಸಮರ್ಥವಾಗಿ ಅರ್ಥ ಮಾಡಿಸುತ್ತದೆ ಎಂಬುದು ಸಂಮೇಳ ಸಿದ್ಧಾಂತಕಾರರ ಅಭಿಪ್ರಾಯ. ಇಲ್ಲಿ ಅಕ್ಕಿ ಎಂದರೆ ಅಕ್ಕಿಯೇ ಆಗಬೇಕಿಲ್ಲ; ದುಡ್ಡು, ತನ್ನ ಸುಖ, ಹಂಚಿಕೊಳ್ಳಬೇಕಾದ ಸೌಲಭ್ಯಗಳು, ಪರಿಮಿತ ಸಂಪನ್ಮೂಲಗಳು ಇಂತಹವೆಲ್ಲ ಪರಿಧಿಯಲ್ಲಿ ಬರುತ್ತವೆ. ಹಾಗೆಯೇ ನೆಂಟರು ಎಂದರೂ ಸ್ನೇಹಿತರು, ಅತಿಥಿಗಳು, ಉಪಚರಿಸಲೇಬೇಕಾಗಿ ಬರುವ ಆಗಂತುಕರು ಇವರೆಲ್ಲರನ್ನೂ ಉದ್ದೇಶಿಸಿದೆ. ಹೀಗೆ ಇದು ನಿರ್ದಿಷ್ಟವು ಸಾರವತ್ರಿಕ ಎಂಬ ರೂಪಕವಾಗುತ್ತದೆ ಎಂಬುದು ಇನ್ನೊಂದು ಅಭಿಪ್ರಾಯ. ಇಲ್ಲಿ ಲಕ್ಷ್ಯ ಪರಿಧಿಯಲ್ಲಿ ಅಕ್ಕಿ, ನೆಂಟರು, ನೆಂಟರು ಬಂದಾಗಿನ ಕಷ್ಟ ಇವು ಇವೆ. ಮೂಲ ಪರಿಧಿಯಲ್ಲಿ ಸಂದರ್ಭದಲ್ಲಿ ವಿವಕ್ಷಿತ ವ್ಯಕ್ತಿ, ಅವನ ಮನೆಗೆ ಬಂದ ಅತಿಥಿ, ತನ್ನಲ್ಲಿರುವ ಅಲ್ಪ ಸಂಪನ್ಮೂಲವನ್ನು ಹಂಚಿಕೊಳ್ಳಬೇಕಾದ ಅನಿವಾರ್ಯತೆ ಇವು ಇವೆ. ಹೀಗಿದ್ದರೂ ಇಲ್ಲಿ ಪರಿಕಲ್ಪನಾತ್ಮಕ ರೂಪಕ ಪ್ರತಿಪಾದಕರ ಅಭಿಪ್ರಾಯ ಮತ್ತು ಸಂಮೇಳ ಸಿದ್ಧಾಂತಕಾರರ ಅಭಿಪ್ರಾಯಗಳು ಪರಸ್ಪರ ಬಹಿಷ್ಕೃತಗಳಾಗಿರದೆ ಪೂರಕಗಳಾಗಿವೆ ಎಂಬದು ಸ್ಪಷ್ಟ.

ಇದರ ಇಂಗ್ಲಿಷ್ ಸಮಾನಗಾದೆಯನ್ನು ಗಮನಿಸಬಹುದು. ಇದರಲ್ಲಿ ಅಕ್ಕಿಯೂ ಇಲ್ಲ, ನಂಟರೂ ಇಲ್ಲ. ಬದಲಾಗಿ ಪ್ರೀತಿ ಮತ್ತು ಜೇಬಿಗೆ ಕೈಹಾಕುವುದು ಇವೆ. ಅದೇ ಅರ್ಥವನ್ನು ಧ್ವನಿಸುತ್ತಿದ್ದರೂ, ಅದೇ ರೀತಿಯ ಸಂದರ್ಭಗಳಲ್ಲಿ ಬಳಸಬಹುದಾಗಿದ್ದಾದರೂ ಇಲ್ಲಿಯ ಒತ್ತು ಬೇರೆ. ವ್ಯಾಪಾರೀ ಮನೋಭಾವ ಇಲ್ಲಿ ಎದ್ದು ಕಾಣುವ ಅಂಶ. ಇದಕ್ಕೆ

ಸಮಾನಾರ್ಥಕವಾಗಿರುವ ಇನ್ನೊಂದು ಕನ್ನಡ ಗಾದೆಯಲ್ಲಿ ಜೇಬಿನ ಬದಲು ಮೀನಿನ ಬುಟ್ಟಿ ಇದೆ. ಹೆಚ್ಚು ಕಡಿಮೆ ಒಂದೇ ಅರ್ಥವಿರುವ ಈ ಭಿನ್ನ ರೂಪ ಗಾದೆಗಳು ಗಾದೆಗಳ ಸೃಷ್ಟಿ ಮತ್ತು ಬಳಕೆ ಹೇಗೆ ಸಂಸ್ಕೃತಿ ಮತ್ತು ನಾಗರೀಕತೆ ನಿರ್ದಿಷ್ಟ ವಾಗಿರುತ್ತವೆ ಎಂಬುದನ್ನು ಘನತರವಾಗಿ ವಿಶದೀಕರಿಸುತ್ತವೆ.

2 ಅಡಿಕೆ ಉಡಿಯಲ್ಲಿ ಹಾಕಬಹುದು, ಮರವಾದ ಮೇಲೆ ಕೂಡದು

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ

A colt you may break but an old horse you never can

Best to bend while a twig

ಎಲೆ ಅಡಿಕೆ ಬಾಳೆಹಣ್ಣು ಇಂಥವನ್ನು ಹಿರಿಯರು ಕಿರಿಯರಿಗೆ ಕೊಡುವಾಗ ಕಿರಿಯರ ಉಡಿಯಲ್ಲಿ ಹಾಕುವುದು ಸಂಪ್ರದಾಯ. ಅಡಿಕೆಯನ್ನು ಹೀಗೆ ಉಡಿಯಲ್ಲಿ ಹಾಕಬಹುದು. ಅಡಿಕೆ ಶ್ರೇಷ್ಠ ಆದ್ದರಿಂದ ಅಡಿಕೆ ಮರ ಇನ್ನೂ ಶ್ರೇಷ್ಠ ಎಂದು ಬಗೆದು ಅಡಿಕೆ ಮರವನ್ನು ಉಡಿಯಲ್ಲಿ ಹಾಕಲು ಸಾಧ್ಯವಿಲ್ಲ ಎಂಬುದು ಇಲ್ಲಿರುವ ವಾಚ್ಯಾರ್ಥ. ಸಾಮಾಜಿಕ ಸಂದರ್ಭದಲ್ಲಿ ಒಬ್ಬನಿಗೆ ನೋವು ಉಂಟಾದರೆ ಅದು ಸಣ್ಣ ಮಟ್ಟದ್ದಾದರೆ ಅದಕ್ಕೆ ಪ್ರತಿರೋಧ ಒಡ್ಡದೆ ಅಲಕ್ಷಿಸಿ ಸಂಬಂಧಗಳನ್ನು ಕಾಯ್ದುಕೊಳ್ಳಬಹುದು. ಆದರೆ ನೋವುಂಟು ಮಾಡಬೇಕೆಂದೇ ಮಾಡಿದ ದೊಡ್ಡ ಮಟ್ಟದ ನೋವನ್ನು ಸಹಿಸಿಕೊಳ್ಳ ಸಾಧ್ಯವಿಲ್ಲ. ಅದನ್ನು ಪ್ರತಿರೋಧಿಸಿ ಮುಂದೆ ಹಾಗಾಗದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಅಡಿಕೆ ತಿಂದು ಜೀರ್ಣಿಸಿಕೊಳ್ಳಬಹುದಾದ್ದು; ಅಡಿಕೆ ಮರ ತಿನ್ನುವಂತಹದಲ್ಲ ಮತ್ತು ಅಂತಹ ಅಡಿಕೆಗಳ ರಾಶಿಯನ್ನೇ ನಾಳೆ ನೀಡುವಂತಹದು. ಇಲ್ಲಿ ಸಸ್ಯಗಳು ಪ್ರಾಣಿಗಳು ಎಂಬ ಮತ್ತು ನಿರ್ದಿಷ್ಟವು ಸಾರ್ವತ್ರಿಕ ಎಂಬ ರೂಪಕಗಳು ಬಳಕೆಯಾಗಿವೆ. ಅಡಿಕೆಗೆ ಸಂವಾದಿಯಾಗಿ ಸಣ್ಣ ನೋವು ಸಮಾನ ಉಪಕಾರಗಳು ಇಂತಹವೂ ಮರಕ್ಕೆ ಸಂವಾದಿಯಾಗಿ ಇವುಗಳ ಬೃಹತ್–ರೂಪಗಳೂ ಇವೆ. ಮರದ ಬೃಹತ್–ರೂಪದಿಂದಾಗಿ ಅಡಿಕೆಯಂತೆ ಕೈಯಲ್ಲಿ ಹಿಡಿಯಲಾಗದು.

ಇಂಗ್ಲಿಷ್ ಸಮಾನಾರ್ಥಕ ಗಾದೆಗಳನ್ನು ಗಮನಿಸಿ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ಎಂಬುದಕ್ಕೆ Best to bend while a twig ಎಂಬುದು ಭಾಷಾಂತರವೇ ಆಗಿದೆ. ಸಸ್ಯಗಳು ಪ್ರಾಣಿಗಳು ರೂಪಕದಿಂದ ಇದು ಮನುಷ್ಯರಿಗೆ ಅನ್ವಯವಾಗುತ್ತದೆ ಮತ್ತು ಸಾರ್ವತ್ರಿಕವು ನಿರ್ದಿಷ್ಟ ರೂಪಕದಿಂದ ಇದು ಗಾದೆಯು ಅದನ್ನು ಬಳಸಿದ ಸಾಮಾಜಿಕ ಸಂದರ್ಭದಲ್ಲಿ ಅರ್ಥವಾಗುತ್ತೆ. ಪಾಶ್ಚಾತ್ಯ ಸಂದರ್ಭದಲ್ಲಿಯೂ ಭಾರತೀಯ ಪರಂಪರೆಯಲ್ಲಿಯೂ ಸಸ್ಯಗಳಿಗಿರುವ ಸಮಾನ ಪ್ರಾಮುಖ್ಯ ಮತ್ತು ಸಮಾನ ಪರಿಕಲ್ಪನೆಗಳನ್ನೂ ಇದು ಎತ್ತಿ ತೋರಿಸುತ್ತದೆ.

ಇನ್ನೊಂದು ಸಮಾನಾರ್ಥಕ ಗಾದೆಯಾದ a colt you may break but an old horse you never can ಎಂಬುದರ ಪರಿ ಬೇರೆ. ಕುದುರೆ ಮರಿಯನ್ನು ಪಳಗಿಸಬಹುದು; ದೊಡ್ಡ ಕುದುರೆಯನ್ನು ಪಳಗಿಸಲಾದೀತೆ ಎಂಬುದು ಇದರ ಭಾಷಾಂತರ. ಉಳುವುದು, ಗಾಡಿಗೆ ಕಟ್ಟುವುದು ಇತ್ಯಾದಿ ಕಾರ್ಯಗಳಿಗೆ ಇಂಗ್ಲೆಂಡಿನಂತಹ ದೇಶದಲ್ಲಿ ಕುದುರೆಗಳನ್ನು ಬಳಸುತ್ತಾರೆ. ಆದ್ದರಿಂದ ಅಲ್ಲಿಯ ಸಂಸ್ಕೃತಿಯಲ್ಲಿ ಕುದುರೆಗಳಿಗೆ ವಿಶೇಷ ಸ್ಥಾನ. ಕುದುರೆಯನ್ನು ನೀರಿಗೊಯ್ಯಬಹುದು ನೀರ್ಗುಡಿಸಲಾದೀತೆ ಎಂಬ ಇನ್ನೊಂದು ಗಾದೆಯೂ ಈ ಅಂಶವನ್ನು ಪುಷ್ಟೀಕರಿಸುತ್ತದೆ. ಇದಕ್ಕೆ ಸಮಾನಾನುವಾದ ಕನ್ನಡದಲ್ಲಿಲ್ಲ. ಭಾರತೀಯ ಪರಂಪರೆಯಲ್ಲಿ

ತತ್ಸಮಾನ ಕಾರ್ಯಗಳಿಗೆ ಎತ್ತುಗಳನ್ನು ಬಳಸಲಾಗುತ್ತಿತ್ತು. ಆದ್ದರಿಂದ ಆ ಗಾದೆಗೆ ಸ್ಥಾನವಿಲ್ಲ. ಅಲ್ಲದೆ ಎತ್ತಿಗಿಂತ ದನಕ್ಕೆ ಪ್ರಾಮುಖ್ಯ ಹೆಚ್ಚು ಮತ್ತು ದನ ಪೂಜ್ಯಸ್ಥಾನದಲ್ಲಿದ್ದು ಅದನ್ನು ಹೀಗಳೆಯುವಂತಹ ಹೇಳಿಕೆಗೆ ಅವಕಾಶವಿಲ್ಲ. ಸಾಂಸ್ಕೃತಿಕ ವಿಭಿನ್ನತೆಯು ಹೇಗೆ ಗಾದೆಗಳ ರೂಪಣೆಯನ್ನು ಪ್ರಭಾವಿಸುತ್ತವೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ.

3 ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

A wounded reputation can seldom be cured

ಇದೂ ಅಡಿಕೆಯನ್ನು ಕೇಂದ್ರಪ್ರಜ್ಞೆಯನ್ನಾಗಿ ಬಳಸಿರುವ ಇನ್ನೊಂದು ಗಾದೆ. ಗಾತ್ರದಲ್ಲಿಯೂ ಬೆಲೆಯಲ್ಲಿಯೂ ಅಡಿಕೆ ಬಹಳ ಸಣ್ಣದು ಮತ್ತು ಆನೆ ಅಗಾಧವಾದದ್ದು. ಆದರೆ ಸಾಂಸ್ಕೃತಿಕವಾಗಿ ಕೆಲವು ಸಂದರ್ಭಗಳಲ್ಲಿ ಅಡಿಕೆಯನ್ನೇ ಕೊಡಬೇಕಾದುದಿರುತ್ತದೆ. ಉದಾಹರಣೆಗೆ ಸಮಾರಂಭದೂಟದ ನಂತರ ವೀಳ್ಯದೆಲೆಯ ಜೊತೆಗೆ, ಫಲತಾಂಬೂಲದಲ್ಲಿ, ಪೂಜೆಯಲ್ಲಿ ನೈವೇದ್ಯಾರ್ಥ ಇತ್ಯಾದಿ. ಇಂತಹ ಸಂದರ್ಭಗಳಲ್ಲಿ ಒಂದು ಅಡಿಕೆಯನ್ನು ನೀಡಲಾಗದಿದ್ದರೆ ಯಜಮಾನ ಅವಮಾನಕ್ಕೊಳಗಾಗುತ್ತಾನೆ. ಅಥವ ಅಡಿಕೆ ಪಡೆಯದವ ಅವಮಾನಿತನಾದೆನೆಂದು ಭಾವಿಸುತ್ತಾನೆ. ಹೀಗೆ ಶ್ರೀಮಂತಿಕೆಯಿಂದ ಬೀಗುವ ವ್ಯಕ್ತಿಯೊಬ್ಬ ನಾನು ಆನೆಯನ್ನೇ ಕೊಡುತ್ತೇನೆಂದರೂ ಆದ ಅವಮಾನ ನೀಗುವುದಿಲ್ಲ. ಅಥವ ಸತ್ಕಾರಾರ್ಥ ಅಡಿಕೆಯನ್ನು ನೀಡಬೇಕಾದ ಸಂದರ್ಭದಲ್ಲಿ ಅಡಿಕೆಯನ್ನು ನೀಡದೆ ಒಬ್ಬನನ್ನು ಅವಮಾನಿಸಿದರೆ ವಜ್ರ ಕಿರೀಟ ಕೊಟ್ಟಾಕ್ಷಣ ಮಾನ ಬರುವುದಿಲ್ಲ.

ಇಲ್ಲಿ ಅಡಿಕೆಯನ್ನುಸಾಮಾಜಿಕ ಸಂಸ್ಕೃತಿಯಲ್ಲಿ ಇರುವ ಒಂದು ಮೌಲಿಕ ವಸ್ತುವನ್ನಾಗಿ ಕಲ್ಪಿಸಲಾಗಿದೆ ಮತ್ತು ಆನೆಯನ್ನು ಭೌತಿಕ ಸಂಪತ್ತನ್ನಾಗಿ ಪರಿಕಲ್ಪಿಸಿದೆ. (ಆನೆ ಇಂದ್ರನ ವಾಹನ ಎಂಬುದನ್ನು ನೆನೆಯಬಹುದು). ಮೌಲ್ಯಹೀನತೆಯಿಂದ ಕಳೆದುಕೊಂಡ ಮಾನವನ್ನು ಎಷ್ಟೇ ಭೌತಿಕ ಸಂಪತ್ತು ಮರಳಿಸಲಾರದು ಎಂಬುದು ಇಲ್ಲಿ ನಿಹಿತವಾಗಿರುವ ಅರ್ಥ. ಗಾದೆಯನ್ನು ಪೂರ್ಣವಾಗಿ ಹೀಗೆ ಹೇಳಬಹುದು: (ವ್ಯಕ್ತಿಗೆ) ಅಡಿಕೆಯಿಂದಾಗಿ ಹೋದ ಮಾನ ಆನೆ ಕೊಟ್ಟರೂ ಬಾರದು.

ಇಂಗ್ಲಿಷ್ ಗಾದೆಯು ಗೌರವವನ್ನು ಒಂದು ಪ್ರಾಣಿಯನ್ನಾಗಿ ಕಲ್ಪಿಸಿದೆ. ಇದಕ್ಕೆ ಗಾಯವಾದರೆ ಗುಣಪಡಿಸಲಾಗದು ಎಂದು ಹೇಳುತ್ತಿದೆ. ಅಡಿಕೆಯ ಪ್ರಸಕ್ತಿ ಇಲ್ಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅಡಿಕೆಗೆ ಯಾವುದೇ ಮೌಲಿಕ ಸ್ಥಾನವಿಲ್ಲದಿರುವುದನ್ನಿ ಇಲ್ಲಿ ಸ್ಮರಿಸಬಹುದು.

4 ಅರಗಿನಂತೆ ತಾಯಿ ಮರದಂತೆ ಮಕ್ಕಳು

Many a good cow had but a bad calf

ಅರಗು ಒಟ್ಟಾರೆಯಾಗಿ ಮರದಿಂದ ದೊರಕುವ ಒಂದು ಉಪಯುಕ್ತ ವಸ್ತು. ದೊರಕಿದನಂತರ ಅರಗು ತನ್ನನ್ನು ಸುಟ್ಟುಕೊಂಡು ಕರಗಿಸಿಕೊಂಡು ಬೀಗಗಳನ್ನು ಭದ್ರ ಪಡಿಸಲು, ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಕ್ಕೆ ಬರುತ್ತದೆ. ಮರವನ್ನು ಆಹಾರಕ್ಕಾಗಿ ಅವಲಂಬಿಸಿದ ಕೀಟ ಹೊರಹಾಕಿದ ಅಂಟು ಇದಾಗಿದ್ದು ಇದನ್ನು ಮರದಿಂದ ಬೇರ್ಪಡಿಸಿ ಉಪಯೋಗಿಸುತ್ತೇವೆ. ಅಂದರೆ ಅರಗು ಮರಕ್ಕೆ ಹತ್ತಿದ ಕೀಟಗಳು ಹೊರಸೂಸುವ ಅಂಟು. ಕೀಟಗಳು ಮರ ತಯಾರಿಸಿದ ಆಹಾರವನ್ನು ಕೊಂಬೆಗಳಿಂದ ಸೆಳೆದು ತಿಂದು ಅರಗನ್ನು ಉತ್ಪಾದಿಸುತ್ತವೆ. ಅರಗೂ ಪರೋಪಕಾರಿ; ಮರವೂ ಪರೋಪಕಾರಿ. ಹೀಗೆ ಅರಗಿನಂತೆ ತಾಯಿ ಮರದಂತೆ ಮಕ್ಕಳು ಎಂದರೆ ತಾಯಿಯಂತೆ ಮಕ್ಕಳು ಎಂದರ್ಥವಾಗುತ್ತದೆ. (ಗಾದೆಯ ಬಳಕೆಯನ್ನು ಸಂದರ್ಭವನ್ನು ನಾನು ನೋಡಿಲ್ಲ). ಇದು ಯಥಾ ರಾಜಾ ತಥಾ

ಪ್ರಜಾ ಎಂಬಂತೆ. ಆದಾಗ್ಯೂ ತಂದೆಯಂತೆ ಮಕ್ಕಳು ಎಂಬಂತಲ್ಲದೆ, ತಾಯಿಯಂತೆ ಮಕ್ಕಳು ಎಂದು ಹೇಳುತ್ತಿದೆ. ಇದು ಮಾತೃಪ್ರಧಾನ ಕುಟುಂಬವಿರುವ ಸಾಮಾಜಿಕ ಸಂದರ್ಭದಲ್ಲಿ ಬಂದಿದೆ. ಗಾದೆಗಳ ಸಾಂಸ್ಕೃತಿಕ ಮಹತ್ತ್ವವನ್ನು ಇದು ತೋರಿಸುತ್ತಿದೆ. ಸಂಪಾದಕರು ಕೊಟ್ಟಿರುವ ಸಮಾನಾರ್ಥಕ ಗಾದೆ ಬೇರೆಯೇ ಅರ್ಥವನ್ನು ನೀಡುತ್ತಿದೆ. ಅರಗಿನಂತೆ ತಾಯಿ ಮರದಂತೆ ಮಕ್ಕಳು ಎಂಬುದಕ್ಕೆ Many a good cow had but a bad calf ಎಂಬುದು ಸಮಾನಾರ್ಥಕ ಗಾದೆಯಲ್ಲ. ಇದಕ್ಕೆ ಸರಿಯಾದ ಗಾದೆ Lke mother Like daughter ಎಂಬುದಾಗಬಹುದೆಂದು ಕಾಣುತ್ತದೆ.

ಗಾದೆ ಎಲ್ಲರಿಗೂ ಒಂದೇ ರೀತಿಯಲ್ಲಿ ಅರ್ಥವಾಗಬೇಕೆಂದಾಗಲೀ ಗಾದೆಗಳ ಎಲ್ಲ ಸಂಗ್ರಹಗಳಲ್ಲಿಯೂ ಒಂದೇ ಅರ್ಥವನ್ನು ನೀಡಬೇಕೆಂದಾಗಲೀ ಹೇಳಲಾಗುವುದಿಲ್ಲ. ಒಂದು ಗಾದೆಗೆ ಬೇರೆ ಬೇರೆ ಸಂಗ್ರಾಹಕರು ಬೇರೆಬೇರೆ ಅರ್ಥಗಳನ್ನು ಸೂಚಿಸಿರುವುದು ಅಸಾಮಾನ್ಯವೇನಲ್ಲ. ಲೀಸಾ ಜಿ ಬಿ ಹೆರನಿನ್ ಇವರು ಫಿನ್ನಿಶ್ ಗಾದೆ Lapset tulee leipineen [Children come with bread] ಎಂಬ ಗಾದೆಗೆ ಹೀಗೆ ಭಿನ್ನ ಅರ್ಥ ಸೂಚನೆಗಳಿರುವುದನ್ನು ಚರ್ಚಿಸಿದ್ದಾರೆ. ಗಾದೆಗಳಿಗೆ ಅವುಗಳನ್ನು ಅರ್ಥೈಸುವವರು ನೀಡುವ ಅರ್ಥವಲ್ಲ, ಸಮಾಜದಲ್ಲಿ ಭಾಷಿಕರು ಬಳಸುವ ಅರ್ಥ ಎಂಬುದು ಇವನ ಅಭಿಪ್ರಾಯ (ಲೀಸಾ, ಪು 18).

ಈ ಗಾದೆಯಲ್ಲಿ ಸಾರ್ವತ್ರಿಕವು ನಿರ್ದಿಷ್ಟ, ಮತ್ತು ಮಾನವರು ಸಸ್ಯಗಳು ಎಂಬ ರೂಪಕಗಳು ಬಳಕೆಯಾಗಿವೆ. ಮೂಲ ಪರಿಧಿ ಮತ್ತು ಲಕ್ಷ್ಯಪರಿಧಿಗಳ ನಡುವಣ ನಕ್ಷೀಕರಣವು ಸ್ವಯಂ ಸ್ಪಷ್ಟವಾಗಿವೆ. ಆದರೆ ಸಮ್ಮಿಳಿತಗಳ ಸಿದ್ಧಾಂತದ ಪ್ರಕಾರ ಅರ್ಥೈಸಿದಾಗ ಈ ಗಾದೆ ಹೆಚ್ಚು ಸ್ಪಷ್ಟವಾಗುತ್ತದೆ.

ಇದರ ಅಭಿಪ್ರಾಯವನ್ನು ಸಮ್ಮಿಳಿತಗಳ ಸಿದ್ಧಾಂತದ ಪ್ರಕಾರ ಹೀಗೆ ವಿವರಿಸಬಹುದು. ಒಂದು ಕಡೆಯಲ್ಲಿ ಅರಗು ಮತ್ತು ಮರ ಇವೆ. ಇನ್ನೊಂದು ಕಡೆ ತಾಯಿ ಮತ್ತು ಮಕ್ಕಳು ಇವೆ. ಮೊದಲ ಪರಿಧಿಯಲ್ಲಿ(ಮೊದಲ ಮಾನಸಿಕ ಅವಕಾಶದಲ್ಲಿ) ಅರಗು, ತಾನು ಕರಗಿ ಬೀಗವನ್ನು ಭದ್ರಪಡಿಸುವುದು, ಈ ಪ್ರಕ್ರಿಯೆಯಲ್ಲಿ ಅರಗು ತನ್ನನ್ನು ತಾನು ಕಳೆದುಕೊಳ್ಳುವುದು, ಮರ, ತನ್ನ ಫಲ–ಪುಷ್ಪ–ನೆರಳುಗಳನ್ನು ಎಲ್ಲರಿಗೆ ನೀಡುವುದು, ಅವರಿಂದ ಪ್ರತಿಫಲಾಪೇಕ್ಷೆ ಇಲ್ಲದಿರುವುದು–ಇವು ಇವೆ. ಎರಡನೆಯ ಪರಿಧಿಯಲ್ಲಿ(ಎರಡನೆಯ ಮಾನಸಿಕ ಅವಕಾಶದಲ್ಲಿ) ತಾಯಿ, ಸ್ವಾರ್ಥ ತ್ಯಾಗ, ಮಕ್ಕಳ ಸೇವೆ, ಪ್ರತಿಫಲಾಪೇಕ್ಷೆ ಇಲ್ಲದಿರುವುದು, ಮಕ್ಕಳು, ಆಶ್ರಯ ನೀಡುವುದು, ಸೌಲಭ್ಯಗಳನ್ನು ಒದಗಿಸುವುದು–ಇವು ಇವೆ. ಇವೆರಡೂ ಸಮ್ಮೇಳಗೊಂಡ ಸಮ್ಮೀಳಿತದಲ್ಲಿ ತಾಯಿ, ಮಗ, ಸ್ವಾರ್ಥ ತ್ಯಾಗ, ಸೇವೆ, ಸೌಲಭ್ಯ ಒದಗಿಸುವುದು, ಆಶ್ರಯ ನೀಡುವುದು–ಇವು ಉಂಟಾಗುತ್ತವೆ. ಇದರಿಂದಾಗಿ ಗಾದೆ ನಿರ್ದಿಷ್ಟ ಸಂದರ್ಭದಲ್ಲಿ ಅರ್ಥವಾಗುತ್ತದೆ.

ಕೃತಿಯ ಸಂಪಾದಕರು ನೀಡಿರುವ ಇಂಗ್ಲಿಷ್ ಪರ್ಯಾಯವು ಇಲ್ಲಿಯೂ ಸಮಾನಾರ್ಥಕವಾಗಿರುವಂತೆ ಕಾಣುವುದಿಲ್ಲ. ಹೀಗಿದ್ದರೂ ಗಾದೆಯಲ್ಲಿ ಅರಗು ಮತ್ತು ಮರಗಳಿಲ್ಲದೆ ಹಸುದನಗಳಿರುವುದು ಎದ್ದು ಕಾಣುವಂತಹದು. ಸಸ್ಯಗಳು ಮಾನವರು ಬದಲಿಗೆ ಪ್ರಾಣಿಗಳು ಮಾನವರು ರೂಪಕ ಇಲ್ಲಿ ಬಳಕೆಯಾಗಿದೆ. ಅರಗು ಜಾರ್ಖಂಡಿನಲ್ಲಿ ಬೆಳೆಯುವ ವಿಶಿಷ್ಟ ಸಸ್ಯೋಪನ್ನವಾಗಿದ್ದು ಭಾರತದ ಇತರೆಡೆಗಳಲ್ಲೂ ಹಿಂದಿನಿಂದಲೂ ಬಳಕೆಯಾಗುತ್ತಿರುವುದು ಬಹುಶಃ ಇದಕ್ಕೆ ಕಾರಣ (ವಿಕಿಪೀಡಿಯಾ https//en.m.wikipedia.org).

ಇಂಗ್ಲಿಷಿನ ಎರಡು ಗಾದೆಗಳನ್ನು ಪರಿಶೀಲಿಸಿದರೂ (Many a good cow had

but a bad calf & Lke mother Like daughter) ಅರಗು ಮತ್ತು ಮರಗಳ ರೀತಿಯ ರೂಪಕಗಳನ್ನ ಅವು ಬಳಸಿಲ್ಲದಿರುವುದು ಕಂಡು ಬರುತ್ತದೆ. ಅವು (ಇಂಗ್ಲಿಷ್ ಗಾದೆಗಳು) ನೀರಸ ವಾಕ್ಯಗಳಂತೆ ಗೋಚರಿಸುತ್ತಿದ್ದು, ರೂಪಕಗಳಿಂದೊದಗುವ ಸೌಂದರ್ಯವನ್ನೂ, ಸ್ಪಷ್ಟತೆಯನ್ನೂ ಕನ್ನಡ ಗಾದೆಯಲ್ಲಿ ಕಾಣಬಹುದು. ರೂಪಕಗಳ ಸೃಷ್ಟಿಯಲ್ಲಿ ಸಂಸ್ಕೃತಿ ಮತ್ತು ನಾಗರೀಕತೆಗಳ ಮಹತ್ವವನ್ನು ಈ ಗಾದೆ ಎತ್ತಿ ತೋರಿಸುತ್ತಿದೆ ಎನ್ನಬಹುದು.

5 ಉಳಿ ಸಣ್ಣದಾದರೂ ಮರ ಕಡಿಯದೆ ಬಿಡದು

Little strokes fell great oaks

ಈ ಗಾದೆಯಲ್ಲಿ ಮರದ ಪ್ರಸಕ್ತಿ ಇದ್ದರೂ ಉಳಿಗೆ ಪ್ರಧಾನ ಪಾತ್ರ. ಉಳಿ ಕಡಿಯುವ ಕೆಲಸವನ್ನು ಮಾಡಿಯೇ ಮಾಡುತ್ತದೆ. ದೊಡ್ಡ ಉಳಿಯಾದರೆ ಕೆಲಸ ಬೇಗ ಮುಗಿಯುತ್ತದೆ. ಸಣ್ಣದಾದರೆ ನಿಧಾನವಾಗುತ್ತದೆ. ಇಲ್ಲಿ ಉಳಿ ಕಡಿಯುವ ಮನೋಭಾವಕ್ಕೆ ಅಂದರೆ ಹಾಳುಗೆಡಹುವ ಕಾರ್ಯಕ್ಕೆ ರೂಪಕ. ಮರ ಪರೋಪಕಾರಿಯಾದ್ದರಿಂದ ಸಜ್ಜನರಿಗೆ ರೂಪಕ. ಸಮಾಜವನ್ನು ಹಾಳುಗೆಡಹುವ ಜನ ಸಮಾಜದಲ್ಲಿದ್ದೇ ಇರುತ್ತಾರೆ. ಇಂತಹ ಜನರು ಸಣ್ಣದಾಗಿ ಇಂತಹ ಕೆಲಸವನ್ನೇನಾದರೂ ಮಾಡಿದಾಗ ಕ್ಷಮ್ಯವೆಂದೆಣಿಸಿ ಹಾಗೆಯೇ ಬಿಟ್ಟರೆ ಮುಂದೆ ಅವನು ದೊಡ್ಡ ಸಮಾಜ ಘಾತುಕನಾಗುತ್ತಾನೆ. ಬೇರ ತರಹದ ಸಾಂದರ್ಭಿಕ ಅರ್ಥಗಳೂ ಇದಕ್ಕೆ ಬರುವುವು. ಅಭಿಮನ್ಯು ಬಾಲಕ. ಆದರೆ ಕೌರವರ ಸೇನೆಯನ್ನೇ ಉರುಳಿಸಿದ. ಉಳಿ ಸಣ್ಣದಾದರೂ ಮರವನ್ನು ಕಡಿಯದೇ ಬಿಡದು.

ಇಲ್ಲಿರುವ ಇದರ ಇಂಗ್ಲಿಷ್ ರೂಪವೂ ಉತ್ತಮ ಭಾಷಾಂತರವಾಗಿ ಕಂಡು ಬರುತ್ತದೆ. ಉಳಿ ಮತ್ತು ಮರಗಳು ಎರಡೂ ಸಂಸ್ಕೃತಿಗಳಲ್ಲಿವೆ. ಒಂದೇ ತರಹದ ಕೆಲಸಗಳನ್ನು ಮಾಡುತ್ತವೆ. ಒಂದೇ ರೀತಿಯ ಸಂಕೇತಾರ್ಥಗಳನ್ನು ಸಮಾಜದಲ್ಲಿ ಪಡೆದಿವೆ. ಹೀಗಾಗಿ ತತ್ಸಮಾನ ಗಾದೆಗಳಾಗಿವೆ.

ಇದೇ ಸಂಗ್ರಹದಲ್ಲಿರುವ ಇತರ ಸಸ್ಯ ಸಂಬಂಧೀ ಗಾದೆಗಳು ಇವು: (1)ಆನೆ ಕೈಲಿ ಕಬ್ಬು ಕೊಟ್ಟ ಹಾಗೆ (As irrecoverable as a lump of butter in greyhound's mouth), (2)ಕಡಲೆಗೆ ಮುಂದು ಕಡಿವಾಣಕ್ಕೆ ಹಿಂದು[ಕೆಲಸಕ್ಕೆ ಕರೀ ಬೇಡ, ಊಟಕ್ಕೆ ಮರೀಬೇಡ (He has two stomachs to eat but one to work), (3)ಎತ್ತಿನ ಮುಂದೆ ತೆಂಗಿನ ಕಾಯಿ ಹಾಕಿದ ಹಾಗೆ (It is like nuts to an ape) (4)ಕಬ್ಬು ಸಿಹಿ ಎಂದು ಬುಡದವರೆಗೆ ಅಗಿ ಬಾರದು(ದ್ರಾಕ್ಷಿ ಸಿಹಿ ಎಂದು ಬಳ್ಳಿ ಸಹ ತಿನ್ನಬಾರದು The orange that is squeezed hard yields bitter juice), (5)ಕಬ್ಬು ಡೊಂಕಾದರೆ ಸವಿ ಡೊಂಕೆ (Black plums may eat as sweet as white), (6)ಕಳ್ಳ ಕಳ್ಳಗೆ ನಂಟು, ಹುಳಿ ಮೆಣಸಿಗೆ ನಂಟು (Birds of the same feather flock together), (%)ಕುಂಬಳ ಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ(A guilty conscience needs no accuser), (8)ತಾನಾಗಿ ಬೀಳುವ ಮರಕ್ಕೆ ಕೊಡಲಿ ಯಾಕೆ (Press not a falling man too far), (9)ತಾನು ನೆಟ್ಟ ಬೀಳು ತನ್ನೆದೆಗೆ ಹಂಬಿತು (Clouds that the sun builds up darken him), (10)ಅಡಿಕೆ ಕದ್ದವ ಆನೆ ಕದ್ದಾನು (He who steals an egg will steal an ox), (11)ನಾಗಮಲ್ಲಿಗೆ ಹೂವು ಪೂಗವಾದೀತೆ (Every reed will not make a pipe), (12)ಫಲಕ್ಕೆ ತಕ್ಕ ಬೀಜ ನೆಲಕ್ಕೆ ತಕ್ಕ ನೀರು (As is the tree so is the fruit), (13)ಬಾಳೆ ಹಣ್ಣಿಗೆ ಗರಗಸ ಬೇಕೆ (Send not for a hatchet to break open an egg), (14)ಬೂರುಗದ ಮರವನ್ನು ಗಿಣಿ ಕಾದ ಹಾಗೆ

(A watched pan is long in boiling), (15)ಬೋರೇ ಗಿಡದಲ್ಲಿ ಕಾರೇ ಹಣ್ಣಾದೀತೆ (Can you gather figs out of thistles), (16)ಮರ ಹತ್ತಿದವನ ಕಾಲು ಕೆಳಗೆ (The higher the ape climbs the more he shows the tail), (1%)ಮಲ್ಲಿಗೆ ಹೂವಿನಿಂದ ಬಾಳೆ ಹಗ್ಗ ಪಾವನವಾಯ್ತು (For the rose the thorn is plucked), (18)ಮೋಟು ಮರ ಗಾಳಿಗೆ ಮಿಂಡ (He who has nothing is frightened at nothing), (19)ಹಣ್ಣೆಲೆ ಉದುರುವಾಗ ಕಾಯ್–ಎಲೆ ನಗುವುದು (He jests at scars that has never felt a wound), (20) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ (Best to bend while a twig).

ಈ ಗಾದೆಗಳಲ್ಲಿ ಕಂಡು ಬರುವ ಕೆಲವು ಸಾಮಾನ್ಯ ಸಾಂಸ್ಕೃತಿಕ ಅಂಶಗಳನ್ನು ನೋಡಬಹುದು. ಹಣ್ಣೆಲೆ, ಕಾಯೆಲೆ, ಮರ, ಬೀಳು–ಇಂತಹ ಸಸ್ಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಪದಗಳು, ಅಕ್ಕಿ, ಅಡಿಕೆ, ತೆಂಗಿನ ಕಾಯಿ–ಇಂತಹ ಪೂಜೆಗೆ ಬಳಸುವ ಫಲಗಳು (ಅಕ್ಕಿ ತೆಂಗಿನ ಕಾಯಿಗಳು ಆಹಾರ ವಸ್ತುಗಳೂ ಆಗಿವೆ. ಕಬ್ಬು, ಕಡಲೆ, ಇವೂ ಇದೇ ಗುಂಪಿಗೆ ಸೇರಿದವು.), ದ್ರಾಕ್ಷಿ, ಮೆಣಸು, ಕುಂಬಳಕಾಯಿ–ಇಂತಹ ತರಕಾರಿ ಫಲಗಳು, ನಾಗಮಲ್ಲಿಗೆ, ಪೂಗ, ಬಾಳೆ, ಬೂರಗ–ಇಂತಹ ಹೂವುಗಳು ಈ ಗಾದೆಗಳಲ್ಲಿ ಬಳಕೆಯಾಗಿವೆ. ಇವೆಲ್ಲ ಈ ನಾಡಿನ ನೆಲಜಲದಲ್ಲಿ ಹಾಸುಹೊಕ್ಕಾಗಿರುವುವಷ್ಟೇ ಅಲ್ಲ, ನಾಡಿನ ಸಂಸ್ಕೃತಿಯಲ್ಲಿ ಪ್ರಮುಖಪಾತ್ರವಿದೆ. ಉಳಿ, ಕೊಡಲಿ–ಇವುಗಳನ್ನು ಸಸ್ಯನಾಶನ ಪ್ರವೃತ್ತಿಯ ಪ್ರತಿನಿಧಿಗಳನ್ನಾಗಿ ಬಳಸಿದ್ದಾರೆ. (ಉಳಿ–ಕೊಡಲಿಗಳು ನಿರ್ಮಾತೃಗಳೂ ಹೌದಾದರೂ ಈ ಉಪಕರಣಗಳ ಅಂತಹ ಗುಣಸ್ವಭಾವಗಳು ಇಲ್ಲಿ ನಕ್ಷೀಕೃತವಾಗಿಲ್ಲ). ಇಂಗ್ಲಿಷ್ ಗಾದೆಗಳಲ್ಲಿ ಇವು ಇಲ್ಲದಿರುವುದು ಅಲ್ಲಿನ ಸಂಸ್ಕೃತಿಯಲ್ಲಿ ಇವುಗಳಿಗೆ ಅದೇ ಮಹತ್ತವವಿಲ್ಲದಿರುವುದರಿಂದಲೇ. ಕೆಲವು ಗಾದೆಗಳಿಗೆ ಮಾತ್ರ ಸ್ಪಷ್ಟವಾದ ಸಮಾನಾಂತರ ಭಾಷಾಂತರಗಳು ಲಭ್ಯವಿವೆ ಉದಾ. 3, 8 ಮತ್ತು 20. ಇವು ಮಾನವನ ವಿಶ್ವ ವ್ಯಾಪೀ ಸಂಸ್ಕೃತಿಯ ಪ್ರತಿನಿಧಿಗಳು. ಆದರೂ ಇವುಗಳಲ್ಲಿ ಮೊದಲನೆಯದರಲ್ಲಿ ಕನ್ನಡದಲ್ಲಿ ಎತ್ತು ಇರುವ ಕಡೆ ಇಂಗ್ಲಿಷಿನಲ್ಲಿ ಕೋತಿ ಇದೆ.

ಆನೆ ಕೈಲಿ ಎಂಬಲ್ಲಿ ಪ್ರಾಣಿಯು ಮನುಷ್ಯ ಎಂಬ ರೂಪಕವಿದೆ; ಪರ್ಯಾಯ ಇಂಗ್ಲಿಷ್ ಗಾದೆಯ ಹೇಳಿಕೆಯಲ್ಲಿ ರೂಪಕವಿರುವುದಿಲ್ಲ. ಕಡಲೆಗೆ ಮುಂದು ಕಡಿವಾಣಕ್ಕೆ ಹಿಂದು ಎಂಬ ಗಾದೆಯಲ್ಲಿ ಕುದುರೆ ಎಂಬುದು ಅಧ್ಯಾಹಾರ; ಮುಂದು ಎಂಬುದು ಪ್ರಗತಿಯನ್ನೂ ಹಿಂದು ಎಂಬುದು ವಿಗತಿಯನ್ನೂ ಸೂಚಿಸುವ ದಿಕ್ಸೂಚೀ ರೂಪಕಗಳು. ಇದರ ಇಂಗ್ಲಿಷ್ ಪರ್ಯಾಯ ಮನುಷ್ಯನು ಪ್ರಾಣಿ ಎಂಬ ರೂಪಕವನ್ನೊಳಗೊಂಡಿದೆ (ಎರಡು ಹೊಟ್ಟೆಗಳು ದನ, ಎಮ್ಮೆ, ಮುಂತಾದ ಪ್ರಾಣಿಗಳಲ್ಲಿ ಮಾತ್ರ ಕಂಡುಬರುವುದರಿಂದ). ಬುಡದವರೆಗೆ ಅಗಿಯಬಾರದು ಎಂಬಲ್ಲಿ ಬುಡಸಹಿತ ತೆಗೆಯುವುದು ನಾಶ ಎಂಬ ರೂಪಕವಿದೆ; ಇಂಗ್ಲಿಷ್ ಗಾದೆ ಒಂದು ವಾಸ್ತವದ ಹೇಳಿಕೆಯಾಗಿದ್ದು(ಸಿಪ್ಪೆ ಸಹಿತ ಕಿವುಚಿದರೆ ಕಿತ್ತಳೆ ರಸ ಕಹಿ ತಾನೆ) ಸಾರ್ವತ್ರಿಕವು ನಿರ್ದಿಷ್ಟ ಎಂಬ ರೂಪಕದಿಂದ ಎರಡೂ ಅರ್ಥವಾಗುತ್ತವೆ. ಸವಿ ಡೊಂಕು ಎಂಬಲ್ಲಿ ಸವಿಯನ್ನು ಒಂದು ನೇರವಾಗಿರುವ ಕೋಲಿನಂತೆ ಪರಿಕಲ್ಪಿಸಲಾಗಿದೆ. ಹೀಗೆ ಭಾಷೆಗಳಲ್ಲಿ ಕಾಣಬರುತ್ತಿರುವ ರೂಪಕಗಳ ಪ್ರಯೋಗದಲ್ಲಿ ಭಿನ್ನತೆಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಒಟ್ಟಿನಲ್ಲಿ ಗಾದೆಗಳಲ್ಲಿ ಕೆಲವು ಸಾರ್ವತ್ರಿಕ ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದ್ದರೆ ಹೆಚ್ಚಿನವು ಕರುನಾಡ ಸಂಸ್ಕೃತಿಯನ್ನೇ ಘನತರವಾಗಿ ಬಿಂಬಿಸುತ್ತವೆ. ಇವುಗಳನ್ನು ರೂಪಕಗಳ

ಕಾಗ್ನಿಟಿವ್ ಸಿದ್ದಾಂತ ಮತ್ತು ಸಮ್ಮಿಳಿತಗಳ ಸಿದ್ಧಾಂತ ಇವುಗಳನ್ನಾಧರಿಸಿ ಅರ್ಥೈಸಬಹುದು. ಕನ್ನಡದಲ್ಲಿ ಸಸ್ಯ ಸಂಭಂಧೀ ಗಾದೆಗಳನ್ನು ಪರಿಶೀಲಿಸಿದಾಗ ಅಡಿಕೆ, ಪೂಗ, ಅರಗು ಇಂತಹ ವಸ್ತುಗಳನ್ನು ಅವು ಒಳಗೊಂಡಿರುವುವು. ಈ ವಸ್ತುಗಳನ್ನು ಒಳಗೊಂಡ ಇಂಗ್ಲಿಷ್ ಗಾದೆಗಳು ಇಲ್ಲ. ಗಾದೆಗಳ ರೂಪಣೆ ಮತ್ತು ಅರ್ಥೈಸುವಿಕೆಗಳಿಗೆ ಸಂಸ್ಕೃತಿಯ ಹಿನ್ನೆಲೆ ಎಷ್ಟೊಂದು ಮುಖ್ಯ ಎಂಬುದನ್ನು ಈ ಅಂಶ ತೋರಿಸುತ್ತದೆ. ಗಾದೆಗಳಲ್ಲಿ ಬಳಕೆಯಾಗುವ ರೂಪಕಗಳೂ ಕೂಡ ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಬೇರೆಯಾಗಿರುತ್ತವೆ. ಇದು ಹೊರಜಗತ್ತನ್ನು ವಿಭಿನ್ನ ಸಂಸ್ಕೃತಿಯ ಜನರು ಅರ್ಥಮಾಡಿಕೊಳ್ಳುವ ರೀತಿಗಳು ಕೂಡ ಭಿನ್ನಭಿನ್ನವಾಗಿರುವುದನ್ನು ಸೂಚಿಸುವಂತೆ ತೋರುತ್ತದೆ.

BIBLIOGRAPHY

1. Fauconnier, Gilles and Turner Mark 2003 : Conceptual Blending Form and Meaning Researches en communication n0 19. The pdf is available in the internet freely
2. Hien Li Thi Thu: Proverbs and Idioms Related to Animals in English and Vietnamese [Class 4c-06, University of Pedogogy] The PDF is available in the internet freely
3. Honeck, Richard P 199%: A PROVERB IN MIND The Cognitive Science of Proverbial Wit and Wisdom University of Cicinnati Available in Google Books
4. Jibir-Daura, Dr Ramlatu : ANALYSIS OF HAUSA PROVERBS WITH CONCEPTUAL BLENDING Department of Arts and Social Science, Ahmadu Bello University, Zaria
5. Kovocses, Zoltan 2010: Metaphor: A Practical Introduction, 2nd ed.[Oxford University] Available in Googlebooks
6. Kovecses, Zoltan 2006: Language Mind and Culture Oxford University Press Newyork Available in Googlebooks

%. Lakoff George amd Turner Mark, 1989: More Than Cool Reason - A Field Guide to Poetic Metaphor [Publ. University of Chicago Press] Available in Googlebooks

8. Mieder, Wolfgang 2004 : Proverbs: A Handbook, Greenwood Punlishing Group, Available in Google Books
9. Moreno, Ibanez Ana 2005: Analysis of the Cognitive Dimension Of Proverbs in English and Spanish : SKACE Journal of Theoretical Linguistics pdfs. Semamnticscholar.org
10. Narasinga Rao, Ullal 1912: A Hand Book Of Canarese Proverbs with English Equivalents [Publ. Basel Mission Book and Track Depository

Mangalore]. ಇದು ಕನ್ನಡದ ಮೊದಲ ಗಾದೆಗಳ ಸಂಗ್ರಹ. ಇದರ ಮೊದಲ ಾವೃತ್ತಿ 1906ರಲ್ಲಿ ಮದ್ರಾಸಿನಿಂದ ಪ್ರಕಟವಾದಂತೆ ತಿಳಿದು

11. Sullivan,Karen and Sweetstar,Eve 2010: Is Generic is Specific a Metaphor?: Maning Form and BodyFey Parrill Ed Mark Turner CSLI
12. Turner, Mark 2014: Origin of Ideas Oxford University Press Newyork Available in Google Books Publications
13. YANG Yongxiang 2015: The Explanatory Power of Conceptual Blending Theory for English Proverbs in Studies in Literature and LanguageVol ii, no.3 pp52-56 CSCanada

ಭಾರತ ಗಣರಾಜ್ಯೋತ್ಸವ
ಒಂದು ಐತಿಹಾಸಿಕ ಸಂವಿಧಾನಿಕ ಮೈಲಿಗಲ್ಲು

ರೊನಾಲ್ಡ್ ಪ್ರವೀಣ್ ಕೊರೆಯ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು, ದ.ಕ.

ಕಳೆದ 70 ವರ್ಷಗಳಿಂದ ಜನವರಿ 26ರಂದು ಭಾರತದ ಪ್ರಜೆಗಳಾದ ನಾವು ಭಾರತ ದೇಶದ ಗಣರಾಜ್ಯೋತ್ಸವವನ್ನು ಸ್ಮರಿಸುತ್ತೇವೆ. ಈ ದಿನದ ಔಚಿತ್ಯತೆ ಬಗ್ಗೆ ನಾವಿಂದು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಯಾಕೆಂದರೆ ಇಂದಿನವರೆಗೂ ನಮ್ಮ ಸಂವಿಧಾನದ ಮೂಲ ಆಶಯಗಳು ಸಂಪೂರ್ಣವಾಗಿ ಅನುಷ್ಠಾನಗೊಂಡಿಲ್ಲ. ಸಂವಿಧಾನ ರಚನಾಕಾರರ ಆಶಯಗಳು, ಸ್ವತಂತ್ರ ಭಾರತದ ಬಗ್ಗೆ ಅವರಲಿದ್ದ ಕನಸುಗಳು ಸಾಕಾರಗೊಳ್ಳಬೇಕಾಗಿದೆ. ಕಳೆದ 70 ವರ್ಷಗಳಿಂದ ಭಾರತ ಸಮಾಜ 'ಸಮಾನತೆಯಿಂದ ಸ್ವಾತಂತ್ರ್ಯದೆಡೆಗೆ ಮುನ್ನುಗ್ಗಲು ಚಡಪಡಿಸುತ್ತಿದೆ'. ಇದಕ್ಕೆ ಅಡ್ಡಿಯಾಗುತ್ತಿರುವುದು ಜಾತಿ ವ್ಯವಸ್ಥೆ. ವಿಜ್ಞಾನ ಹಾಗೂ ವೈಜ್ಞಾನಿಕ ಮನೋಧರ್ಮಕ್ಕಾಗಿ ಯುವ ಜನತೆ ಎಂಬ ಮನೋಭಾವ ಬೆಳೆಸಬೇಕಾಗಿದೆ. ಈ ಒಂದು ಜಾಗತೀಕರಣಗೊಳ್ಳುತ್ತಿರುವ ಕಾಲಘಟ್ಟದಲ್ಲಿ ಯುವ ಜನತೆಯ ಮನಸ್ಸು ಹಾಗೂ ಹೃದಯಗಳನ್ನು ಅಧಿಕಾರ ಹಾಗೂ ಸ್ಥಾನಮಾನಕ್ಕೋಸ್ಕರ ಗಾಸಿಗೊಳಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿರುವುದು ದುರದೃಷ್ಟಕರ. ಸ್ವಾಮಿ ವಿವೇಕಾನಂದರು ನಂಬಿದ ಆ ಯುವ ಶಕ್ತಿಯನ್ನು ಸಮಾಜದ ಮುಖ್ಯ ವಾಹಿನಿಗೆ ತಂದರೆ ಭಾರತ ಕೆಲವೇ ವರ್ಷಗಳಲ್ಲಿ ಎಲ್ಲಾ ಸಮಸ್ಯೆಗಳಿಂದ ಹೊರಬಂದು ಸ್ವಾವಲಂಬನೆಗೊಂಡು ಒಂದು ಬಲಿಷ್ಠ ಜಾಗತಿಕ ಶಕ್ತಿಯಾಗಿ ಹೊರ ಹೊಮ್ಮುವುದರಲ್ಲಿ ಸಂಶಯವಿಲ್ಲ.

ಬ್ರಿಟಿಷರ ನಿಯಂತ್ರಣದಿಂದ ಹೊರಬಂದು, ಅರಸೊತ್ತಿಗೆ ಕೊನೆಗೊಂಡು ಭಾರತ ಎಂಬ ರಾಷ್ಟ್ರವನ್ನು ಸರ್ವಧರ್ಮ ಸಮಭಾವ ಎಂಬ ತತ್ವದ ನೆಲೆಯಲ್ಲಿ ಕಟ್ಟಲು ಮತ್ತು ಹಿಡಿದಿಡಲು, ನಮ್ಮ ದೇಶದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರು, ನಾಯಕರುಗಳು ಸಂವಿಧಾನವನ್ನು ರಚಿಸಿ ಇದೇ ಸತ್ಯ ಇದೇ ನಿತ್ಯ ಎಂಬ ತೀರ್ಮಾಣಕ್ಕೆ ಬಂದು ಜನವರಿ 26, 1950 ರಂದು ಸಂವಿಧಾನವನ್ನು ಜಾರಿಗೆ ತಂದಿರುತ್ತಾರೆ. ಬಹಳ ದೀರ್ಘಕಾಲ ಭಾರತದ ಸಾಮಾಜಿಕ ನೆಲೆಗಟ್ಟನ್ನು ಜಾಗತೀಕ ರಾಜಕೀಯ ವ್ಯವಸ್ಥೆಗಳೊಂದಿಗೆ ತಾಳೆ ಹಾಕಿ, ಅಳೆದು ತೂಗಿ, ಭವಿಷ್ಯತ್ತಿನ ಸುಂದರ, ಶಾಂತಿ, ಸಮೃದ್ಧಿಯ ಭಾರತವನ್ನು ನಿರ್ಮಿಸಲು ಒಂದು ಮಾದರಿ ಸಂವಿಧಾನವನ್ನು ಸತ್ಯಾನ್ವೇಷನೆಯ ಮೂಲಕ ದೇಶಕ್ಕೆ ಅರ್ಪಿಸಿರುತ್ತಾರೆ.

ಆದರೆ ಇಂದು ಪ್ರಜಾಪ್ರಭುತ್ವದಲ್ಲಿ ಬಹುಮತವೇ ಸತ್ಯವೆಂದು ಪ್ರಮಾಣಿತವಾಗುವ ಸಂದರ್ಭದಲ್ಲಿ ನಮ್ಮೆದುರು ಉಳಿಯುವುದು ಅರ್ಧಸತ್ಯದಂತೆ ಗೋಚರಿಸುವ ಆದರೆ ತನ್ನ ಹೊಟ್ಟೆಯಲ್ಲಿ ಪೂರ್ಣ ಸತ್ಯವನ್ನು ಹೊತ್ತ ನಮ್ಮ ಸಂವಿಧಾನ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಸಂವಿಧಾನ ಜಾರಿಗೆ ಬಂದದ್ದು ಹೋರಾಟದ ಅಂತ್ಯವಲ್ಲ ಕೇವಲ ಆರಂಭ, ಒಂದು ದೇಶವಾಗಿ ಉಳಿಯಲು, ಒಂದೇ ತಾಯಿಯ ಮಕ್ಕಳಂತೆ ಬೆಳೆಯಲು, ಒಂದೇ ಧ್ವನಿಯಲ್ಲಿ ಮಾತನಾಡಲು ಹಾಗೂ ಸ್ವತಂತ್ರ ರಾಷ್ಟ್ರ ನಿರ್ಮಾಣ ಮಾಡಲು ಕಳೆದ 70 ವರ್ಷಗಳಿಂದ ನಿರಂತರವಾಗಿ ಅರ್ಧ ಬೆಂದ ಸತ್ಯವನ್ನು ಪೂರ್ಣಸತ್ಯವೆಂದು ಪ್ರಮಾಣೀಕರಿಸುವ ತೀವ್ರ ಸ್ಪರ್ಧೆಯಲ್ಲಿ ನಾವೆಲ್ಲರೂ ಸಮಾನರು, ಮನುಷ್ಯ ಎಂಬುವುದನ್ನು ಮರೆತು ಬಿಟ್ಟಿದ್ದೇವೆ. ಪ್ರಜಾಸತ್ತಾತ್ಮಕ ಮೌಲ್ಯಗಳು ಭ್ರಮೆಯಾಗುವ ಆತಂಕ ನನ್ನನ್ನು ಕಾಡುತ್ತಿದೆ. ಇಡೀ ವ್ಯವಸ್ಥೆ ನಲುಗಿ ಘಾಸಿಯಾದರೂ ಇನ್ನು ನಾವು ಬಹುಮತವೇ ಸತ್ಯ ಎಂದು ನಂಬುತ್ತಿದ್ದೇವೆ. ಈ ಒಂದು ವೈಜ್ಞಾನಿಕ ಯುಗದಲ್ಲಿ ಯುವ ಜನತೆ ಗಾಢನಿದ್ರೆಯಿಂದ ಎಚ್ಚೆತ್ತುಕೊಳ್ಳದೇ ಹೋದಲ್ಲಿ ನಮ್ಮ ಸಂವಿಧಾನ ನಿರ್ಮಾತೃಗಳ ಕನಸಿನ ಭಾರತವನ್ನು ಕಟ್ಟಲು ಮತ್ತು ಹೂಹಿಸಲು ಕಷ್ಟ ಸಾಧ್ಯ. ಹಾಗಾಗಿ, ನಾವೆಲ್ಲರೂ ಎಲ್ಲ ವ್ಯತ್ಯಾಸಗಳನ್ನು ಮರೆತು, ಉದಾರವಾದಿ ಚಿಂತನೆಗಳೊಂದಿಗೆ, ಮಾನವ ಧರ್ಮವನ್ನು ಮೈಗೂಡಿಸಿಕೊಂಡಾಗ ಮಾತ್ರ ಗಣರಾಜ್ಯೋತ್ಸವ ಆಚರಣೆಗೆ ಅರ್ಥ ನೀಡಿದ ಹಾಗೆ.

1950 ಜನವರಿ 26 ರಂದು ನಮ್ಮ ದೇಶದ ಸಂವಿಧಾನವನ್ನು ಜಾರಿಗೆ ತರಲಾಯಿತು. ಭಾರತ ದೇಶ ಒಂದು ಗಣರಾಜ್ಯ ಎಂದು ಘೋಷಿಸಲ್ಪಟ್ಟಿತು. ಗಣರಾಜ್ಯ ಎಂದರೆ ಆ ದೇಶದ ಮುಖ್ಯಸ್ಥರಾದ ರಾಷ್ಟ್ರಪತಿಯವರನ್ನು ಜನರು ನೇರವಾಗಿ ಅಥವಾ ಪರೋಕ್ಷವಾಗಿ (ಜನಪ್ರತಿನಿಧಿಗಳ ಮೂಲಕ) ಆಯ್ಕೆ ಮಾಡುವುದು. ಸ್ವಾತಂತ್ರ್ಯ ಪೂರ್ವ ಅಂದಿನ ಭಾರತದಲ್ಲಿ 635 ಕ್ಕಿಂತಲೂ ಹೆಚ್ಚು ಸಂಸ್ಥಾನಗಳಿದ್ದು, ಅಲ್ಲಿ ಅನುವಂಶೀಯ ಹಾಗೂ ನಿರಂಕುಶ ಆಳ್ವಿಕೆ ಇರುವುದನ್ನು ನಾವು ತಿಳಿದುಕೊಂಡಿದ್ದೇವೆ. ಪ್ರಜಾಪ್ರಭುತ್ವವನ್ನು ಒಂದು ಜೀವಕ್ರಮ ಅಥವಾ ಪದ್ಧತಿ ಎಂದು ನಂಬಿದ ನಮ್ಮ ಸಂವಿಧಾನ ರಚನಾಕಾರರು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಮತ ನಿರಾಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ ದೇಶವನ್ನಾಗಿ ರೂಪಿಸುವ ಅಥವಾ ನಿರ್ಮಿಸುವ ಹಾಗೂ ಕಟ್ಟುವ ಕೆಲಸಕ್ಕೆ ಚಾಲನೆಯನ್ನು ಸಂವಿಧಾನ ಜಾರಿ ಮೂಲಕ ನೀಡಿರುತ್ತಾರೆ. ಭಾರತ ದೇಶದ ಸಂವಿಧಾನದ ಪ್ರಸ್ತಾವನೆ ಈ ರೀತಿ ಇದೆ.

“ಭಾರತ ವಾಸಿಗಳಾದ ನಾವು, ಭಾರತವನ್ನು ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಲೋಕತಂತ್ರಿಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ಸ್ಥಾಪಿಸಿ, ಅದರ ಎಲ್ಲಾ ಪ್ರಜೆಗಳಿಗೆ ಈ ಕೆಳಗಿನ ಹಕ್ಕುಗಳಾದ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ

ನಂಬಿಕೆ, ಭಕ್ತಿ ಮತ್ತು ಆರಾಧನೆಗಳಲ್ಲಿ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಗಳನ್ನು ದೊರಕಿಸಿ ವೈಯಕ್ತಿಕ ಘನತೆ ಮತ್ತು ದೇಶದ ಒಗ್ಗಟ್ಟು ಮತ್ತು ಐಕ್ಯತೆಗೆ ಎಲ್ಲರಲ್ಲೂ ಭ್ರಾತೃತ್ವತೆಯನ್ನು ಪ್ರೋತ್ಸಾಹಿಸಲು ನಿರ್ಧರಿಸಿ;

ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ಈ 1949 ರ ನವೆಂಬರ್ ಮಾಹೆಯ26 ನೇ ದಿನದಂದು, ನಾವಾಗಿ ನಾವೇ ಈ ಸಂವಿಧಾನವನ್ನು ಸ್ವೀಕರಿಸಿ, ಶಾಸನವನ್ನಾಗಿ ವಿಧಿಸಿಕೊಳ್ಳುತ್ತೇವೆ.

ಭಾರತ ಸಂವಿಧಾನದ ಪ್ರಸ್ತಾವನೆಯನ್ನು ಸಂವಿಧಾನದ ಆತ್ಮ ಎಂದು ಕೆ.ಸಿ.ವೆರ್ ರವರು ಕರೆಯುತ್ತಾರೆ. ದೇಶ ಒಂದು ದೇಹವಾದರೆ ಸಂವಿಧಾನ ಎಂಬುವುದು ಈ ದೇಹಕ್ಕೆ ಆತ್ಮವಾಗಿ ಕೆಲಸ ಮಾಡುತ್ತದೆ. ಪ್ರಸ್ತಾವನೆಯನ್ನು Preface, Content, Summary, Story, Introduction ಅಥವಾ Philosophy of the Constitution ಅಂತ ಕರೆಯಬಹುದು. ಕೆ.ಸಿ.ವೆರ್ ರವರು ಪ್ರಸ್ತಾವನೆಯನ್ನು Key to open the minds of the makers of the Constitution ಅಂತ ಕರೆಯುತ್ತಾರೆ. ಯಾಕೆಂದರೆ ಸಂವಿಧಾನ ರಚನಾಕಾರರ ಮನಸ್ಸಿನಲ್ಲಿದ್ದ ಸ್ವತಂತ್ರ ಭಾರತದ ಬಗೆಗಿನ ಕನಸುಗಳು, ಆಶಯಗಳು ಹಾಗೂ ಆಶೋತ್ತರಗಳನ್ನು ಪ್ರಸ್ತಾವನೆಯಲ್ಲಿ ಘೋಷಿಸಲಾಗಿದೆ. ಸಂವಿಧಾನ ಎಂಬುವುದು ಒಂದು ಕಾನೂನಿನ ದಾಸ್ತಾವೇಜು. ಆದರೆ ಉಡಿಚಿಟಿತುಟಜ ಂಣಣುಟ ಅವರು ಭಾರತ ಸಂವಿಧಾನವನ್ನು ಒಂದು ಸಾಮಾಜಿಕ ದಾಸ್ತಾವೇಜು ಎಂದು ಕರೆಯುತ್ತಾರೆ. ಯಾಕೆಂದರೆ ಸಂವಿಧಾನದ ಪ್ರಸ್ತಾವನೆಯನ್ನು ಅನುಷ್ಠಾನಕ್ಕೆ ತರುವ ಮೂಲಕ ಇಡೀ ಭಾರತ ಸಮಾಜದಲ್ಲಿ ಸಂಪೂರ್ಣ, ಸಮಗ್ರ ಸಾಮಾಜಿಕ ಸಮಾನತೆಯ ಒಂದು ಕ್ರಾಂತಿಕಾರಿ ಪರಿವರ್ತನೆಯನ್ನು ಸಾಧಿಸುವ, ಸಾಕಾರಗೊಳಿಸುವ ಆಶಯವನ್ನು ಸಂವಿಧಾನ ನಿರ್ಮಾತೃಗಳು ಹೊಂದಿದ್ದಾರೆ. ಕಳೆದ ಎಪ್ಪತ್ತು ವರ್ಷಗಳಲ್ಲಿ ನಮ್ಮ ದೇಶದ ಸಾಮಾಜಿಕ ಸ್ಥರವಿನ್ಯಾಸ, ಶ್ರಮವಿಭಜನೆಯಲ್ಲಿ ಊಹೆ ಮೀರಿ ಬದಲಾವಣೆ ಹಾಗೂ ಪರಿವರ್ತನೆಯಾಗಿದೆ. ಕುಲ ಕಸುಬು, ಜಾತಿ ಆಧಾರಿತ, ಲಿಂಗ ಆಧಾರಿತ ವ್ಯವಸ್ಥೆಯಲ್ಲಿ ಭಾರೀ ಸುಧಾರಣೆಗಳಾಗಿವೆ. ಎಲ್ಲಾ ನಿರ್ಭಂಧಗಳನ್ನು ಹೋಗಲಾಡಿಸಲಾಗಿದೆ.

ಬೆರುಬರಿ ಪ್ರಕರಣದಲ್ಲಿ ಸುಪ್ರೀಮ್ ಕೋರ್ಟ್ ನಮ್ಮ ಸಂವಿಧಾನದ ಪೀಠಿಕೆಯು ಸಂವಿಧಾನದ ಅವಿಭಾಜ್ಯ ಅಂಗವಲ್ಲ ಇದನ್ನು ಸಂಸತ್ತು ತಿದ್ದುಪಡಿ ಮಾಡಬಹುದು ಎಂದು ಅಭಿಪ್ರಾಯ ಪಟ್ಟಿತ್ತು. ಆದರೆ 1973ರ ಕೇಶವಾನಂದ ಭಾರತಿ ಹಾಗೂ ಕೇರಳ ರಾಜ್ಯದ ಪ್ರಕರಣದಲ್ಲಿ ಸುಪ್ರೀಮ್ ಕೋರ್ಟ್ ಸಂವಿಧಾನದ ಪೀಠಿಕೆಯನ್ನು ಸಂವಿಧಾನದ ಅವಿಭಾಜ್ಯ ಅಂಗ. ದೇಶದಲ್ಲಿ ಅಧಿಕಾರದಲ್ಲಿರುವ ಸರಕಾರಕ್ಕೆ ಸಂಸತ್ತಿನಲ್ಲಿ ಮೂರನೆ ಎರಡು ಬಹುಮತ ಇದ್ದರೂ ಸಂವಿಧಾನದ ಪೀಠಿಕೆಯನ್ನು ತಿದ್ದುಪಡಿ ಮಾಡುವಂತಿಲ್ಲ ಯಾಕೆಂದರೆ 'Preamble is the basic elements or features of Indian Constitution'. ಈ ಪೀಠಿಕೆ ಇಡೀ ದೇಶಕ್ಕೆ ಒಂದು

ಶಾಶ್ವತ ಭದ್ರ ಬುನಾದಿ ಅಥವಾ ನೆಲೆಗಟ್ಟನ್ನು ಹಾಕಿ ಕೊಟ್ಟಿದೆ. ದೇಶದಲ್ಲಿರುವ ಎಲ್ಲಾ ವೈವಿಧ್ಯತೆಗಳನ್ನು ಹಿಡಿದಿಟ್ಟುಕೊಳ್ಳುವ ಒಂದು ಸೂತ್ರ ಈ ಪೀಠಿಕೆಯಲ್ಲಿ ಅಡಗಿದೆ ಎಂಬುವುದು ವಾಸ್ತವ. ಹೇಗೆ ಒಂದು ಧರ್ಮವನ್ನು ಒಂದು ಪವಿತ್ರವಾದ ಗ್ರಂಥದ ಮೇಲೆ ಕಟ್ಟಲಾಗಿದೆಯೇ ಹಾಗೇನೇ ನಮ್ಮ ಸಂವಿಧಾನ ರಚನಾಕಾರರು ಸಂವಿಧಾನದ ಶ್ರೇಷ್ಠತೆ ಹಾಗೂ ಪವಿತ್ರತೆಯನ್ನು ಸಂರಕ್ಷಿಸುವ, ಅರ್ಥೈಸುವ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುತ್ತಾರೆ. ಸರ್ವೋಚ್ಚ ನ್ಯಾಯಾಂಗದ ಅಧಿಕಾರ ವ್ಯಾಪ್ತಿಯಲ್ಲಿ ಸರಕಾರದ ಇತರ ಎರಡು ಅಂಗಗಳಾದ ಶಾಸಕಾಂಗ ಹಾಗೂ ಕಾರ್ಯಾಂಗ ಹಸ್ತಕ್ಷೇಪ ಮಾಡುವಂತಿಲ್ಲ. ಅದೇ ರೀತಿ ನ್ಯಾಯಾಂಗದ ತೀರ್ಪನ್ನು ಯಾರು ಕೂಡ ಟೀಕಿಸುವಂತಿಲ್ಲ.

ಸರ್ವೋಚ್ಚ ನ್ಯಾಯಾಂಗದ ತೀರ್ಪಿನಿಂದ ನ್ಯಾಯ ಸಿಕ್ಕಿಲ್ಲ ಎಂದಾದರೆ ಅದೇ ನ್ಯಾಯಾಂಗಕ್ಕೆ ಪುನರ್‌ಪರಿಶೀಲನಾ ಅರ್ಜಿಯನ್ನು ಸಲ್ಲಿಸಲು ಅವಕಾಶವಿದೆ. ಆದರೆ ಇಂದು ಸಂಕುಚಿತ ಮನೋಭಾವ ಹೊಂದಿರುವ ಜನರು, ಮಾಧ್ಯಮಗಳು ಸರ್ವೋಚ್ಚ ನ್ಯಾಯಾಂಗ ಮಾಡಬೇಕಾದ ಕೆಲಸದಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುವುದು ಅವಿವೇಕತನದ ಪರಮಾವಧಿ ಎಂದರೆ ತಪ್ಪಾಗಲಾರದು. ಕಾನೂನನ್ನು ಕೈಗೆತ್ತಿಕೊಳ್ಳುವುದನ್ನು ನೋಡಿದರೆ ನಾವು ಪುನಃ Hobbesian state of natureಗೆ ಅಂದರೆ ರಾಜ್ಯ ಪೂರ್ವ ಪರಿಸ್ಥಿತಿಗೆ ಹಿಂದಿರುಗುತ್ತಿದ್ದೇವೆ ಎಂದು ನನಗೆ ಅನಿಸುತ್ತದೆ.

ಕಳೆದ ಕೆಲವು ವರ್ಷಗಳಿಂದ ಸಂವಿಧಾನದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈ ಸಂವಿಧಾನ ಒಳ್ಳೆಯದ ಅಥವಾ ಕೆಟ್ಟದಾ, ಸರಿಯಾಗಿದೆಯಾ ಅಥವಾ ಇಲ್ಲವಾ. ಈ ಎಲ್ಲಾ ಪ್ರಶ್ನೆಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ಜಾರಿಗೆ ತರುವಾಗ 1950 ರಲ್ಲಿಯೇ ಸಂಸತ್ತಿನಲ್ಲಿ ಈ ಕೆಳಗಿನಂತೆ ಉತ್ತರಿಸಿದ್ದಾರೆ.

ಒಂದು ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಆ ಸಂವಿಧಾನ ಪ್ರಕಾರ ದೇಶವನ್ನು ಆಳಲು ಜನರಿಂದ ಆಯ್ಕೆಯಾದ ವ್ಯಕ್ತಿಗಳು ಕೆಟ್ಟವರಾಗಿದ್ದರೆ, ಆ ಸಂವಿಧಾನ ಕೂಡ ಕೆಟ್ಟದಾಗಿ ಮಾರ್ಪಡುಗೊಳ್ಳಬಹುದು. ಅದೇ ರೀತಿ ಒಂದು ಸಂವಿಧಾನ ಎಷ್ಟೇ ಕೆಟ್ಟದಾಗಿದ್ದರೂ ಆ ಸಂವಿಧಾನ ಪ್ರಕಾರ ದೇಶವನ್ನು ಆಳಲು ಜನರಿಂದ ಆಯ್ಕೆಯಾದ ವ್ಯಕ್ತಿಗಳು ಒಳ್ಳೆಯವರಾಗಿದ್ದರೆ ಆ ಸಂವಿಧಾನ ಕೂಡ ಒಳ್ಳೆಯದಾಗಿ ಮಾರ್ಪಡುಗೊಳ್ಳಬಹುದು.

1955 ಮಾರ್ಚ್ 19 ರಂದು ರಾಜ್ಯ ಸಭೆಯಲ್ಲಿ ಡಾ. ಅನುಪ್ ಸಿಂಗ್ ರವರು ಅಂಬೇಡ್ಕರ್ ರವರಿಗೆ ಈ ಪ್ರಶ್ನೆ ಕೇಳಿದರು, 'ಯಾಕೆ ನೀವು ಭಾರತ ಸಂವಿಧಾನ ಸುಡುವುದರಲ್ಲಿ ಮೊದಲಿಗರು'? ಈ ಪ್ರಶ್ನೆಗೆ ಅಂಬೇಡ್ಕರ್ ರವರ ಉತ್ತರ, ನಾನು ಆ ರೀತಿ ಹೇಳಲು ಕಾರಣ ಈ ರೀತಿ ಇದೆ 'ನಾವೊಂದು ಮಂದಿರವನ್ನು ದೇವರು ಬಂದು ವಾಸಿಸಲಿ ಎಂದು ಕಟ್ಟಿದ್ದೇವೆ. ಆದರೆ ದೇವರು ಬಂದು ಪ್ರತಿಷ್ಠಾಪನೆ

ಆಗುವ ಮೊದಲೇ ದುಷ್ಟರು ಬಂದು ಆ ಸ್ಥಾನವನ್ನು ಸ್ವಾಧೀನ ಮಾಡಿಕೊಂಡರೆ, ಆ ಮಂದಿರವನ್ನೇ ನಾಶಮಾಡದೇ ಬೇರೇನು ನಾವು ಮಾಡಬಹುದು?. ಅಸುರರು ಬಂದು ಆ ಮಂದಿರವನ್ನು ಸ್ವಾಧೀನಪಡಿಸಲಿ ಎಂಬ ಉದ್ದೇಶ ನಮಗೆ ಇರಲಿಲ್ಲ. ದೇವರು ಬಂದು ಆ ಮಂದಿರವನ್ನು ಸ್ವಾಧೀನ ಪಡಿಸಲಿ ಎಂಬುವುದು ನಮ್ಮ ಉದ್ದೇಶವಾಗಿತ್ತು.

ಈ ಕಾರಣಕ್ಕೋಸ್ಕರ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಸಹಾಯಕನಾಗಿ ಸಂವಿಧಾನವನ್ನು ಸುಡುವುದಿದ್ದರೆ ನಾನು ಮೊದಲಿಗನೆಂದೆ. ಡಾ. ಬಿ.ಆರ್ ಅಂಬೇಡ್ಕರ್ ರವರ ಈ ಮೇಲಿನ ಉತ್ತರಕ್ಕೆ ಈ ಕೆಳಗಿನಂತೆ ಕೆ.ಪಿ ಸಿಂಗ್ ರವರು ಪ್ರತಿಕ್ರಿಯೆ ನೀಡಿದರು 'ಮಂದಿರವನ್ನು ನಾಶಮಾಡುವ ಬದಲು ದುಷ್ಟರನ್ನೇ ಸಂಹರಿಸು' ಅದಕ್ಕೆ ಡಾ. ಬಿ.ಆರ್ ಅಂಬೇಡ್ಕರ್ ಈ ರೀತಿ ಉತ್ತರಿಸುತ್ತಾರೆ, 'ನೀವು ಆ ಕೆಲಸವನ್ನು ಮಾಡುವಂತಿಲ್ಲ. ನಮಗೂ ಅಷ್ಟು ಶಕ್ತಿ, ಸಾಮಾರ್ಥ್ಯವಿಲ್ಲ. ನೀವು ಒಂದು ವೇಳೆ ಬ್ರಾಹ್ಮಣ, ಶತಪಥ ಬ್ರಾಹ್ಮಣವನ್ನು ಓದಿದ್ದರೆ ನಿಮಗೆ ತಿಳಿಯುತ್ತದೇನೆಂದರೆ ದೇವರುಗಳು ಅಸುರರ ಕೈಯಲ್ಲಿ ಯಾವಾಗಲೂ ಸೋಲುತ್ತಿದ್ದರು. ಯಾಕೆಂದರೆ ಅಸುರರ ಕೈಯಲ್ಲಿ ಅಮೃತವಿತ್ತು. ಯುದ್ಧದಲ್ಲಿ ದೇವರುಗಳು ಗೆಲ್ಲಬೇಕಾದರೆ ಅಸುರರಲ್ಲಿದ್ದ ಅಮೃತವನ್ನು ತಮ್ಮದಾಗಿಸಬೇಕಿತ್ತು. ಮುಂದುವರಿದು ಅಂಬೇಡ್ಕರ್ ರವರು ಕೆ.ಪಿ ಸಿಂಗ್ ರವರಿಗೆ ಈ ರೀತಿ ಹೇಳ್ತಾರೆ ನನ್ನ ಸ್ನೇಹಿತನೇ ನನಗೆ ಹೇಳು ನಾನು ಸಂವಿಧಾನವನ್ನು ಬರೆದಿದ್ದೇನೆ. ಆದರೆ ಈ ಸಂವಿಧಾನವನ್ನು ಸುಡುವಲ್ಲಿ ನಾನು ಮೊದಲಿಗ ಎಂದು ಹೇಳಲು ನಾನು ಸಿದ್ಧನಿದ್ದೇನೆ. ಆದರೆ ಆ ಕೆಲಸ ನನಗೆ ಬೇಡ. ಆ ಕೆಲಸ ಯಾರಿಗೂ ಹೇಳಿ ಮಾಡಿಸಿದ್ದಲ್ಲ ಅಥವಾ ಸೂಕ್ತವಲ್ಲ. ಹಾಗೇನಿದ್ದರೂ ಒಂದು ವೇಳೆ ನಮ್ಮ ಜನರು ಈ ಸಂವಿಧಾನವನ್ನು ಮುಂದಿಟ್ಟು ಕೊಂಡು ದೇಶವನ್ನು ಆಳುವುದಿದ್ದರೆ. ಅವರು ಜ್ಞಾಪಕದಲ್ಲಿಡಬೇಕಾದ ವಿಚಾರವೇನೆಂದರೆ ಸಂಸತ್ತಿನಲ್ಲಿ ಹಾಗೂ ದೇಶದಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಇನ್ನಿತರ ಅಲ್ಪ ಸಂಖ್ಯಾತರು ಹಾಗೂ ಬಹುಸಂಖ್ಯಾತರಿದ್ದಾರೆ. ಆಳುವ ಬಹುಸಂಖ್ಯಾತರು ಪ್ರತಿಪಕ್ಷ ಅಂದರೆ ರಾಜಕೀಯ ಅಲ್ಪಸಂಖ್ಯಾತರ ಸಲಹೆ, ಸೂಚನೆ, ಅಭಿಪ್ರಾಯಗಳಿಗೆ ಕನಿಷ್ಠ ಸೌಜನ್ಯವನ್ನು ತೋರದೆ, ಅಗೌರವವನ್ನು ವ್ಯಕ್ತಪಡಿಸಿದರೆ ಅದು ಪ್ರಜಾಪ್ರಭುತ್ವಕ್ಕೆ ಮಾಡುವ ಹಾನಿ ಅಥವಾ ಕಗ್ಗೊಲೆ. ಇನ್ನು ಮುಂದುವರಿದು ಅಂಬೇಡ್ಕರ್ ಹೇಳ್ತಾರೆ, ನನಗೆ ಅನಿಸುತ್ತಿದೆ ಈ ಸಂವಿಧಾನ ನಮ್ಮ ದೇಶದಲ್ಲಿ ಕೆಲಸಕ್ಕೆ ಬರುವಂತಹದ್ದು, ಈ ಸಂವಿಧಾನ ನಮ್ಯವಾಗಿದೆ ಹಾಗೂ ಇಡೀ ದೇಶವನ್ನು ಒಟ್ಟಾಗಿ ಇಡುವಷ್ಟು ಬಿಲಿಷ್ಠ, ಯುದ್ಧ ಕಾಲದಲ್ಲಿ ಹಾಗೂ ಶಾಂತಿ ಸಮಯದಲ್ಲಿ.

ನಾನು ಈ ರೀತಿ ಹೇಳಿದರೂ ಕೂಡ ಒಂದು ವೇಳೆ ಈ ಹೊಸ ಸಂವಿಧಾನದ ಆಳ್ವಿಕೆಯಲ್ಲಿ ಏನಾದರೂ ಕೆಟ್ಟದು ಅಥವಾ ತಪ್ಪು ನಡೆದರೆ ಅದಕ್ಕೆ ಕಾರಣ ನಾವು ಕೆಟ್ಟ ಸಂವಿಧಾನವನ್ನು ಹೊಂದಿದ್ದೇವೆ ಅಂತ ಅಲ್ಲ ಬದಲಾಗಿ ಮನುಷ್ಯ ಕೆಟ್ಟವನಾಗಿದ್ದಾನೆ.

✠✠✠

Form IV

Statement about ownership and other particulars about
CHINTHANA BAYALU (Quarterly)

1.	Place of Publication	:	Bantwal, Dakshina Kannada
2.	Periodicity of its publication	:	Quarterly
3.	Printers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
4.	Publishers Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219
5.	Editors Name	:	Reshma G. Bhat
	Nationality	:	Indian
	Address	:	No. 15-109, Modankapu Bantwal Taluk, D.K. - 574 219

6. Names and address of individuals who own the newspaper and partners or sharesholders holding more than one percent of the total capital }

I, Reshma G. Bhat, hereby declare that the particulars given above are true to the best of my knowledge and belief.

Date: 31 Dec 2018

Reshma G. Bhat
(Publisher)

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 7, Issue 1, July-September 2018
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 70

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com